ಸಂಪುಟ: 13 Volume ಸಂಚಿಕೆ: 326 Issue ಪುಟಗಳು 08 Pages ಸೋಮವಾರ 16 ಫೆಬ್ರವರಿ 2026 ₹6 PRGINO.120927 (RNINO: KARKAN/2011/48371) BDR/054/2026-2027 www.mallammanudi.in mallammanudi@gmail.com 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

ಸಂಪಾದಕರು: ರಮೇಶ ರೆಡ್ಡಿ

Mallammanudi Regional News Paper

ಪ್ರಾದೇಶಿಕ ಕನ್ನಡ ದೈನಿಕ


**ಬೆಳಗು**

ಮಹತ್ವಾಕಾಂಕ್ಷೆ ಇಲ್ಲದಬುದ್ಧಿವಂತಿಕೆ ರೆಕ್ಕೆಗಳಿಲ್ಲದ ಹಕ್ಕಿಯಂತೆ.

–ಸಾಲ್ವಡೋರ್ ಡಾಲಿ



ಕೆ ಆರ್ ಪುರಂ ಶಾಸಕರು ಹಾಗೂ ಮಾಜಿ ಸಚಿವರಾದ ಬೈರತಿ ಬಸವರಾಜ್ ಅವರ ಮನೆಗೆ ಭೇಟಿ ನೀಡಿ ಕುಟುಂಬಸ್ಥರಿಗೆ ಧೈರ್ಯ ತುಂಬಿದ ಬಿಜೆಪಿ ರಾಜ್ಯಾಧ್ಯಕ್ಷರಾದ ಬಿ ವೈ ವಿಜಯೇಂದ್ರ ಅವರು ಈ ಸಂದರ್ಭದಲ್ಲಿ ಮಾಜಿ ಉಪಮುಖ್ಯಮಂತ್ರಿಗಳಾದ ಗೋವಿಂದ್ ಕಾರಜೋಳ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಪ್ರೀತಮ್ ಗೌಡ, ರಾಜ್ಯ ಕಾರ್ಯದರ್ಶಿಗಳಾದ ಶರಣು ತಲ್ಲಿಕೆರೆ, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷರಾದ ಎಸ್ ಹರೀಶ್, ಮಾಜಿ ಸಚಿವರಾದ ವರ್ತೂರು ಪ್ರಕಾಶ್, ಕೆ ಆರ್ ಪುರಂ ಅಧ್ಯಕ್ಷರಾದ ಮುನೇಗೌಡ. ಮುಖಂಡರಗಳಾದ ಸಚ್ಚಿದಾನಂದ ಮೂರ್ತಿ ಹಾಗೂ ಪ್ರಮುಖರು ಉಪಸ್ಥಿತರಿದ್ದರು.



ಮಹಾ ಶಿವರಾತ್ರಿ ಅಂಗವಾಗಿ ತಮ್ಮ ತಂದೆಯವರು, ಮಾಜಿ ಪ್ರಧಾನಿಗಳು ಆಗಿರುವ ಶ್ರೀ ಹೆಚ್.ಡಿ. ದೇವೇಗೌಡ ಅವರೊಂದಿಗೆ ಬೆಂಗಳೂರಿನ ಜೆ.ಪಿ. ನಗರದ ಶ್ರೀ ತಿರುಮಲಗಿರಿ ವೆಂಕಟೇಶ್ವರ ದೇವಾಲಯದಲ್ಲಿ ಸರ್ವಶಕ್ತನಾದ ಆ ಪರಮಶಿವನಿಗೆ ಪೂಜೆ ಸಲ್ಲಿಸಿದ ಕೇಂದ್ರ ಸಚಿವರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿ ಅವರು.



ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ತಮ್ಮ ಪುತ್ರಿಯ ವಿವಾಹ ನಿಶ್ಚಿತಾರ್ಥ ಸಮಾರಂಭಕ್ಕೆ ಅಹ್ವಾನ ನೀಡಿದರು.

# ಇಂಡಿಯಾ–ಪಾಕಿಸ್ತಾನ

## ಹೈ ವೋಲ್ಟೇಜ್ ಪಂದ್ಯಾಟ




ಇಲ್ಲಿನಪ್ರೇಮದಾಸಕ್ರೀಡಾಂಗಣದಲ್ಲಿನಡೆಯಲಿರುವ ಪಾಕಿಸ್ತಾನ ವಿರುದ್ಧದ ಟಿ20 ವಿಶ್ವಕಪ್ ಗುಂಪು ಹಂತದ ಪಂದ್ಯವು ಹೈ ವೋಲ್ಟೇಜ್ ಸೃಷ್ಟಿಸಿದೆ. ಈ ಪಂದ್ಯದಲ್ಲಿ ಪಾಕಿಸ್ತಾನದ ಆಟಗಾರರ ಜೊತೆಗೆ ಹ್ಯಾಂಡ್ ಶೇಕ್ ಮಾಡದಿರಲು ಟೀಂ ಇಂಡಿಯಾ ನಿರ್ಧರಿಸಿದೆ. ಪಾಕಿಸ್ತಾನದ ಬಗೆಗಿನಭಾರತದನೋ–ಹ್ಯಾಂಡ್ಶೇಕ್‌ನೀತಿ'ಯಲ್ಲಿ ಯಾವುದೇ ಬದಲಾವಣೆಗಳಿಲ್ಲ ಮತ್ತು ಟಾಸ್ ವೇಳೆ ಹಾಗೂ ಪಂದ್ಯದ ಬಳಿಕ ಭಾರತದ ನಾಯಕ ಸೂರ್ಯಕುಮಾರ್ ಯಾದವ್, ಪಾಕಿಸ್ತಾನದ ಕ್ಯಾಪ್ಟನ್ ಸಲ್ಮಾನ್ ಅಲಿ ಅಘಾ ಅವರಿಗೆ ಕೈಕುಲುಕುವ ಸಾಧ್ಯತೆ ಕಡಿಮೆ ಎನ್ನಲಾಗಿದೆ.

ಟಿ20ಗಳಲ್ಲಿ ಭವಿಷ್ಯ ನುಡಿಯುವುದು ಕಷ್ಟ, ಆದರೆ ಭಾರತ ಉತ್ತಮ ತಂಡ ಮತ್ತು ಅವರನ್ನು ಸೋಲಿಸುವುದು ಸುಲಭವಲ್ಲ. ಅಂತೆಯೇ ಇಲ್ಲಿ ಯಾವುದೂ ಕಷ್ಟವಲ್ಲ.

–ಸೌರವ್ ಗಂಗೂಲಿ
ಮಾಜಿ ಕೆಪ್ಟನ್

## ಪಾಕ್‌ಡಗೌಟ್‌ನಲ್ಲಿಹಾವು

ಸಾಂಪ್ರದಾಯಿಕ ಎದುರಾಳಿಗಳಾದ ಭಾರತ ಮತ್ತು ಪಾಕಿಸ್ತಾನ ತಂಡಗಳು ಭಾನುವಾರ ಕೊಲಂಬೊದ ಆರ್ ಪ್ರೇಮದಾಸ ಕ್ರೀಡಾಂಗಣ ದಲ್ಲಿ ಟಿ20 ವಿಶ್ವಕಪ್ 2026ರ ಗ್ರೂಪ್ ಎ ಪಂದ್ಯದಲ್ಲಿ ಪರಸ್ಪರ ಸೆಣಸಲಿವೆ. ಇದೀಗ ಪಂದ್ಯಕ್ಕೆ ಕೆಲವೇ ದಿನಗಳಿಗೂ ಮುನ್ನ ಪಾಕಿಸ್ತಾನದ ಡಗೌಟ್‌ನಲ್ಲಿ ಹಾವು ಕಾಣಿಸಿಕೊಂಡು ಗಮನ ಸೆಳೆದಿದೆ.















# ಸಂಪತ್ತಿ ಗಿಂತ ಆರೋಗ್ಯಕ್ಕೆ ಪ್ರಾಧಾನ್ಯತೆ ಕೊಡಿ

**ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:**

ಆಧುನಿಕ ಯುಗದಲ್ಲಿ ಮನುಷ್ಯ ಸಂಪತಿಗಿಂತ ಆರೋಗ್ಯಕ್ಕೆ ಪ್ರಾಧಾನ್ಯತೆ ನೀಡಿದಲ್ಲಿ ಸಮಾಧಾನಕರ ಜೀವನ ನಡೆಸಲು ಸಾಧ್ಯ ಎಂದು ಶಿವ ಜಯಂತಿ ಉತ್ಸವ ಸಮಿತಿ ಅಧ್ಯಕ್ಷ ಡಾ.ಗುಂಡೇರಾವ ಶೆಡೋಳೆ ಅಭಿಪ್ರಾಯಪಟ್ಟರು.

ಪಟ್ಟಣದ ಎಪಿಎಮ್‌ಸಿ ಮಾರುಕಟ್ಟೆಯಲ್ಲಿರುವ ವಿಠಲ-ರುಕ್ಮಿಣಿ ಮಂದಿರದ ಆವರಣದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ 396ನೇ ಜಯಂತಿ ಅಂಗವಾಗಿ ಶಿವ ಜಯಂತಿ ಉತ್ಸವ ಸಮಿತಿಯವರು ಆಯೋಜಿಸಿದ ಉಚಿತ ಆರೋಗ್ಯ ತಪಾಸಣೆ ಶಿಬಿರದಲ್ಲಿ ಭಾಗವಹಿಸಿ ಮಾತನಾಡಿದರು.




ಯಾಂತ್ರಿಕ-ತಾಂತ್ರಿಕ ಬಿಡುವಿಲ್ಲದ ಜೀವನದಲ್ಲಿ ರಕ್ತದೊತ್ತಡ, ಮಧುಮೇಹ, ಸಂಧಿವಾತ, ಜೊಯಿಂಟ್ ಪೇನ್ ಕಾಯಿಲೆಗಳು ಸಾಮಾನ್ಯವಾಗಿದ್ದರೂ ನಿರ್ಲಕ್ಷಿಸುವಂತಿಲ್ಲ. ದೇಹದ ಪ್ರಮುಖ ಅಂಗಾಂಗಗಳಾದ ಹೃದಯ, ಕಣ್ಣು, ಕಿವಿ, ನಾಲಿಗೆ, ಹಲ್ಲು, ಕಾಲುಗಳು ಸ್ವಯಂ ಆಗಿ ಚಾಲನೆಯಿದ್ದರೆ ನಿರೋಗಿಯಾಗಿ ಬಾಳಬಹುದು. ಕಾರಣಾಂತರಗಳಿಂದ ದೇವರು ನೀಡಿದ ಅಂಗಾಂಗಗಳು ಕಳೆದುಕೊಂಡರೆ ತಕ್ಷಣವೇ ತಜ್ಞವೈದ್ಯರನ್ನು ಸಂಪರ್ಕಿಸಿ ಪುನ: ಪಡೆದುಕೊಳ್ಳಲು ಸಾಧ್ಯವಿದೆ. ಸಾಮಾನ್ಯವಾಗಿ ಹಿರಿಯ ಜೀವಿಗಳು ಮೇಲಿಂದ ಮೇಲೆ ವೈದ್ಯರ ಸಲಹೆ ಪಡೆಯುವುದು ಅಗತ್ಯ ಎಂದು ಹೇಳಿದರು. ಎಲುಬು-ಕೀಲು ತಜ್ಞರಾದ ಡಾ.ಪ್ರಶಾಂತ ಬಿರಾದಾರ, ಡಾ.ಶಿವಾಜಿ ಗುರ್ದಾಳೆ, ದಂತ ವೈದ್ಯರಾದ ಡಾ.ಪಂಡಿತ ಬಿರಾದಾರ, ಡಾ.ಅನೀಲ ಹಣೆಪಟ್ಟೆ, ಡಾ.ಅಂಬಿಕಾ ಪಾಟೀಲ್, ಡಾ.ವೈಷ್ಣವಿ ಬಾವಗೆ, ಮೂಲವ್ಯಾಧಿ ತಜ್ಞವೈದ್ಯರಾದ ಡಾ.ಕಪೀಲರೆಡ್ಡಿ, ಡಾ.ತಾನಾಜಿ ಉಚ್ಚೆ, ಪ್ರಯೋಗಾಲಯ ತಜ್ಞರಾದ ಡಾ.ಲಕ್ಷೀಕಾಂತ ಐನಾಪುರೆ, ಡಾ.ಅಶ್ವೀನಿ ಹತಂಗಳೆ ಅವರು 106 ರೋಗಿಗಳಿಗೆ ತಪಾಸಣೆ ಮಾಡಿ ಉಚಿತವಾಗಿ ಔಷಧ ನೀಡಿದರು.

ಈ ಸಂದರ್ಭದಲ್ಲಿ ಡಾ.ವಿಲಾಸ ಕನಸೆ, ಡಾ.ಅಮೀತ ಅಷ್ಟೂರೆ, ಡಾ.ಶರತ ತುಕದೆ, ಡಾ.ಉದ್ಧವ ಕನಸೆ, ಪ್ರಮುಖರಾದ ಬಾಲಾಜಿ ತುಕದೆ, ಯೋಗೇಶ ಅಷ್ಟೂರೆ, ದತ್ತುಕುಮಾರ ಮೆಹಕ್ರೆ, ಯಾದವರಾವ ಕನಸೆ, ವೆಂಕಟೇಶ ಶರ್ದೆ, ಕೃಷ್ಣಾ ಪಾಟೀಲ್, ದತ್ತಾತ್ರಿ ಕಾಟಕರ್ ಸೇರಿದಂತೆ ಅನೇಕರಿದ್ದರು.

## ಸಂಪಾದಕೀಯ



ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೋ: 9845028349

### ಆರೋಗ್ಯ ಇಲಾಖೆಯ ನರ್ಸ್‌ಗಳ ಸೇವೆ – ಮೌನ ಹೋರಾಟದ ಮಹಾ ಶಕ್ತಿ

ಸಮಾಜದ ಆರೋಗ್ಯ ವ್ಯವಸ್ಥೆಯ ಹೃದಯವೆಂದರೆ ನರ್ಸ್‌ಗಳು. ವೈದ್ಯರ ಚಿಕಿತ್ಸೆಗೆ ಜೀವ ತುಂಬುವವರು, ರೋಗಿಗಳ ನೋವಿಗೆ ಧೈರ್ಯ ತುಂಬುವವರು, ಆಸ್ಪತ್ರೆಯ ಪ್ರತಿಯೊಂದು ಕ್ಷಣವನ್ನು ಶಿಸ್ತು, ಕಾಳಜಿ ಮತ್ತು ಕರ್ತವ್ಯದೊಂದಿಗೆ ಸಾಗಿಸುವವರು ನರ್ಸ್‌ಗಳೇ. ಆದರೆ ದುರ್ಭಾಗ್ಯವೆಂದರೆ ಅವರ ಸೇವೆ ಅನೇಕ ಬಾರಿ ಮೌನದಲ್ಲೇ ಉಳಿದು ಹೋಗುತ್ತದೆ.

ಬೆಳಿಗ್ಗೆಯಿಂದ ರಾತ್ರಿ ತನಕ, ಕೆಲವೊಮ್ಮೆ ನಿದ್ರೆಯನ್ನೂ ಮರೆತು, ರೋಗಿಗಳ ಆರೈಕೆಯಲ್ಲಿ ತೊಡಗಿರುವ ನರ್ಸ್‌ಗಳು ಕೇವಲ ಕೆಲಸಗಾರರಲ್ಲ – ಅವರು ಮಾನವೀಯತೆಯ ಜೀವಂತ ರೂಪಗಳು. ತಾಯಿಯಂತೆ ಕಾಳಜಿ ವಹಿಸುವ ಕೈಗಳು, ಧೈರ್ಯ ತುಂಬುವ ಮಾತುಗಳು, ನೋವಿನ ಕ್ಷಣದಲ್ಲಿ ನೀಡುವ ಆಶ್ವಾಸನೆ – ಇವೆಲ್ಲವೂ ನರ್ಸ್ ವೃತ್ತಿಯ ಮಹತ್ವವನ್ನು ತೋರಿಸುತ್ತವೆ.

ಗ್ರಾಮೀಣ ಆಸ್ಪತ್ರೆಗಳಿಂದ ಮಹಾನಗರಗಳ ದೊಡ್ಡ ವೈದ್ಯಕೀಯ ಕೇಂದ್ರಗಳವರೆಗೂ ನರ್ಸ್‌ಗಳ ಕೊರತೆಯ ನಡುವೆಯೂ ಅವರು ನಿರಂತರ ಸೇವೆಯಲ್ಲಿ ತೊಡಗಿದ್ದಾರೆ. ಸೌಲಭ್ಯಗಳ ಕೊರತೆ, ದೀರ್ಘ ಕಾರ್ಯಾವಧಿ, ಕಡಿಮೆ ಸಂಬಳದ ನಡುವೆಯೂ ಕರ್ತವ್ಯಕ್ಕೆ ಬೆನ್ನು ತಿರುಗಿಸದೇ ನಿಂತಿರುವುದು ನಿಜಕ್ಕೂ ಶ್ಲಾಘನೀಯ.

ಕೊರೋನಾ ಮಹಾಮಾರಿ ಸಮಯದಲ್ಲಿ ನರ್ಸ್‌ಗಳ ಸೇವೆ ದೇಶಕ್ಕೆ ನಿಜವಾದ ದೇವದೂತಹೆಜ್ಜೆಯಾಗಬೇಕತು. ತಮ್ಮ ಜೀವದ ಭದ್ರತೆಯನ್ನು ಬದಿಗಿಟ್ಟು ಸಾವಿರಾರು ರೋಗಿಗಳನ್ನು ಉಳಿಸಲು ಶ್ರಮಿಸಿದ ಅವರು, ಸಮಾಜದ ಆರೋಗ್ಯ ರಕ್ಷಕರಾಗಿ ಇತಿಹಾಸದಲ್ಲಿ ಸದಾಕಾಲ ಉಳಿಯುವರು.

ಆದರೆ ಪ್ರಶ್ನೆ ಒಂದೇ – ನಾವು ಅವರಿಗೆ ತಕ್ಕ ಗೌರವ ನೀಡುತ್ತಿದ್ದೇವೇ? ಸುರಕ್ಷಿತ ಕೆಲಸದ ಪರಿಸರ, ಸಮರ್ಪಕ ಸಂಬಳ, ಮಾನಸಿಕ ಬೆಂಬಲ ಮತ್ತು ವೃತ್ತಿ ಗೌರವ ನೀಡುವುದು ಸರ್ಕಾರ ಹಾಗೂ ಸಮಾಜದ ಕರ್ತವ್ಯವಾಗಬೇಕು. ನರ್ಸ್‌ಗಳ ಸೇವೆಗೆ ಶಬ್ದದ ಗೌರವವಲ್ಲ, ಕಾರ್ಯರೂಪದ ಗೌರವ ಬೇಕಾಗಿದೆ.

ಆರೋಗ್ಯ ಇಲಾಖೆಯ ನರ್ಸ್‌ಗಳು ಕೇವಲ ಸಿಬ್ಬಂದಿಯಲ್ಲ – ಅವರು ಜೀವ ಉಳಿಸುವ ಯೋಧರು. ಅವರ ಸೇವೆಗೆ ತಲೆಬಾಗುವುದು ಮಾತ್ರ ಸಾಲದು, ಅವರ ಬದುಕನ್ನು ಸುಧಾರಿಸುವ ನೈಜ ಕ್ರಮಗಳು ಅಗತ್ಯ. ಆರೋಗ್ಯಕರ ಸಮಾಜದ ನಿರ್ಮಾಣಕ್ಕೆ ನರ್ಸ್‌ಗಳ ಗೌರವವೇ ಮೊದಲ ಹೆಜ್ಜೆಯಾಗಬೇಕು

## ಬಂಜಾರ ಸಂಸ್ಕೃತಿಯ ರಕ್ಷಕಣೆ ಸೇವಾಲಾಲ ಕೊಡಗೆ ಅನನ್ಯ:ಹನುಮಂತರಾಯ ಕೌಟಗೆ



(ವರದಿ:ಪರಮೇಶ ರಾಂಪುರೆ)

**ಮಲ್ಲಮ್ಮ ನುಡಿ ವಾರ್ತೆ ಕಮಲನಗರ:**

ಬಂಜಾರ ಸಂಸ್ಕೃತಿಯ ರಕ್ಷಕಣೆ ಮತ್ತು ಬಂಜಾರ ಸಮುದಾಯದ ಅಸ್ಮಿತೆ ಮತ್ತು ವಿಶಿಷ್ಟ ಸಂಸ್ಕೃತಿಯನ್ನು ಉಳಿಸುವಲ್ಲಿ ಸಂತ ಸೇವಾಲಾಲ ಅವರ ಕೊಡುಗೆ ಅಪಾರ. ಅವರ ತತ್ವಗಳು ಇಂದಿನ ಯುವ ಪೀಳಿಗೆಗೆ ದಾರಿದೀಪವಾಗಿವೆ ಎಂದು ಇಒ ಹನುಮಂತರಾಯ ಕೌಟಗೆ ಹೇಳಿದರು.

ಪಟ್ಟಣದ ತಹಸೀಲ್ದಾರ್ ಕಚೇರಿಯಲ್ಲಿ ಸಂತ ಸೇವಾಲಾಲ್ ಜಯಂತಿ ಆಚರಣೆ

ಕಮಲನಗರ: ತಾಲ್ಲೂಕು ಆಡಳಿತ ಹಾಗೂ ತಹಸೀಲ್ದಾರ್ ಕಚೇ-ರಿಯ ವತಿಯಿಂದ ಭಾನುವಾರ ಮಹಾನ್ ಕ್ರಾಂತಿಕಾರಿ, ಬಂಜಾರ ಸಮುದಾಯದ ಆರಾಧ್ಯ ದೈವ ಸಂತ ಸೇವಾಲಾಲ್ ಮಹಾರಾಜರ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶಿಕ್ಷಣಕ್ಕೆ ಒತ್ತು ನೀಡಿದರು, ಮಕ್ಕಳು ಉನ್ನತ ಶಿಕ್ಷಣ ಪಡೆದು ಸಮಾಜದ ಮುಖ್ಯವಾಹಿನಿಗೆ ಬರಬೇಕು ಎನ್ನುವುದು ಸೇವಾಲಾಲ್ ಅವರ ಆಶಯವಾಗಿತ್ತು. ಅದನ್ನು ನನಸು ಮಾಡುವುದು ನಮ್ಮೆಲ್ಲರ ಕರ್ತವ್ಯ ಎಂದು ಹೇಳಿದರು.

ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಕಮಲನಗರನ ತಹಸೀಲ್ದಾರ್ ಅಮಿತ ಕುಮಾರ ಕುಲಕರ್ಣಿ ಅವರು ಸೇವಾಲಾಲ ಮಹಾರಾಜರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿದರು.

ಮಾತನಾಡಿ, ಸಂತ ಸೇವಾಲಾಲ್ ಮಹಾರಾಜರು ಕೇವಲ ಒಂದು ಸಮುದಾಯಕ್ಕೆ ಸೀಮಿತವಾದವರಲ್ಲ. ಅವರು ಅಹಿಂಸೆ,

ಶಾಂತಿ ಮತ್ತು ಸಮಾನತೆಯ ಸಂದೇಶವನ್ನು ಜಗತ್ತಿಗೆ ಸಾರಿದ ಮಹಾನ್ ಮಾನವತಾವಾದಿ, ಸಮಾಜದಲ್ಲಿರುವ ಅನಿಷ್ಟ ಪದ್ಧತಿಗಳನ್ನು ಹೋಗಲಾಡಿಸಿ, ಶಿಸ್ತುಬದ್ಧ ಜೀವನ ನಡೆಸುವಂತೆ ಅವರು ನೀಡಿದ ಬೋಧನೆಗಳು ಸಾರ್ವಕಾಲಿಕವಾಗಿ ಪ್ರಸ್ತುತವಾಗಿವೆ," ಎಂದು ಹೇಳಿದರು. ಈ ಸಂದರ್ಭದಲ್ಲಿ ತಹಸೀಲ್ದಾರ ಕಚೇರಿ ಸಿಬ್ಬಂದಿ ಮತ್ತು ಬಂಜಾರ ಸಮುದಾಯದ ಪ್ರಮುಖರು ಸಾರ್ವಜನಿಕರು ಉಪಸ್ಥಿತರಿದ್ದರು.

## ಮನೆ ಮನೆಯಲ್ಲಿ ಮೊಳಗಿದ ಓಂ ನಮಃ ಶಿವಾಯ ಮಂತ್ರ

• **ಮಲ್ಲಮ್ಮ ನುಡಿ ವಾರ್ತೆ ಕಮಲನಗರ:**

ಪವಿತ್ರ ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ ತಾಲೂಕಿನದಂತ್ಯ ಭಕ್ತಿ ಸಂಭ್ರಮ ಮನೆ ಮಾಡಿತು, ದೇವಾಲಯಗಳಲ್ಲಿ ವಿಶೇಷ ಪೂಜೆಗಳು ಹಾಗೂ ಸಂಜೆ ಹೊತ್ತು 'ಮನೆ ಮನೆಯಲ್ಲಿ ಇಷ್ಟಲಿಂಗ ಪೂಜೆ' ಕಾರ್ಯಕ್ರಮವು ಅತ್ಯಂತ ಅರ್ಥಪೂರ್ಣವಾಗಿ ಜರುಗಿತು. ಈ ಸಂದರ್ಭದಲ್ಲಿ ಅರ್ಚಕ ಮಹೇಶ ಪುರಾಣಿಕ ಮಾತನಾಡಿ, ಭಕ್ತರು ಶಿವಲಿಂಗಕ್ಕೆ ಅಭಿಷೇಕ ಮಾಡಿ, ಬಿಲ್ವಪತ್ರೆಯನ್ನು ಅರ್ಪಿಸಿ, ರಾತ್ರಿ ಜಾಗರಣೆ ಮತ್ತು ಉಪವಾಸ ಮಾಡುತ್ತಾರೆ. ಇದು ಅಜ್ಞಾನವನ್ನು ಹೋಗಲಾಡಿಸಿ ಜ್ಞಾನವನ್ನು ಪಡೆಯುವ ಹಬ್ಬವೆಂದು ಹೇಳಿದರು.

ಸಾಮೂಹಿಕ ಪೂಜೆಯಲ್ಲಿ ಕುಟುಂಬದ ಸದಸ್ಯರೆಲ್ಲರೂ ಒಟ್ಟಾಗಿ ಕುಳಿತು ಕರಸ್ಥಲದಲ್ಲಿ ಲಿಂಗವನ್ನಿಟ್ಟುಕೊಂಡು ಏಕಾಗ್ರತೆಯಿಂದ ಪೂಜೆ ಸಲ್ಲಿಸಿದರು.

ಪವನ ರಾಂಪುರೆ, ರೇಣುಕಾ, ನಿರ್ಮಲಾ ಲಿಂಗ ಪೂಜೆ ಮಾಡುವುದನ್ನು ಚಿತ್ರದಲ್ಲಿ ಕಾಣಬಹುದು.



## ಭಕ್ತರ ನಡುವೆ ಸಂಪನ್ನಗೊಂಡ ಶ್ರೀ ವೀರಭದ್ರೇಶ್ವರ ಲಘು ರಥೋತ್ಸವ



• **ಮಲ್ಲಮ್ಮ ನುಡಿ ವಾರ್ತೆ ಕುಕನೂರ :**

ಭಕ್ತ ವೃಂದದ ನಡುವೆ ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವದ ಪ್ರಯುಕ್ತ ಪ್ರತಿ ವರ್ಷದಂತೆ ಈ ವರ್ಷವೂ ಸಹ ಲಘು ರಥೋತ್ಸವ ಸಂಪನ್ನಗೊಂಡಿತು. ತಾಲೂಕಿನ ಮಂಡಲಗಿರಿ ಗ್ರಾಮದ ಆರಾಧ್ಯ ದೈವ ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವ 2026ರ ಪಂಚ ಕಳಸ ಮಹಾ ರಥೋತ್ಸವ ಫೆಬ್ರವರಿ 17ರ ಮಂಗಳವಾರ ಜರುಗಲಿದ್ದು ಜಾತ್ರಾ ಮಹೋತ್ಸವದ ಪ್ರಯುಕ್ತ ಭಾನುವಾರ ಮಹಾಶಿವರಾತ್ರಿಯ ದಿನದಂದು ಬೆಳಿಗ್ಗೆ ಬ್ರಾಹ್ಮಿ ಮುಹೂರ್ತದಲ್ಲಿ ಶ್ರೀ ವೀರಭದ್ರೇಶ್ವರನಿಗೆ ರುದ್ರಾಭಿಷೇಕ ನಂತರ ಬಸವಪಟ್ಟ ಮೆರವಣಿಗೆ, ವಿಶ್ವಕರ್ಮರ ಮನೆಯಿಂದ ರಥೋತ್ಸವದ ಪಂಚ ಕಳಸಗಳನ್ನು ಧಾರ್ಮಿಕ ವಿಧಿ ವಿಧಾನಗಳೊಂದಿಗೆ ದೇವಸ್ಥಾನಕ್ಕೆ ಬರಮಾಡಿಕೊಂಡು, ಹೂಗಾರ ಮನೆತನದ ಮನೆಯವರಿಂದ ಹೂಗಳ ಕುಂಡಲವನ್ನು ದೇವಸ್ಥಾನಕ್ಕೆ ತಂದು ಸಂಜೆಯ ವೇಳೆಗೆ ಲಘು ರಥೋತ್ಸವವನ್ನು ವಿಜೃಂಭಣೆಯಿಂದ ನೆರವೇರಿಸಲಾಯಿತು. ಮಧ್ಯಾಹ್ನ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಆವರಣದಲ್ಲಿ ಜಾತ್ರಾ ಮಹೋತ್ಸವದ ಕಮಿಟಿ ವತಿಯಿಂದ ಅನ್ನದಾಸೋಹದ ಮಹಾಪ್ರಸಾದ ವ್ಯವಸ್ಥೆಯನ್ನು ಆಯೋಜಿಸಲಾಯಿತು. ಈ ವೇಳೆಯಲ್ಲಿ ಭಕ್ತರು ವೀರಭದ್ರ ಸ್ವಾಮಿಗೆ ತಮ್ಮ ಹರಕೆ ಇಷ್ಟಾರ್ಥಗಳನ್ನು ಈಡೇರಿಸಿ ಸ್ವಾಮಿಯ ಕೃಪೆಗೆ ಪಾತ್ರರಾದರು.



ಕಮಲನಗರ: ಮಹಾ ಶಿವರಾತ್ರಿ ಹಬ್ಬದ ನಿಮಿತ್ಯ ಶ್ರೀಮತಿ ಸಪ್ನಾ ಗಂಡ ಪಂಕಜ ರಾಂಪುರೆ ಅವರ ಮನೆಯಲ್ಲಿ ಹೂವಿನಿಂದ ಮಾಡಿದ ಶಿವಲಿಂಗ ಪಕ್ಕದಲ್ಲಿ ಅವರ ಪುಟಾಣಿ ಮಗು ಶೌರ್ಯ ರಾಂಪುರೆ ದೇವರಿಗೆ ಪುಷ್ಪಆಚರಣೆ ಮಾಡುವ ದ್ರಶ್ಯ ಎಲ್ಲರ ಗಮನ ಸೆಳೆಯಿತು.

## ಸಂಭ್ರಮದಿಂದ ಜರುಗಿದ ಕೈಲಾಸನಾಥೇಶ್ವರ ಪಲ್ಲಕ್ಕಿ ಉತ್ಸವ

**ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ:**

ಬೀದರ್-ಕಲಬುರಗಿ ರಾಜ್ಯ ಹೆದ್ದಾರಿ ಮೇಲಿರುವ ಹಳ್ಳಿಖೇಡ (ಕೆ) ಗ್ರಾಮದ ಕೈಲಾಸನಾಥೇಶ್ವರ 26ನೇ ಜಾತ್ರಾ ಮಹೋತ್ಸವ ನಿಮಿತ್ತ ಕೈಲಾಸನಾಥೇಶ್ವರ ಪಲ್ಲಕ್ಕಿ ಉತ್ಸವ ಹಾಗೂ ಭವ್ಯ ಮೆರವಣಿಗೆ ಭಕ್ತಾದಿಗಳ ಜಯಘೋಷಗಳ ಮಧ್ಯೆ ಸಡಗರ-ಸಂಭ್ರಮದಿಂದ ನಡೆಯಿತು.

ಹರಹರ ಮಹಾದೇವ, ಕೈಲಾಸನಾಥೇಶ್ವರ ಮಹಾರಾಜಕೀ ಜಯ ಎಂಬ ಭಕ್ತಾದಿಗಳು ಜೈಘೋಷ ಹಾಕುವ ಮೂಲಕ ದರ್ಶನ ಪಡೆದರು. ಜಾತ್ರಾ ಮಹೋತ್ಸವ ಮತ್ತು ಮಹಾಶಿವರಾತ್ರಿ ನಿಮಿತ್ತ ಮಂದಿರ ಹಾಗೂ ಗ್ರಾಮದ ಪ್ರಮುಖ ಬೀದಿಗಳಲ್ಲಿ ವಿದ್ಯುತ್ ದೀಪ ಅಲಂಕಾರ ಹಾಗೂ ಬಾಳೆದಿಂಡು, ಕಬ್ಬು, ಬಣ್ಣ ಬಣ್ಣದ ರಂಗೋಲಿಯಿಂದ ನವ ವಧುವಿನಂತೆ ಇಡೀ ಗ್ರಾಮವೇ ಸಿಂಗಾರಗೊಂಡಿತ್ತು. 58 ಅಡಿ ಎತ್ತರದ ಮತ್ತು ಜಿಲ್ಲೆಯಲ್ಲಿ ಬೃಹತ್ ಆಕಾರದ ಶಿವನ ಮೂರ್ತಿಗೆ ಬೆಳಗ್ಗೆ ವಿಶೇಷ ಪೂಜೆ, ಮಹಾಭಿಷೇಕ ಅಲಂಕಾರಕ ಪೂಜೆ ನಂತರ ಮಹಾಮಂಗಳಾರತಿ ಜರುಗಿತು. ಮಂದಿರದಿಂದ ಪ್ರಾರಂಭವಾದ ಪಲ್ಲಕ್ಕಿ ಮೆರವಣಿಗೆಯೂ ಗ್ರಾಮದ ಪ್ರಮುಖ ಬೀದಿಗಳ ಮೂಲಕ ಮಂದಿರಕ್ಕೆ ತಲುಪಿತು. ಮೆರವಣಿಗೆಯಲ್ಲಿ 101 ಮುತ್ತೈದೆಯರಿಂದ ಪೂರ್ಣ ಕುಂಭ ಕಳಸ ಹೊತ್ತುಕೊಂಡು ಮಂದಿರದ ವರೆಗೆ ಹೆಜ್ಜೆ ಹಾಕಿದರು.





ವಿಶೇಷ ಡೊಳ್ಳು ಕುಣಿತ ಮತ್ತು ಕಲಾ ಪ್ರದರ್ಶನ, ಪುರವಂತರ ಸೇವೆ, ಲಂಬಾಣಿ ಮಹಿಳೆಯರ ಲಂಬಾಣಿ ಹಾಡಿನೊಂದಿಗೆ ನೃತ್ಯ, ಜಾನಪದ ಕಲಾ ತಂಡಗಳ ವಿಶೇಷ ನೃತ್ಯ, ವಿವಿಧೆಡೆಯಿಂದ ಆಗಮಿಸಿದ್ದ ಭಜನಾ ತಂಡಗಳು ಹಾಗೂ ವಾದ್ಯ ಮೇಳಗಳು ಮೆರವಣಿಗೆಯಲ್ಲಿ ನೋಡುಗರ ಗಮನ ಸೆಳೆದವು. ಭಕ್ತಾದಿಗಳು ಟೆಂಗು ಕರ್ಪೂರ ನೈವಿದ್ಯ ಅರ್ಪಿಸಿ ದರ್ಶನ ಪಡೆದರು.

ಕೈಲಾಸನಾಥೇಶ್ವರ ದೇವಸ್ಥಾನಕ್ಕೆ ಶಾಸಕ ಸಿದ್ದಲಿಂಗಪ್ಪಾ ಪಾಟೀಲ, ವಿಧಾನ ಪರಿಷತ್ ಸದಸ್ಯ ಭೀಮರಾವ ಪಾಟೀಲ ಪತ್ನಿ ವಿದ್ಯಾ ಪಾಟೀಲ, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ಲಿಂಗರಾಜ್ ಅರಸ್, ಸಂತೋಷ ಪಾಟೀಲ, ಗಣೇಶ ಪಾಟೀಲ, ಸತೀಷ ಸಂಘನ್, ನವೀನ ಬತಲಿ, ಮನ್ನಾಎಖ್ಖೇಳಿ ಪಿಎಸ್ಐ ಮಹೇಂದ್ರಕರ್,

ಜಾತ್ರಾ ಮಹೋತ್ಸವ ಸಮಿತಿಯ ಶಿವಪುತ್ರಪ್ಪ ವಾರದ, ಮೋಹನ ವಾರದ, ಪ್ರಮುಖರಾದ ಸುಭಾಷ ವಾರದ್, ಸುಭಾಷ ಚಿಲಶೆಟ್ಟಿ, ರಮೇಶ ವಾರದ್, ಉದಯಕುಮಾರ ವಾರದ್, ಅಣ್ಣೆಪ್ಪ ರಟಕಲ್, ಭಕ್ತರಾಜ ಚಿತ್ತಾ-ಕೋಟೆ, ಮೈಲಾರಿ ಬುಕ್ಕಾ, ಪ್ರಕಾಶ ಭೌಗಿ, ಭೀಮಶಾ ಕೋರಿ, ಪತ್ರಿಕಾ ವಿತರಕ ಕರಬಸಯ್ಯ ಸ್ವಾಮಿ ಮಠಪತಿ, ಇಂದ್ರಕರಣ ಬಿರಾದಾರ, ಭೀಮಶಾ ಇಂಡಿ, ಬೋಮ್ಮಯ್ಯ ಹೂಗಾರ, ಈರಣ್ಣ ಧನ್ನಗಾರ, ಶರಣಪ್ಪ, ಮಲ್ಲಿಕಾರ್ಜುನ ಚಿಕ್ಕಮಠ, ಶಿವಕುಮಾರ ಲಕ್ಕಾ, ವೀರಣ್ಣ ಇಂಡಿ, ಶಿವರಾಜಪ್ಪ ಹೊನ್ನಳ್ಳಿ, ನಾಗಣ್ಣ ಚಿಕ್ಕಪಾಟೀಲ್, ಪರಮೇಶ ಪಿ.ಎಸ್., ಸಂತೋಷ ಲಕ್ಕಾ, ತುಕರಾಮ್ ಹಡಪದ, ಆಶ್ರಯ ದೀಪ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷರು ಉಪಾಧ್ಯಕ್ಷರು ಸದಸ್ಯರು ಅನೇಕರಿದ್ದರು. ದೇವಸ್ಥಾನಕ್ಕೆ ಬಂದಂತಹ ಭಕ್ತಾದಿಗಳಿಗೆ ಬೆಲ್ಲದ ಚಕ್ಕೆ ವಿತರಿಸಿದರು. ವಿಶೇಷವಾಗಿ ಅನ್ನದಾಸೋಹ ಏರ್ಪಡಿಸಲಾಯಿತು. ಈ ಸಂದರ್ಭದಲ್ಲಿ ಭಕ್ತರು ಅನ್ನ ದಾಸೋಹದಲ್ಲಿ ಪಾಲ್ಗೊಂಡು ಪ್ರಸಾದ

# ಇಜೇರಿ : ಸೌಕರ್ಯ ವಂಚಿತ ಅಲ್ಪಸಂಖ್ಯಾತರ ವಸತಿ ನಿಲಯ : ದೂರು


**ಮಲ್ಲಮ್ಮ ನುಡಿ ವಾರ್ತೆ ಯಡ್ರಾಮಿ :** ತಾಲೂಕಿನ ಇಜೇರಿ ಗ್ರಾಮದಲ್ಲಿರುವ ಡಾ.ಮೌಲಾನ ಅಬ್ದುಲ್ ಕಲಾಂ ಆಜಾದ್ ಅಲ್ಪಸಂಖ್ಯಾತರ ಬಾಲಕರ ವಸತಿ ನಿಲಯದಲ್ಲಿ ಅವ್ಯವಸ್ಥೆ ಮತ್ತು ಮೂಲಭೂತ ಸೌಕರ್ಯ ಕೊರತೆ ಹೆಚ್ಚಾಗಿದ್ದು ವಿದ್ಯಾರ್ಥಿಗಳು ಪರಿತಪಿಸುವಂತಾಗಿದೆ.

ವಿದ್ಯಾರ್ಥಿಗಳು ದಿನನಿತ್ಯ ಬಳಸುವಂತಹ ಸರಿಯಾದಂತಹ ಶೌಚಾಲಯ ಕುಡಿಯುವ ನೀರಿನ ವ್ಯವಸ್ಥೆ ಮತ್ತು ವಿದ್ಯಾರ್ಥಿಗಳಿಗೆ ನೀಡುವಂತಹ ಸೂಚಿ ಕಿಟ್ಟುಗಳು ಬೆಡ್ ಮತ್ತು ಹಾಸಿಗೆ ಈ ಎಲ್ಲಾ ಸೌಲಭ್ಯಗಳು ಮರೀಚಿಕೆಯಾಗಿದೆ.

ನಮ್ಮ ಹಾಸ್ಟೆಲ್ ನಲ್ಲಿ ನೂರಾರು ಸಮಸ್ಯೆಗಳಿದ್ದು ನಮ್ಮ ಆರೋಗ್ಯದಲ್ಲಿ ಸಮಸ್ಯೆ ಆಗಿದೆ ಎಂದು ವಾರ್ಡನ್ ಬಳಿ ಹೇಳಿದರೆ ನನಗೆ ಊಟದ ಬಗ್ಗೆ ಮಾತ್ರ ಕೇಳಿ ಬೇರೆ ಯಾವುದೇ ವಿಚಾರಗಳು ನನಗೆ ಹೇಳಬೇಡಿ ಎಂದು ಹಾಸ್ಟೆಲ್ ವಾರ್ಡನ್ ಹೇಳುತ್ತಾರೆ ಅಂತಾರೆ ಮಕ್ಕಳು.

> ನನಗೆ ಒತ್ತಾಯಪೂರ್ವಕವಾಗಿ ಹಾಸ್ಟೆಲ್ ವಾರ್ಡನ್ ಮಾಡಿದ್ದಾರೆ ನಾನೇನು ಮಾಡಲಿ ಏನೇ ಸಮಸ್ಯೆ ಇದ್ದರೂ ತಾಲೂಕ ಅಧಿಕಾರಿಗಳನ್ನು ಕೇಳಿ
>
> ವಿಶ್ವರಾಜ ಹಾಸ್ಟೆಲ್ ವಾರ್ಡನ್
>
> ನಮ್ಮ ಹಾಸ್ಟೆಲ್ಗಳಿಗೆ ಸರ್ಕಾರದಿಂದ ಎರಡು ವರ್ಷದಿಂದ ಯಾವುದೇ ಕಿಟ್ಟಗಳನ್ನು ಬಂದಿಲ್ಲ ನಾನು ಮೇಲಾಧಿಕಾರಿಗಳಿಗೆ ತಿಳಿಸಿದ್ದೇನೆ ಇನ್ನು ಎರಡು ತಿಂಗಳಲ್ಲಿ ಕಿಟ್ ಬರುತ್ತವೆ
>
> ಹುಲಿಕಂಠರಾಯ
> ತಾಲೂಕ ಅಧಿಕಾರಿಗಳು

ತಾಲೂಕ ಅಧಿಕಾರಿಗಳಾದ ಹುಲಿಕಂಠರಾಯ ಸರ್ ಅವರಿಗೆ ಹಲವು ಬಾರಿ ಹೇಳಿದ್ದೇವೆ ಅವರು ಮಾಡೋಣ ನೋಡೋಣ ಸರಕಾರದಿಂದ ಇನ್ನೂ ಯಾವುದೇ ಸೌಲತ್ತನ್ನು ಬಂದಿಲ್ಲ ಬಂದ್ರೆ ನಿಮಗೆ ಕೊಡುತ್ತೇನೆ ಎಂದು ಹೇಳಿ ಹೋಗುತ್ತಾರೆ ಹಾಗಾದರೆ ನಮ್ಮ ಸಮಸ್ಯೆಗಳು ಯಾರತ್ರ ಹೇಳೋಣ ಎಂದು ತಮ್ಮ ಅಳಲನ್ನು ವಿದ್ಯಾರ್ಥಿಗಳು ತೋಡಿಕೊಂಡರು. ನಾವು ರಾತ್ರಿ ವೇಳೆಯಲ್ಲಿ ಮನೆಗೆ ಹೋಗುತ್ತಿರುವಾಗ ಹಾಸ್ಟೆಲ್ ನಲ್ಲಿದ್ದ ಒಬ್ಬ ವಿದ್ಯಾರ್ಥಿಯು ವಾಂತಿ ಬೇದಿಯಿಂದ ಬಳಲುತ್ತಿದ್ದ ಆ ವಿದ್ಯಾರ್ಥಿಯನ್ನು ಕೇಳಿದರೆ ನನಗೆ ಹುಷಾರಿಲ್ಲ ಎಂದು ಹೇಳಿದ ತಕ್ಷಣವೇ ಹಾಸ್ಟೆಲ್ ವಾರ್ಡನ್ನು ಅವರನ್ನು ಫೋನಿನ ಮುಖಾಂತರ ಸಂಪರ್ಕ ಮಾಡಿದರೆ ಫೋನ್ ಎತ್ತಿರುವುದಿಲ್ಲ ನಂತರದಲ್ಲಿ ನಾವು ಸ್ಥಳೀಯ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆಯನ್ನು ಕೊಡಿಸಿ ಕಳಿಸಿದ್ದೆವು ಎಂದು ಸ್ಥಳೀಯರು ಆದ ಕಾಶಿನಾಥ್ ಹೇಳುತ್ತಾರೆ. ಆದರೆ ಮರುದಿನ ಹಾಸ್ಟೆಲ್ ವಾರ್ಡನ್ ಆಗಿರುತಕ್ಕಂತಹ ವಿಶ್ವರಾಜ್ ಅವರು ವಿದ್ಯಾರ್ಥಿಗಳಿಗೆ ಗದರಿಸಿದರಂತೆ ನಿಮಗೆ ಯಾಕೆ ಬೇಕು ನಾವು ಇಲ್ವಾ ಅಂದರು ರಾತ್ರಿ ವೇಳೆಯಲ್ಲಿ ವಿದ್ಯಾರ್ಥಿಗಳಿಗೆ



ಯಾವುದೇ ತೊಂದರೆಯಾದರೆ ಅವರ ಪರಿಸ್ಥಿತಿ ಏನಾಗಬಹುದು ಎನ್ನುವ ಸಣ್ಣ ವಿಚಾರ ಕೂಡ ತಿಳಿಯದನೆ



ವಿದ್ಯಾರ್ಥಿಗಳ ಎದುರು ಅಹಂಕಾರದಲ್ಲಿ ಮಾತನಾಡಿದ್ದಾರೆ. ವಿಶ್ವರಾಧ್ಯ ಅವರನ್ನು ಮರುದಿನ ಕೇಳಿದರೆ




ನನಗೆ ತಾಲೂಕ ಅಧಿಕಾರಿಗಳು ಎಷ್ಟು ಹೇಳಿದ್ದಾರೋ ಅಷ್ಟು ಮಾಡುತ್ತೇನೆ ಬೇರೆ ಯಾವುದೋ ಕೆಲಸ ನಾನು ಮಾಡುವುದಿಲ್ಲ ಈ ಕೆಲಸ ಬೇಡವೆಂದು ಹೇಳಿದೆ ಆದರೆ ಒತ್ತಾಯಪೂರ್ವಕವಾಗಿ ಈ ಕೆಲಸವನ್ನು ನೀಡಿದ್ದಾರೆ ನಾನೇನು ಮಾಡಲಿ ಎಂದು ಹೇಳಿದರು. ತಾಲೂಕಾ ಅಧಿಕಾರಿಗಳನ್ನು ಫೋನ್ ಕರೆ ಮಾಡುವ ಮುಖಾಂತರ ಅವರನ್ನ ಪ್ರಶ್ನಿಸಿದರೆ ನಮ್ಮ ಹಾಸ್ಟೆಲ್ಗಳಿಗೆ ಸರ್ಕಾರದಿಂದ ಎರಡು ವರ್ಷದಿಂದ ಯಾವುದೇ ಕಿಟ್ಗಳನ್ನು ಬಂದಿಲ್ಲ ನಾನು ಮೇಲಾಧಿಕಾರಿಗಳಿಗೆ ತಿಳಿಸಿದ್ದೇನೆ ಇನ್ನು ಎರಡು ತಿಂಗಳಲ್ಲಿ ಕಿಟ್ ಬರುತ್ತವೆ ಎಂದು ಹೇಳಿದರು

# ಕೆಂಭಾವಿಗೆ ಮಾ7 ರಂದು ಸೋಮನಾಥ ಜ್ಯೋತಿರ್ಲಿಂಗ

• ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ:

ಒಂದು ಸಾವಿರ ವರ್ಷಗಳ ನಂತರ ಸೌರಾಷ್ಟ್ರ ಸೋಮನಾಥನ ದಿವ್ಯ ಜ್ಯೋತಿರ್ಲಿಂಗ ದರ್ಶನ ಉತ್ತರ ಕರ್ನಾಟಕದಲ್ಲಿ ನಡೆಯಲಿದೆ ಎಂದು ಆರ್ಟ್ ಆಫ್ ಲೀವಿಂಗ್‌ನ ಯೋಗ ಗುರೂಜಿ ಎಸ್.ಎಚ್.ರೆಡ್ಡಿ ಹೇಳಿದರು.



ಪಟ್ಟಣದ ಭೂಕೈಲಾಸ ಶ್ರೀ ಭೋಗೇಶ್ವರ ದೇವಸ್ಥಾನದಲ್ಲಿ ಶ್ರೀ ಸೋಮನಾಥ ಜೋತಿರ್ಲಿಂಗ ಕೆಂಭಾವಿ ಪಟ್ಟಣಕ್ಕೆ ಆಗಮನದ ಕುರಿತು ಕರೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಮಾ. 5 ರಿಂದ 7 ರವರೆಗೆ ಶ್ರೀ ಸೋಮನಾಥ ಜೋತಿರ್ಲಿಂಗ ಯಾದಗಿರಿ ಜಿಲ್ಲೆಯಲ್ಲಿ ಭಕ್ತರ ದರ್ಶನಕ್ಕೆ ಸಿಗಲಿದೆ. ಮಾ. 5 ರಂದು ಯಾದಗಿರಿ ನಗರದಲ್ಲಿ. ಮಾ. 6 ರಂದು ಶಹಾಪುರ ಹಾಗೂ ಸುರಪುರದಲ್ಲಿ ಹಾಗೂ ಮಾ. 7 ರಂದು ಕೆಂಭಾವಿಗೆ ಆಗಮಿಸಿ ಇಲ್ಲಿಂದ ಹುಣಸಗಿ ಪಟ್ಟಣಕ್ಕೆ ಪ್ರಯಾಣಿಸಲಿದೆ ಎಂದು ಹೇಳಿದರು.

ಆರ್ಟ್ ಆಫ್ ಲೀವಿಂಗ್ ಶಿಕ್ಷಕಿ ಶಿಲ್ಪಾ ಅವಂಟಿ ಮಾತನಾಡಿ, ಮಾ.7 ರಂದು ಬೆಳಿಗ್ಗೆಯಿಂದ ಮಧ್ಯಾಹ್ನದ ವರೆಗೆ ಕೆಂಭಾವಿ ಪಟ್ಟಣದಲ್ಲಿ ಜ್ಯೋತಿರ್ಲಿಂಗದ ದರ್ಶನವಿದೆ. ಜ್ಯೋತಿರ್ಲಿಂಗಕ್ಕೆ ಸತಿ–ಪತಿಗಳು ರುದ್ರಾಭಿಷೇಕ ಮಾಡುವ ಅವಕಾಶವಿರಲಿದೆ. ಶ್ರೀ ಭೋಗೇಶ್ವರ ದೇವಸ್ಥಾನದಲ್ಲಿ ಪೂಜಾ ಕೈಂಕರ್ಯಗಳು ಜರುಗಲಿದೆ. ಈ ಭಾಗದ ಎಲ್ಲ ಭಕ್ತಾಧಿಗಳು ಆಗಮಿಸಿ ದರ್ಶನ ಪಡೆದು ಪುನೀತರಾಗಬೇಕು ಎಂದು ತಿಳಿಸಿದರು.

ವೇದಮೂರ್ತಿ ಚನ್ನಯ್ಯ ಸ್ವಾಮಿ ಚಿಕ್ಕಮಠ, ಪ್ರಮುಖರಾದ ಲಿಂಗನಗೌಡ ಮಾಲಿಪಾಟೀಲ, ಬಸವರಾಜ ಬೂದಿಹಾಳ, ಸುಮಿತ್ರಪ್ಪ ಸಾಹು ಅಂಗಡಿ, ಮೋಹನರೆಡ್ಡಿ ಡಿಗ್ಗಾವಿ, ಸಂಗಣ್ಣ ತುಂಬಗಿ, ಗುಡದಯ್ಯ ದಾವಣಗೇರಿ, ಎಸ್.ಬಿ.ಅಂಗಡಿ, ಮಲ್ಲು ಅಂಗಡಿ, ಚಂದ್ರಮೌಳಿ ಮಾಲಿಪಾಟೀಲ, ಪರಶುರಾಮ ನಾರಾಯಣಕರ್, ವೀರಣ್ಣ ಕಲಕೇರಿ, ಹಣಮಂತ ಪಡಸಾಲಿ, ಸುಗುರಯ್ಯ ಇಂಡಿ, ದೇವು ಹಡಪದ, ಮಹಾಂತೇಶ ಅಂಗಡಿ, ಡಿ.ಸಿ.ಪಾಟೀಲ ಸೇರಿದಂತೆ ಇತರರಿದ್ದರು.

# ಠಾಣಾ ಕುಶುನೂರ ಪೊಲೀಸ್ ಠಾಣೆಯಲ್ಲಿ ಸಂತ ಸೇವಾಲಾಲ ಜಯಂತಿ ಆಚರಣೆ

ಮಲ್ಲಮ್ಮ ನುಡಿ ವಾರ್ತೆ

ಕಮಲನಗರ :

ಠಾಣಾ ಕುಶುನೂರ ಪೊಲೀಸ್ ಠಾಣೆಯಲ್ಲಿ ಭಾನುವಾರ ಬಂಜಾರ ಸಮುದಾಯದ ಆರಾಧ್ಯ ದೈವ, ಅಹಿಂಸಾ ಮಾರ್ಗದರ್ಶಕ ಸಂತ ಶ್ರೀ ಸೇವಾಲಾಲ ಮಹಾರಾಜರ ಜಯಂತಿಯನ್ನು ಅತ್ಯಂತ ಶ್ರದ್ಧಾ ಭಕ್ತಿ ಹಾಗೂ ಸಡಗರದಿಂದ ಆಚರಿಸಲಾಯಿತು.



ಠಾಣಾ ಎ.ಎಸ್.ಐ ಗಣಪತಿ ಅವರು ಭಾವಚಿತ್ರಕ್ಕೆ ಪೂಜೆ ಮಾಡಿ ಸಂತ ಸೇವಾಲಾಲರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ದೀಪ ಬೆಳಗುವ ಮೂಲಕ ಗೌರವ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಠಾಣಾ ಕುಶುನೂರ ಪೊಲೀಸ್ ಠಾಣೆಯ ಸಿಬ್ಬಂದಿ ವರ್ಗದವರು, ಸುಧಾ–ಕರಾದ ಮಹೇಶ, ಮಲ್ಲಿಕಾರ್ಜುನ ಸೇರಿದಂತೆ ಇನ್ನಿತರ ಇದ್ದರು.

# ಅಭಿನಂದನಾ ಸಮಾರಂಭ ಇಂದು

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ.

ಇಲ್ಲಿಯ ಹಿರೇಮಠ ಸಂಸ್ಥಾನದ ಮತ್ತು ಅಭಿನಂದನಾ ಸಮಿತಿ ವತಿಯಿಂದ ಪಟ್ಟಣದ ಚನ್ನಬಸವಾಶ್ರಮ ಪರಿಸರದಲ್ಲಿ ಸೋಮವಾರ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ರಾಷ್ಟ್ರೀಯ ಅಧ್ಯಕ್ಷ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರ ಅಭಿನಂದನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ.





ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಮತ್ತು ಪೀಠಾಧಿಪತಿ ಗುರುಬಸವ ಪಟ್ಟದ್ದೇವರ ದಿವ್ಯ ಸಾನ್ನಿಧ್ಯದಲ್ಲಿ ಸಾಯಂಕಾಲ 5 ಗಂಟೆಗೆ ಈ ಅಭಿನಂದನಾ ಸಮಾರಂಭ ಜರುಗಲಿದೆ. ಹೆಚ್ಚಿನ ಸಂಖ್ಯೆಯಲ್ಲಿ ಶ್ರೀಮಠದ ಭಕ್ತರು, ಸಾರ್ವಜನಿಕರು, ಖಂಡ್ರೆ ಅವರ ಅಭಿಮಾನಿಗಳು, ಕಾರ್ಯಕರ್ತರು, ಹಿತೈಷಿಗಳು ಭಾಗವಹಿಸಬೇಕು ಎಂದು ಅಭಿನಂದನಾ ಸಮಿತಿ ಅಧ್ಯಕ್ಷ ರಾಜಶೇಖರ ಅಷ್ಟೂರೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕಲಬುರಗಿ: ನಗರದ ರಾಮಮಂದಿರ ವೃತ್ತದಲ್ಲಿ ಸಂತ ಶ್ರೀ ಸೇವಾಲಾಲ ಮಹಾರಾಜರ 287ನೇ ಜಯಂತೋತ್ಸವದ ಅಂಗವಾಗಿ ಯುವ ಮುಖಂಡ ಅಭಿಶೇಕ ರಾಠೋಡ ಅವರ ನೇತೃತ್ವದಲ್ಲಿ ಅನ್ನದಾಸೋಹ ಕಾರ್ಯಕ್ರಮಕ್ಕೆ ಶಾಸಕ ಅಲ್ಲಮಪ್ರಭು ಪಾಟೀಲ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಕುಮಾರ ವಠಾರ, ವಿರೇಶ ಉಪ್ಪಿ, ಅಂಬರೇಶ ಜಮಾದಾರ, ಉಲಾಸ, ಮಲ್ಲು, ಶಶಾಂಕ್ ಸೇರಿದಂತೆ ಇತರರು ಇದ್ದರು.

# ದಲಿತ ಸೇನೆ ತಾಲ್ಲೂಕು ಕಾರ್ಮಿಕ ಘಟಕ ಪದಾಧಿಕಾರಿಗಳ ಆಯ್ಕೆ

ಕಲಬುರಗಿ: ನಗರದ ಜಗತ್ ಸರ್ಕಲ್ ನಲ್ಲಿರುವ ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ:ಬಾಬಾಸಾಹೇಬ್ ಅಂಬೇಡ್ಕರ್ ರವರ ಪುತ್ಥಳಿ ಆವರಣದಲ್ಲಿ ದಲಿತ ಸೇನೆಯ ರಾಜ್ಯ ಅಧ್ಯಕ್ಷರಾದ ಹನುಮಂತ ಯಳಸಂಗಿ ಅವರು ನೇತೃತ್ವದಲ್ಲಿ ಸಭೆ ನಡೆಸಿ ಈ ಸಬೆಯಲ್ಲಿ ನೂತನ ದಲಿತ ಸೇನೆ ತಾಲ್ಲೂಕು ಕಾರ್ಮಿಕ ಘಟಕದ ಪದಾಧಿಕಾರಿಗಳ ಆಯ್ಕೆ ಮಾಡಲಾಯಿತು.

ಕಾಕಾಡೆ ಚೌಕ್, ಭೀಮನಗರ ಗ್ರಾಮೀಣ ವಲಯ ಅಧ್ಯಕ್ಷರಾಗಿ ಡಿ.ಜೆ.ನವೀನ್ ಬಳಿಚಕರ್, ತಾಲ್ಲೂಕು ದಲಿತ ಸೇನೆ ಕಾರ್ಮಿಕ ಘಟಕ ಉಪಾಧ್ಯಕ್ಷರಾಗಿ ಅಮರ ಕೀರ್ತಿ, ಮಂಜುನಾಥ ಬಸಣ್ಣ, ಶರಣಬಸಪ್ಪ ಕಾಂಬಾಳೆ, ಮಂಜುನಾಥ ಮಗಲಿ,

ಶಿವಕುಮಾರ ರಾಠೋಡ್, ಚನ್ನಬಸಪ್ಪ ನಿಂಬರ್ಗಾ, ಭೀಮರಾವ್ ಕಟ್ಟಿಮನಿ,

ತಾಲ್ಲೂಕು ದಲಿತ ಸೇನೆ ಕಾರ್ಮಿಕ ಘಟಕ ಪ್ರಧಾನ ಕಾರ್ಯದರ್ಶಿ

ವಿನೋದಕುಮಾರ ತೆಲಂಗಿ, ಶರಣಬಸಪ್ಪ ಕಾಂಬಾಳೆ, ತಾಲ್ಲೂಕು ದಲಿತ ಸೇನೆ ಕಾರ್ಮಿಕ ಘಟಕ ಸಂಘಟನಾ ಕಾರ್ಯದರ್ಶಿ ಶ್ರಾವಣಕುಮಾರ ದೊಡ್ಡಮನಿ, ಪ್ರಧಾನ ಕಾರ್ಯದರ್ಶಿ ಅಂಬರೀಶ ತಳಕೇರಿ, ಸಂಘಟನಾ ಕಾರ್ಯದರ್ಶಿ ವಿಕಾಸ

ನಿಂಬರ್ಗಾ, ಭೀಮನಗರ ದಲಿತ ಸೇನೆ ಅಧ್ಯಕ್ಷರಾಗಿ ಕಿರಣ ದಾಡಿ, ಸಂಜು ನಗರ ದಲಿತ ಸೇನೆ ಅಧ್ಯಕ್ಷರಾಗಿ ಸುನೀಲ ಕಟ್ಟಿಮನಿ, ಕಲಬುರಗಿ ದಲಿತ ಸೇನೆ ಅಧ್ಯಕ್ಷರಾಗಿ ರೋಹಿತ ಭೋಯಿಗಲ್ಲಿ, ತಾಲ್ಲೂಕು ದಲಿತ ಸೇನೆ ಕಾರ್ಮಿಕ ಘಟಕ

ಖಜಾಂಚಿಯಾಗಿ ರಘುವೀರ ಕಾಂಬಳೆ ಇವರನ್ನು ಆಯ್ಕೆ ಮಾಡಲಾಯಿತು.




ಈ ಸಭೆಯಲ್ಲಿ ದಲಿತ ಸೇನೆಯ ವಿದ್ಯಾರ್ಥಿ ಒಕ್ಕೂಟದ ರಾಜ್ಯ ಅಧ್ಯಕ್ಷ ಶಿವಲಿಂಗಪ್ಪ ದೊಡ್ಡಮನಿ ಸರ್, ಜಿಲ್ಲಾ ಅಧ್ಯಕ್ಷ ಮಂಜೂನಾಥ ಭಂಡಾರಿ, ಕಾರ್ಮಿಕ ಘಟಕದ ಜಿಲ್ಲಾ ಅಧ್ಯಕ್ಷ ಹುಸೇನಿ ತಳಕೇರಿ, ನಗರ ಅಧ್ಯಕ್ಷ ಅರವಿಂದ ಕಮಲಾಪುರಕರ್,

ವಿದ್ಯಾರ್ಥಿ ಒಕ್ಕೂಟದ ಜಿಲ್ಲಾ ಅಧ್ಯಕ್ಷ ಸುನೀಲ್, ಸಿಂಧೆ ತಾಲ್ಲೂಕು ಅಧ್ಯಕ್ಷ ಲೋಕೇಶ್ ಸಿಂಗೆ, ವಸಂತ ಕುಮಸಿ ಜಿಲ್ಲಾ ಉಪಾಧ್ಯಕ್ಷರು ಹಾಗೂ ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ ಇಂಗನಕಲ್,

# ಹಂಪಿ ಉತ್ಸವ: ಶ್ರೀ ವಿರೂಪಾಕ್ಷ ವೇದಿಕೆಯಲ್ಲಿ ವಿವಿಧ ಸಾಂಸ್ಕೃತಿಕ ಕಲಾತಂಡಗಳ ಸಾಂಸ್ಕೃತಿಕ ರಸಮಂಜರಿ

ಮಲ್ಲಮ್ಮ ನುಡಿ ವಾರ್ತೆ

ವಿಜಯನಗರ ಹೊಸಪೇಟೆ

ಹಂಪಿ ಉತ್ಸವದ ಎರಡನೆಯ ದಿನವಾದ ಶನಿವಾರ ಶ್ರೀ ವಿರೂಪಾಕ್ಷ ವೇದಿಕೆಯಲ್ಲಿ ವಿವಿಧ ಸಾಂಸ್ಕೃತಿಕ ಕಲಾತಂಡಗಳಿಂದ ನಾಡಿನ ಸಂಸ್ಕೃತಿ, ಸೊಗಡು, ಜನಪದ ಕಲೋಕ್ತಿ ಒಳಗೊಂಡತೆ ವಿವಿಧ ಕಲಾಪ್ರಕಾರಗಳ ಸಾಂಸ್ಕೃತಿಕ ರಸಮಂಜರಿ ಅನಾವರಣಗೊಂಡಿತು.

ಹೊಸಪೇಟೆಯ ಕೆ.ಪ್ರೇಮ ಮತ್ತು ತಂಡವು 'ನಮ್ಮಮ್ಮ ಶಾರದೆ..ಉಮಾ ಮಹೇಶ್ವರಿ' ವಚನ ಗಾಯನ ಹಾಡುವ ಮೂಲಕ ಸಾಂಸ್ಕೃತಿಕ ಸಂಜೆ ಆರಂಭಿಸಿದರು. ಹರಪನಹಳ್ಳಿಯ ಶರಣಬಸವಶಾಸ್ತ್ರಿಹಿರೇಮಠ ಮತ್ತು ತಂಡವು ಕಥಾ ಕೀರ್ತನೆಗಳನ್ನು ಪ್ರಸ್ತುತಪಡಿಸಿದರು. ಹುಬ್ಬಳ್ಳಿಯ ಮಯೂರ ನೃತ್ಯ ಮಂದಿರ ತಂಡದಿಂದ ನೃತ್ಯರೂಪಕ ಪ್ರದರ್ಶಿಸಿದರು. ಹೊಸಪೇಟೆ ಸುಮಂಗಲ ಕಾಳಗಟ್ಟ ಮತ್ತು ತಂಡವು ದಾಸರ ಪದಗಳ ಗಾಯನ ಪ್ರಸ್ತುತಪಡಿಸಿದರು.

ಕಂಪ್ಲಿಯ ಅಶ್ವಿನಿ.ಡಿ ತಂಡವು ಭರತನಾಟ್ಯ, ಕುರಿಹಟ್ಟಿ ಗ್ರಾಮದ ಎಚ್.ರಾಜಣ್ಣ ಮತ್ತು ತಂಡ ವಚನ ಗಾಯನಗಳ ಮೂಲಕ ವಚನಸಾಹಿತ್ಯಲೋಕ ಅನಾವರಣಗೊಳಿಸಿದರು. ಕೂಡ್ಲಿಗಿ ಸುಧಾ ದಿಬ್ಬದಹಳ್ಳಿ ಮತ್ತು ತಂಡ ಜಾನಪದ ಗಾಯನದ ಮೂಲಕ ಜನಪದ ಸೊಗಡು ತೆರೆದಿಟ್ಟರು.

ಕಲಬುರಗಿ ಪ್ರಶಾಂತ್ ಈ.ಕಂಬಾರ್ ಮತ್ತು ತಂಡ ಸುಗಮ ಸಂಗೀತ, ದಾವಣಗೆರೆ ರುದ್ರಾಕ್ಷಿಬಾಯಿ ಸಿ.ಕೆ., ಮತ್ತು ತಂಡ ಲಂಬಾಣಿ ನೃತ್ಯ, ಮೋರಿಗೇರಿ ಬಿ.ಯುವರಾಜ ಗೌಡ ಮತ್ತು ತಂಡ ದಾಸರ ಪದಗಳ ಗಾಯನ ಪ್ರಸ್ತುತಪಡಿಸಿದರು.

ಹಗರಿಬೊಮ್ಮನಹಳ್ಳಿ ಗೀತಾ ಈರಣ್ಣ ಮತ್ತು ತಂಡ, ಸಮೂಹ ನೃತ್ಯ ರೂಪಕ, ಕೊಟ್ಟೂರು ಬಿ. ಸೌಮ್ಯ ಮತ್ತು ತಂಡ ಭರತನಾಟ್ಯ, ಕೂಡ್ಲಿಗಿ ನರಸಿಂಹಪ್ಪ ಮತ್ತು ತಂಡ ವಚನ ಸಂಗೀತ, ಚಿತ್ರದುರ್ಗ ಡಾ.ಭವ್ಯರಾಣಿ.ಟಿ ತಂಡ ವಯಲಿನ್ ವಾದನ ನಡೆಸಿಕೊಟ್ಟರು.

ಸಂಡೂರು ಅಪ್ಪು ಡ್ಯಾನ್ಸ್ ಸ್ಟುಡಿಯೋ ಸಮೂಹ ನೃತ್ಯ ಪ್ರದರ್ಶಿಸುವ ಮೂಲಕ ನೆರೆದಿದ್ದವರ ಚಪ್ಪಾಳೆ ಗಿಟ್ಟಿಸಿಕೊಂಡರು. ಕಂಪ್ಲಿಯ ಸಿ.ಡಿ. ಮೌನೇಶ್ ಮತ್ತು ತಂಡ ತತ್ವಪದ ಗಾಯನ, ಹೊಸಪೇಟೆಯ ಎಚ್.ಎಂ.ಲಲಿತಾ ಮತ್ತು ತಂಡ ಹಿಂದೂಸ್ತಾನಿ ಸಂಗೀತ. ತಂಬ್ರಹಳ್ಳಿಯ




ಕುಮಾರ್ ಭಜಂತ್ರಿ ಮತ್ತು ತಂಡದಿಂದ ಸಾಕ್ರೋಫೋನ್. ಬಳ್ಳಾರಿಯ ಹೊಸಯರಗುಡಿ ರೇಖಾ ಎಸ್.ವಿ ತಂಡ ಸುಗಮ ಸಂಗೀತ, ಹಗರಿಬೊಮ್ಮನಹಳ್ಳಿಯ ಕೊಟ್ರಗೌಡ ಎಂ. ತಂಡದಿಂದ ಕೊಳಲು ವಾದನ ನುಡಿಸಿದರು.

ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ವೈ.ಎ.ಕಾಳೇಶ್ ಅವರು ವೇದಿಕೆಯ ನೋಡೆಲ್ ಅಧಿಕಾರಿಯಾಗಿ ಉಸ್ತುವಾರಿ ವಹಿಸಿದ್ದರು.

ಈ ವೇಳೆ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ವೆಂಕಟೇಶ್ ಸೇರಿದಂತೆ ನೋಡೆಲ್ ಅಧಿಕಾರಿಗಳಾದ ಮಲ್ಲೇಶ್, ಕೊಟ್ರೇಶ್ ಹಾಗೂ ಇತರರು



ಇದ್ದರು.

ವೇದಿಕೆಯಲ್ಲಿ ಭಾಗವಹಿಸಿದ್ದ 33 ಕಲಾತಂಡಗಳಿಗೂ ಪ್ರಮಾಣಪತ್ರ, ಸ್ಮರಣಿಕೆ ನೀಡಿ ಗೌರವಿಸಲಾಯಿತು.

# ಮಸ್ಕಿ ಮಹಾಶಿವರಾತ್ರಿ ಸಂಭ್ರಮ:ಈಶ್ವರನ ಕೃಪೆಗೆ ಪಾತ್ರರಾದ ಸಾವಿರಾರು ಭಕ್ತರು

ಮಲ್ಲಮ್ಮ ನುಡಿ ವಾರ್ತೆ

ಮಸ್ಕಿ :

ಅಶೋಕನ ನಾಡು ಐತಿಹಾಸಿಕ ಮಸ್ಕಿ ಪಟ್ಟಣದಲ್ಲಿ ಮಹಾಶಿವರಾತ್ರಿ ಸಂಭ್ರಮ ಮನೆಮಾಡಿತ್ತು, ಐತಿಹಾಸಿಕ ಪ್ರಸಿದ್ಧ ಶ್ರೀ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸಿ, ದೇವರ ದರ್ಶನ ಪಡೆದರು.



ಬೆಳಗಿನ ಜಾವ 3 ಗಂಟೆಯಿಂದಲೇ ಶಿವಲಿಂಗಕ್ಕೆ ಅಭಿಷೇಕ, ವಿಶೇಷ ಪೂಜೆ ಸಲ್ಲಿಸಲಾಯಿತು.

ಇಂದು ಮಹಾಶಿವರಾತ್ರಿ ಹಿನ್ನೆಲೆ ದೇವರಿಗೆ ಬಿಲ್ವಪತ್ರೆ, ಹೂವುಗಳನ್ನು ಅರ್ಪಿಸಿ ಭಕ್ತರು ಕೃತಾರ್ಥರಾಗುತ್ತಿದ್ದಾರೆ.

ಪವಿತ್ರ ಗಂಗಾಜಲ ವಿತರಣೆ:– ಮಹಾಶಿವರಾತ್ರಿ ಹಬ್ಬದ ಹಿನ್ನಲೆಯಲ್ಲಿ ಜಿಲ್ಲಾಡಳಿತ, ಧಾರ್ಮಿಕ ದತ್ತಿ ಇಲಾಖೆ ವತಿಯಿಂದ ಜಿಲ್ಲೆಯ ಎಲ್ಲಾ ತಾಲೂಕಿನ ಶಿವದೇವಾಲಯಗಳಿಗೆ ಪವಿತ್ರ ಗಂಗಾಜಲ ವಿತರಣೆ ಮಾಡಲಾಯಿತು. ಗಂಗಾಜಲ ವಿತರಣೆ ಮಾಡಿ ಬಳಿಕ ಮಲ್ಲಿಕಾರ್ಜುನ ದೇವಾಲಯ ಪ್ರಧಾನ ಅರ್ಚಕರಾದ ಸಿದ್ದಯ್ಯ ಹೆಸರೂರು ಹಿರೇಮಠ ಅವರ ಮಾತನಾಡಿ, ಮಹಾ ಶಿವರಾತ್ರಿ ಹಬ್ಬದ ಪ್ರಯುಕ್ತ ಎಲ್ಲಾ ದೇವಾಲಯಗಳಲ್ಲಿ ಪವಿತ್ರ ಗಂಗಾ ಜಲದಿಂದ ಶಿವನಿಗೆ ಅಭಿಷೇಕ ಮಾಡಲಾಗುತ್ತದೆ. ನಂತರ ಗಂಗಾಜಲವನ್ನು ಶಿವನ ಭಕ್ತರಿಗೆ ಪ್ರಸಾದ ರೂಪದಲ್ಲಿ ಕೊಡಲಾಗುವುದು' ಎಂದರು.

# ಡಾ.ಬಸವಲಿಂಗ ಪಟ್ಟದ್ದೇವರ ಸಾನ್ನಿಧ್ಯದಲ್ಲಿ ಸಾಮೂಹಿಕ ಇಷ್ಟಲಿಂಗ ಪೂಜೆ ॥ ಸಾವಿರಾರೂ ಭಕ್ತರು ಭಾಗಿ

ಭಾಲ್ಕಿ, ಇಲ್ಲಿಯ ಚನ್ನಬಸವಾಶ್ರಮ ಪರಿಸರ ಸಮೀಪದ ಕುಂಬಾರ ಗುಂಡಯ್ಯ ಕಲ್ಯಾಣ ಮಂಟಪದಲ್ಲಿ ಮಹಾಶಿವರಾತ್ರಿ ಸಂಭ್ರಮ ಮನೆ ಮಾಡಿತು.

ಬಸವಕಲ್ಯಾಣ ಅನುಭವ ಮಂಟಪದ ಅಧ್ಯಕ್ಷ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರ ಸಾನ್ನಿಧ್ಯದಲ್ಲಿ ಭಾನುವಾರ ನಡೆದ ಸಾಮೂಹಿಕ ಇಷ್ಟಲಿಂಗ ಪೂಜೆಯಲ್ಲಿ ವಿವಿಧೆಡೆಯ ಸಾವಿರಾರು ಭಕ್ತರು ಶ್ರದ್ಧೆ, ಭಕ್ತಿಯಿಂದ ಲಿಂಗಪೂಜೆಯಲ್ಲಿ ಭಾಗಿಯಾಗಿದ್ದರು.

ಲಿಂಗಪೂಜೆಯ ವಿಧಿ ವಿಧಾನ ತಿಳಿಸಿ ಕೊಟ್ಟ ಪೂಜ್ಯರು ಮಾತನಾಡಿ, ಇಷ್ಟಲಿಂಗದಲ್ಲಿ ಅದ್ಭುತ ಶಕ್ತಿ ಅಡಗಿದೆ. ಮನದ ಮೈಲಿಗೆ ತೊಳೆದು ಮನಸ್ಸು ಶಾಂತಗೊಳಿಸುವ ಮತ್ತು ಮನುಷ್ಯ ಕಷ್ಟ ಕಾರ್ಪಣ್ಯಗಳನ್ನು ದೂರ ಮಾಡುವ ಶಕ್ತಿ ಇಷ್ಟಲಿಂಗ ಪೂಜೆಯಲ್ಲಿದೆ.

ಲಿಂಗಪೂಜೆಯನ್ನು ಒಂದು ದಿನಕ್ಕೆ ಸೀಮಿತಗೊಳಿಸಬಾರದು. ಪ್ರತಿಯೊಬ್ಬರು ಪ್ರತಿನಿತ್ಯ ಇಷ್ಟಲಿಂಗ ಪೂಜೆಯನ್ನು ಮಾಡುವುದು ರೂಢಿಸಿಕೊಳ್ಳಬೇಕು.



ಡಾ.ಬಸವಲಿಂಗ ಪಟ್ಟದ್ದೇವರ ಇಷ್ಟಲಿಂಗ ಪೂಜೆಯ ದೃಶ್ಯ




ಸಾಮೂಹಿಕ ಇಷ್ಟಲಿಂಗ ಪೂಜೆಯಲ್ಲಿ ಸಾವಿರಾರೂ ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿದ್ದರು.

ಮಕ್ಕಳಲ್ಲಿ ಬಾಲ್ಯದಿಂದಲೇ ಇಷ್ಟಲಿಂಗ ಪೂಜೆಯ ಆಸಕ್ತಿ ಬೆಳೆಸಿದಲ್ಲಿ ಅವರು ಮುಂದೆ ದೇಶಕ್ಕೆ ಉತ್ತಮ ಆಸ್ತಿಯಾಗುತ್ತಾರೆ. ವರ್ಷಕ್ಕೊಮ್ಮೆ ಬರುವ ಶಿವರಾತ್ರಿ ದಿನದಂದು ನಡೆಯುವ ಸಾಮೂಹಿಕ ಇಷ್ಟಲಿಂಗ ಪೂಜೆಯಲ್ಲಿ ಭಾಗಿಯಾಗುವುದರಿಂದ ದೈವಿ ಶಕ್ತಿ ಹೆಚ್ಚಿಸುತ್ತದೆ. ಹಾಗಾಗಿ ಎಲ್ಲರೂ ಪ್ರತಿದಿನ ಲಿಂಗಪೂಜೆ ಮಾಡುವುದಾಗಿ ಸಂಕಲ್ಪ ಮಾಡಬೇಕು ಎಂದು ತಿಳಿಸಿದರು.

ಪೀಠಾಧಿಪತಿ ಗುರುಬಸವ ಪಟ್ಟದ್ದೇವರು, ಬಸವಲಿಂಗ ದೇವರು ನೇತೃತ್ವ ವಹಿಸಿದ್ದರು.

ಹಿರಿಯ ನ್ಯಾಯವಾದಿ ರಾಜಶೇಖರ ಅಷ್ಟೂರೆ, ಶಾರದಾ ಹೋಟೆಲ್ ಮಾಲಿಕ ಬಾಬುರಾವ ಹುಣಜೆ ಬಸವಗುರುವಿನ ಪೂಜೆ ನೆರವೇರಿಸಿದರು. ತಾಲೂಕು ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಮಲ್ಲಮ್ಮ ನಾಗನಕೇರೆ ಸೇರಿದಂತೆ ಹಲವರು ಇದ್ದರು. ಹಾಸ್ಯಕಲಾವಿದ ನವಲಿಂಗ ಪಾಟೀಲ್ ನಿರೂಪಿಸಿ, ವಂದಿಸಿದರು.

# ಮಹಾಪುರುಷರ ತತ್ವ ಪಾಲಿಸಿ : ಕೋಲಾರ್



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಸಂತಸೇವಾಲಾಲ್ ಅವರು ಇಡೀ ಸಮಾಜಕ್ಕೆ ಒಳಿತನ್ನು ಬಯಸಿ ಶಾಂತಿಯ ಸಂದೇಶ ಸಾರಿದವರು. ಅಂತಹ ಮಹಾಪುರುಷರ ತತ್ವ, ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿ ರಮೇಶ ಕೋಲಾರ್ ಹೇಳಿದರು. ನಗರದ ಪದವಿ ಕಾಲೇಜು ಸಭಾಂಗಣದಲ್ಲಿ ಇಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಪ್ರದೇಶ ಬಂಜಾರ (ಲಂಬಾಣಿ) ಸೇವಾ ಸಂಘ, ಬಂಜಾರ ಸಮಾಜ ಕಲಗುರು ಶ್ರೀ ಸಂತ ಸೇವಾಲ್ ಮಹಾರಾಜರ 287 ನೇ ಜಯಂತ್ರೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಸಂತ ಸೇವಾಲಾಲರಂತಹ ದಾರ್ಶನಿಕರು ಒಂದು ಜಾತಿಗೆ ಸೀಮಿತರಲ್ಲ. ಅವರು ಬಂಜಾರ ಸಮಾಜ ಸುಧಾರಣೆ ಮತ್ತು ಅಭಿವೃದ್ಧಿಗಾಗಿ ಬಹಳಷ್ಟು ಉತ್ತಮ ಸಂದೇಶ ನೀಡಿದ್ದಾರೆ.

ಇವರ ವಚನ, ಸಂದೇಶಗಳನ್ನು ನಾವು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು. ಪ್ರತಿಯೊಬ್ಬರೂ ಶಿಕ್ಷಣವಂತರಾದಾಗ ಮಾತ್ರ ಸಮಾಜ ಏಳ್ಗೆ ಹೊಂದಲು ಸಾಧ್ಯ. ಆದ್ದರಿಂದ ಸಮಾಜದ ಜನತೆ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು ಎಂದು ತಿಳಿಸಿದರು.

ಡಿಗ್ರಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಸುಭಾಷ್ಚಂದ್ರ ಕೌಲಗಿ ಮಾತನಾಡಿ, ನಮ್ಮ ದೇಶದಲ್ಲಿ ಗುರು ಪರಂಪರೆಗೆ ವಿಶೇಷ ಸ್ಥಾನವಿದ್ದು, ಬಂಜಾರ ಸಮಾಜದ ಗುರುಗಳಾದ ಸಂತ ಸೇವಾಲಾಲರು ಸತ್ಯ, ನಿಷ್ಠೆ ಮತ್ತು ಪ್ರಾಮಾಣಿಕತೆಗೆ ಹೆಸರಾದವರು. ಬಂಜಾರ ಸಮಾಜದವರು ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಬೇಕು. ವಿಶೇಷವಾಗಿ ಹೆಣ್ಣು ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಬೇಕು. ಹಾಗೂ ಆರೋಗ್ಯದ ಕಡೆ ಗಮನ ಕೊಡಬೇಕು ಎಂದು ಕಿವಿ ಮಾತು ಹೇಳಿದರು. ಯುಡಾ ಅಧ್ಯಕ್ಷ ಬಾಬುರಾವ ಕಾಡ್ಲೂರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಉತ್ತರಾದೇವಿ ಮಠಪತಿ ಇದ್ದರು. ಶ್ರೀ ಸೇವಾಲಾಲ್ ಭಾವಚಿತ್ರದ ಮೆರವಣಿಗೆ: ರೈಲ್ವೆ ನಿಲ್ದಾಣ ಬಳಿ ಶ್ರೀ ಸೇವಾಲಾಲ್ ಮಹಾರಾಜರ ಭಾವಚಿತ್ರಕ್ಕೆ ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ್ ಪೂಜೆ ಮಾಡಿ ಮೆರವಣಿಗೆಗೆ ಚಾಲನೆ ನೀಡಿದರು.

ಮಹಿಳೆಯರು, ಮಕ್ಕಳು ಕುಣಿದು ದಾರಿಯುದ್ದಕ್ಕೂ ಸೇವಾಲಾಲ ಮಹಾರಾಜರ ಜಯಘೋಷಣೆ ಹಾಕಿದರು. ಸುಭಾಷ್ಚಂದ್ರ ಬೋಸ ವೃತ್ತದಲ್ಲಿ ಬೃಹತ ಸೇವಾಲಾಲ ಮಹಾರಾಜ ಭಾವ ಚಿತ್ರಕ್ಕೆ ಮಾಲಾರ್ಪಣೆ ಮಾಡಿದರು.

ರೈಲ್ವೆ ಸ್ಟೇಷನ್, ಶಾಸ್ತ್ರೀ ವೃತ್ತ, ಸುಭಾಷ್ಚಂದ್ರ ಬೋಸ್ ವೃತ್ತದ ಮೂಲಕ ಡಿಗ್ರಿ ಕಾಲೇಜಿಗೆ ಆಗಮಿಸಿತು. ಸಮಾಜದ ಮುಖಂಡರು ಉಪಸ್ಥಿತರಿದ್ದರು.

# ಡಿ.ಡಿ.ಯು. ಶಾಲೆಯಲ್ಲಿ ಸೇವಾಲಾಲ್ ಜಯಂತಿ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ನಗರದ ಡಿ ದೇವರಾಜ ಅರಸ್ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆ (ಕನ್ನಡ ಮಾಧ್ಯಮ) ಯಾದಗಿರಿಯಲ್ಲಿ ಮಹಾ ತಪಸ್ವಿ, ಸಮಾಜ ಸುಧಾರಕ ಸಂತ ಶ್ರೀ ಸೇವಾಲಾಲ್ ಮಹಾರಾಜರ ಜಯಂತಿಯನ್ನು ಆಚರಿಸಲಾಯಿತು. ಸಂತಶ್ರೀ ಸೇವಾಲಾಲ್ ಮಹಾರಾಜರ ಬಂಜಾರ ಸಮಾಜಕ್ಕೆ ಕೊಡುಗೆ ಅಪಾರವಾದದ್ದು ಎಂದು ಡಿಡಿಯು ಸಮೂಹ ಶಿಕ್ಷಣ ಸಂಸ್ಥೆಗಳ ಆಡಳಿತಾಧಿಕಾರಿಗಳಾದ ಮಲ್ಲಿಕಾರ್ಜುನ ಮೇಟಿ ಮಾತನಾಡಿದರು. ಈ ಸಂದರ್ಭದಲ್ಲಿ ಡಿಡಿಯು ಸಮೂಹ ಶಿಕ್ಷಣ ಸಂಸ್ಥೆಗಳ ಆಡಳಿತ ಅಧಿಕಾರಿಗಳಾದ ಮಲ್ಲಿಕಾರ್ಜುನ ಮೇಟಿ, ಕನ್ನಡ ಮಾಧ್ಯಮ ಶಾಲೆಯ ಮುಖ್ಯಗುರುಗಳಾದ ವೆಂಕಟೇಶ ಪೂಜಾರಿ, ಸಿಬಿಎಸ್‌ಸಿ ವಿಭಾಗದ ಪ್ರಾಂಶುಪಾಲರಾದ ಬಬಿನ್ ರಾಜ್, ವಸತಿ ನಿಲಯದ ಮೇಲ್ವಿಚಾರಕರಾದ ನಿಂಗಣ್ಣ ಹೊಸಮನಿ, ರವಿ ಪವಾರ್, ಪ್ರಭು ಮೈಲಾರಿ, ಲೋಹಿತ್ ಕುಮಾರ್ ಹಾಗೂ ರೇವತಿ ಹಾಗೂ ಮುದ್ದು ಮಕ್ಕಳು ಉಪಸ್ಥಿತರಿದ್ದರು.

# ಹೊಲಿಗೆಯು ಮಹಿಳೆಯರ ಜೀವನಾಂಶಕ್ಕೆ ಆದಾಯದ ಮೂಲ: ಫಾದರ್ ಫ್ರಾನ್ಸಿಸ್ ಶಾಬು

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ನಗರದ ಡಾನ್ ಬಾಸ್ಕೋ ಸಮಾಜ ಸೇವಾ ಕೇಂದ್ರದ ವತಿಯಿಂದ ಬಂದಳ್ಳಿ ಗ್ರಾಮದಲ್ಲಿ ಉಚಿತ ಹೊಲಿಗೆ ತರಬೇತಿ ಪಡೆದ ಕಲಿಕಾರ್ಥಿಗಳಿಗೆ ಪ್ರಮಾಣಪತ್ರ ವಿತರಣೆ ಕಾರ್ಯಕ್ರಮದಲ್ಲಿ ನಿರ್ದೇಶಕರಾದ ಫಾ. ಫ್ರಾನ್ಸಿಸ್ ಶಾಬು ಅವರು ಆರು ತಿಂಗಳ ತರಬೇತಿಯಲ್ಲಿ ಭಾಗವಹಿಸಿ ಉತ್ತೀರ್ಣರಾದ ಮಹಿಳೆಯರು ಮತ್ತು ಯುವತಿಯರಿಗೆ ಪ್ರಮಾಣಪತ್ರಗಳನ್ನು ವಿತರಿಸಿ ಮಾತನಾಡಿ, ಈ ತರಬೇತಿ ಮೂಲಕ ಪಡೆದ ಕೌಶಲ್ಯವನ್ನು ಸದುಪಯೋಗಪಡಿಸಿಕೊಂಡು ಸ್ವಾವಲಂಬಿ ಹಾಗೂ ಆರ್ಥಿಕವಾಗಿ ಸಬಲ ಜೀವನ ನಡೆಸಬೇಕು ಎಂದು ತಿಳಿಸಿದರು. ಮತ್ತು ಈಗ ನೀವು ಚಿಕ್ಕದಾಗಿ ಕಲಿತ ಹೊಲಗೆ ಕೆಲಸ ಮುಂದೆ ನಿಮ್ಮ ಜೀವನದಲ್ಲಿ ದೊಡ್ಡ ಮರವಾಗಿ ಬೆಳೆದು ಮನೆಯ ಸಂಸಾರವನ್ನೆಲ್ಲ ನಡೆಸಬಲ್ಲ ಆದಾಯದ ಮೂಲ ಆಗಬಹುದು, ಎಂದು ತಮ್ಮ ಸ್ವಂತ ತಂಗಿ ಕಲಿತಿರುವ ಹೊಲಿಗೆ ಕೆಲಸದ ಅನುಭವವನ್ನು ಹಂಚಿಕೊಂಡರು. ಹಾಗೂ ನಿಮ್ಮ ಗ್ರಾಮದಲ್ಲಿ ಅವರಿಗೆ ಕಲಿಯುವರಿದ್ದರೆ ಅವರಿಗೆ ನನ್ನ ಸಹಾಯ ಸಹಕಾರ ಖಂಡಿತವಾಗಿ ಮಾಡಿಕೊಡುತ್ತೇನೆ ಎಂದು ಭರವಸೆ ನೀಡಿದರು. ಮೈಂಡ್ಸ್ ಯೋಜನೆಯ ಸಂಯೋಜಕರಾದ ಶರಣಪ್ಪ ಸಿ. ಅಮರಾಪುರ ಅವರು ಮಾತನಾಡಿ, ಮಹಿಳೆಯರಿಗೆ ಜೀವನೋಪಾಯದ ಆದಾಯ ಒದಗಿಸುವಲ್ಲಿ ಹೊಲಿಗೆ ತರಬೇತಿ ತುಂಬ ಸಹಕಾರಿ ಆಗಿದೆ ಎಂದರು. ಜೀವನೋಪಾಯ ಚಟುವಟಿಕೆಗಳ ಸಂಯೋಜಕರಾದ ದೇವೇಂದ್ರಪ್ಪ ಬಂದಳ್ಳಿ ಅವರು ಕಲಿತ ಜ್ಞಾನವನ್ನು ಇತರರೊಂದಿಗೆ ಹಂಚಿಕೊಂಡು ಸಮಾಜಮುಖಿ ಬದುಕು ಕಟ್ಟಿಕೊಳ್ಳಬೇಕು ಎಂದು ಸಲಹೆ ನೀಡಿದರು. ಶ್ರಮಯೋಗಿ ಸಂಜೀವಿನಿ ಸಂಘದ ಅಧ್ಯಕ್ಷರಾದ ಪುಷ್ಪವತಿ ಅವರು ಮಾತನಾಡಿ ತಾವು ಬಡತನದಿಂದ ಬೆಳೆದು ಬಂದ ಅನುಭವವನ್ನು ಹಂಚಿಕೊಂಡು ಕಲಿಕಾರ್ಥಿಗಳಿಗೆ ಪ್ರೇರಣೆ ನೀಡಿದರು. ಕಾರ್ಯಕ್ರಮದ ಅಂತ್ಯದಲ್ಲಿ ಹೊಲಿಗೆ ತರಬೇತಿ ಶಿಕ್ಷಕರಾದ ಮೌನೇಶ್ವರಿ ಅವರು ವಂದನಾರ್ಪಣೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಮಾಜಿ ಎಸ್‌ಡಿಎಂಸಿ ಅಧ್ಯಕ್ಷರಾದ ಶ್ರೀ ವೆಂಕಟೇಶ್ ಅಕ್ಕಿ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

# ಭಾರತ ಮಾಲಾ ಮುಖ್ಯ ಹೆದ್ದಾರಿ ರಸ್ತೆ: ಅಂಡರ್ ಪಾಸ್ ಅಗಲೀಕರಣ ಎತ್ತರಿಸಲು ಮನವಿ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಭಾರತದ ಮಾಲಾ ರಾಷ್ಟ್ರೀಯ ಹೆದ್ದಾರಿ ಹಾದುಹೋಗುವ ವಡಗೇರಾದಿಂದ ಸೈದಾಪುರಕ್ಕೆ ಹೋಗುವ ರಸ್ತೆಯ ಕೋನಹಳ್ಳಿ ಗ್ರಾಮದ ಸಮೀಪ ಅಂಡರ್ ಪಾಸ್ ಬ್ರಿಡ್ಜ್ ಕಾರ್ಯ ನಿರ್ಮಾಣ ಕಾಮಗಾರಿ ಮಾಡುತ್ತಿದ್ದು, ತೀರ ಚಿಕ್ಕದಾಗಿರುವುದರಿಂದ ವಡಗೇರಾ ತಾಲೂಕಿನ ಸುತ್ತಮುತ್ತಲಿನ ರೈತರು ಬೆಳೆದ ಬೆಳೆಗಳು ಭತ್ತ, ಹತ್ತಿ, ಕಬ್ಬು, ಜೋಳ, ತುಂಬಿದ ವಾಹನಗಳು ಸೈದಾಪುರ ಮತ್ತು ರಾಯಚೂರ ಕಡೆ ಇದೇ ಮಾರ್ಗವಾಗಿ ಮಾರಾಟ ಮಾಡಲು ಹೋಗುತ್ತವೆ, ಹಾಗೂ ಈ ರಸ್ತೆ ರಾಜ್ಯ ಹೆದ್ದಾರಿ ಆಂಧ್ರಪ್ರದೇಶಕ್ಕೆ ಕಲ್ಪಿಸುವ ರಸ್ತೆಯಾಗಿದ್ದು ಈಗ ನಿರ್ಮಾಣವಾಗುತ್ತಿರುವ ಅಂಡರ್ ಪಾಸ್ ಬ್ರಿಡ್ಜ್ ಚಿಕ್ಕದಾಗಿ ನಿರ್ಮಿಸುತ್ತಿದ್ದು ಇದರಿಂದ ರೈತರಿಗೆ ಮತ್ತು ಮಾರಾಟಗಾರರಿಗೆ ಈ ಮಾರ್ಗವಾಗಿ ಹೋಗಲು ತೊಂದರೆಯಾಗುತ್ತದೆ, ಬ್ರಿಡ್ಜ್ ಚಿಕ್ಕದಾದರೆ ರೈತರು ಮಾರಾಟ ಮಾಡಲು ಹೋಗುವ ವಾಹನಗಳು ಹೋಗಲು ಆಗುವುದಿಲ್ಲ, ಭಾರತ ಮಾಲಾ ರಾಷ್ಟ್ರೀಯ ಹೆದ್ದಾರಿ 150ಸಿ ನಿರ್ಮಿಸುತ್ತಿರುವ ಅಂಡರ್ ಗ್ರೌಂಡ್ ಬ್ರಿಡ್ಜ್ ಕಾಮಗಾರಿಯನ್ನು ಕೂಡಲೇ ನಿಲ್ಲಿಸಿ. ಇನ್ನೂ ಅಗಲ ಮತ್ತು ಎತ್ತರ ಮಾಡಿಸಲು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದು ಈ ಭಾಗದ ಅನೇಕ ರೈತರು ಮತ್ತು ವಿವಿಧ ಗ್ರಾಮಗಳಿಗೆ ಹೋಗುವ ವಾಹನಗಳಿಗೆ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕೆಂದು ತಹಸೀಲ್ದಾರ್ ರವರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ದೇವಿಂದ್ರಪ್ಪಗೌಡ ಮಾಲಿ ಪಾಟೀಲ್, ಮಲ್ಲಣ್ಣ ನೀಲಹಳ್ಳಿ, ಫಕೀರ್ ಅಹ್ಮದ ಮರಡಿ, ಮಂಜುನಾಥ ಉಪ್ಪಾರ ಕೋನಹಳ್ಳಿ, ಜಲಾಲ್ ಸಾಬ, ಖಾಸಿಂಸಾಬ ಮುಲ್ಲಾ, ದುರ್ಗಪ್ಪ ಕರಿಗುಡ್ಡ, ಹುಲಗಪ್ಪ ಟನಕೇದಾರ, ಸಕ್ರೆಪ್ಪ ಕೋನಹಳ್ಳಿ, ಇದ್ದರು.

# ಮಹಾಶಿವರಾತ್ರಿ ಪ್ರಯುಕ್ತ ಬಸವೇಶ್ವರ ದೇವಸ್ಥಾನಕ್ಕೆ ಭಕ್ತರ ದಂಡು

• ಮಲ್ಲಮ್ಮ ನುಡಿ ವಾರ್ತೆ ಕುರುಗೋಡು



ಪಟ್ಟಣದ ಆರಾಧ್ಯ ದೈವ ಶ್ರೀ ದೊಡ್ಡಬಸವೇಶ್ವರ ದೇವಸ್ಥಾನಕ್ಕೆ, ಇಂದು ಮಹಾ ಶಿವರಾತ್ರಿಯ ಪ್ರಯುಕ್ತ, ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಬಂದು ಶಿವನ ಪ್ರಿಯ ನಂದಿಯ ಸ್ವರೂಪ ಶ್ರೀ ದೊಡ್ಡಬಸವೇಶ್ವರ ಸ್ವಾಮಿಯ ದರ್ಶನ ಪಡೆದರು. ದೇವಸ್ಥಾನದಲ್ಲಿ ದೊಡ್ಡ ಬಸವೇಶ್ವರ ಸ್ವಾಮಿಗೆ ಮತ್ತು ಶಿವಲಿಂಗಕ್ಕೆ ವಿಶೇಷ ಪೂಜೆ ನೆರವೇರಿಸಿ, ಕಾಯಿ ಕರ್ಪೂರ ಸಲ್ಲಿಸಿದರು. ಮಹಾಶಿವರಾತ್ರಿ ಪ್ರಯುಕ್ತ ದೇವಸ್ಥಾನದಲ್ಲಿ ಬೆಳಗಿನ ಜಾವದಿಂದ ವಿಶೇಷ ಅಭಿಷೇಕ ಪೂಜೆ ಧಾರ್ಮಿಕ ಕಾರ್ಯಕ್ರಮಗಳನ್ನು ನೆರವೇರಿಸಲಾಯಿತು. ದೇವಸ್ಥಾನಕ್ಕೆ ಹೂವಿನಹಾರ, ತಳಿರು ತೋರಣಗಳಿಂದ ವಿಶೇಷ ಅಲಂಕಾರ ಮಾಡಲಾಗಿತ್ತು. ಇದೇವೇಳೆ ಬೆಳಗ್ಗೆ ದೊಡ್ಡ ಬಸವೇಶ್ವರಸ್ವಾಮಿಗೆ ವಿಶೇಷ ಪೂಜೆ ನೆರವೇರಿದ ನಂತರ, ದೇವಸ್ಥಾನ ಸಮಿತಿ ವತಿಯಿಂದ ಪಟ್ಟಣದ ಹಿರಿಯ ಮುಖಂಡರು, ಭಕ್ತಾದಿಗಳ ನೇತೃತ್ವದಲ್ಲಿ, ಜಾತ್ರೆಯ ಪ್ರಯುಕ್ತ ತೇರಿನ ಗಡ್ಡೆಯನ್ನು ಜಾತ್ರೆಗೆ ಅಲಂಕಾರಗೊಳಿಸಲು ಹೊರಗೆ ತರುವ ಧಾರ್ಮಿಕ ಕಾರ್ಯಕ್ರಮ ನೆರವೇರಿಸಲಾಯಿತು. ತೇರು ಹೊರಗೆ ಎಳೆಯುವ ಕಾರ್ಯಕ್ರಮದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು. ಇಂದು ಶಿವರಾತ್ರಿಯ ಪ್ರಯುಕ್ತ ದೇವಸ್ಥಾನದಲ್ಲಿ ರಾತ್ರಿ ವಿಶೇಷ ಪೂಜೆ ಕಾರ್ಯಕ್ರಮಗಳನ್ನು, ಭಜನೆ, ಪ್ರವಚನ ಏರ್ಪಡಿಸಲಾಗಿರುವ ಕುರಿತು ಭಕ್ತರಿಂದ ಮಾಹಿತಿ ತಿಳಿದು ಬಂತು. ಕುರುಗೋಡು ಮತ್ತು ವ್ಯಾಪ್ತಿಯ ಗ್ರಾಮಗಳಿಂದ ಮತ್ತು ನಾಡಿನ ವಿವಿಧ ಭಾಗಗಳಿಂದ ಶ್ರೀ ದೊಡ್ಡಬಸವೇಶ್ವರ ಸ್ವಾಮಿಯ ಭಕ್ತರು ದರ್ಶನಕ್ಕಾಗಿ ದೇವಸ್ಥಾನದಲ್ಲಿ ಜಮಾಯಿಸಿರುವುದು ಭಕ್ತರ ದಂಡು ಹರಿದುಬರುತ್ತಿರುವುದು ಮಹಾಶಿವರಾತ್ರಿ ಹಬ್ಬದ ಧಾರ್ಮಿಕತೆಯು ಎದ್ದು ಕಾಣುತ್ತಿತ್ತು.

# ಪ್ರೇಕ್ಷಕರ ಗಮನ ಸೆಳೆದ ಚಿತ್ರಕಲೆ, ಎತ್ತಿನ ಬಂಡಿ



ಕುರುಗೋಡು . ಪಟ್ಟಣದಲ್ಲಿ ಇಂದು ಆರಂಭಗೊಂಡ ಕುರುಗೋಡು ಉತ್ಸವದಲ್ಲಿ, ಹವ್ಯಾಸಿ ಚಿತ್ರಕಲಾವಿದರಿಂದ ಬಿಡಿಸಲಾದ ವಿಭಿನ್ನ ಚಿತ್ರಕಲೆಯು ಪ್ರೇಕ್ಷಕರ ಮನಸ್ಸನ್ನು ಸೆಳೆಯಿತು. ಉತ್ಸವದ ಭಾಗವಾಗಿ ಇಂದು ಬೆಳಗ್ಗೆ 7 ಗಂಟೆಯಿಂದ, ವದ್ದಟ್ಟಿ ಕ್ರಾಸ್ನಿಂದ ಕುರುಗೋಡು ಶ್ರೀ ದೊಡ್ಡಬಸಪ್ಪನ ಗುಡಿಯವರೆಗೆ ಕಂಪ್ಲಿ ಕ್ಷೇತ್ರ ಶಾಸಕ ಜೆ.ಎನ್.ಗಣೇಶ ರಿಂದ ಮ್ಯಾರಥಾನ್ ಓಟಕ್ಕೆ ಚಾಲನೆ ನೀಡಲಾಯಿತು. ಯುವಕರ ವಿಭಾಗದ, ಮತ್ತು 40 ವರ್ಷ ಮೇಲ್ಪಟ್ಟವರ ವಿಭಾಗದಲ್ಲಿ ಆಸಕ್ತರು ಪಾಲ್ಗೊಂಡು ಪ್ರೇಕ್ಷಕರ ಗಮನ ಸೆಳೆದರು. ಬೆಳಿಗ್ಗೆ 9 ಗಂಟೆಯಿಂದ ರೈತಾಪಿ ವರ್ಗದ 100 ಕ್ಕೂ ಹೆಚ್ಚು ಎತ್ತಿನಬಂಡಿ ಪ್ರದರ್ಶನವು ಕುರುಗೋಡು ಮಿನಿ ವಿಧಾನಸೌಧದಿಂದ, ಪಟ್ಟಣದ ಮುಖ್ಯ ಸರ್ಕಲ್ ವರೆಗೆ ನಡೆಸಲಾಯಿತು ಎತ್ತಿನ ಬಂಡಿ ಪ್ರದರ್ಶನದಲ್ಲಿ ಎತ್ತುಗಳಿಗೆ ರೈತರು ಭಿನ್ನವಾಗಿ ಅಲಂಕಾರ ಮಾಡಿ ನೋಡುಗರ ಗಮನ ಸೆಳೆಯುವಂತಿತ್ತು. ಎತ್ತಿನ ಬಂಡಿ ರೈತರಿಗೆ ರೈತರ ಶಾಲು ಹಾಕಿ ಸನ್ಮಾನಿಸಿ ಗೌರವಿಸಲಾಯಿತು. ನಂತರ 10 ಗಂಟೆಯಿಂದ ಪಟ್ಟಣದ ಸ.ಮಾ.ಹಿ.ಪ್ರಾ.ಶಾಲೆಯಲ್ಲಿ ಚಿಣ್ಣರ ಚಿತ್ರಕಲಾ ಉತ್ಸವಕ್ಕೆ ಚಾಲನೆ ನೀಡಲಾಯಿತು. ಚಿಕ್ಕ ಮಕ್ಕಳು ಬಣ್ಣಬಣ್ಣದ ಚಿತ್ರಕಲೆಗಳನ್ನು ಬಿಡಿಸಿ ನೋಡುಗರ ಪ್ರಸಂಶೆ ಗಳಿಸಿದರು. 10:30ಕ್ಕೆ ದೊಡ್ಡಬಸವೇಶ್ವರ ದೇವಸ್ಥಾನದ ಎದುರುಗಡೆ, ಕಂಪ್ಲಿ ರಸ್ತೆಯಲ್ಲಿ ಮತ್ತು ಸುಂಕ್ಲಮ್ಮ ದೇವಸ್ಥಾನದ ಹತ್ತಿರ ಮಹಿಳೆಯರ ರಂಗೋಲಿ ಉತ್ಸವಕ್ಕೆ ಚಾಲನೆ ನೀಡಲಾಯಿತು. ನೂರಾರು ಮಹಿಳೆಯರು ರಂಗೋಲಿ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು. 11:30 ರಿಂದ ಪುರುಷರಿಗೆ ಕೆಸರುಗದ್ದೆ ಓಟ, ಮತ್ತು ಮಹಿಳೆಯರಿಗೆ ಹಗ್ಗ ಜಗ್ಗಾಟ ಕ್ರೀಡೆಗಳು ನಡೆದವು. ಮಹಿಳೆಯರು ತಾವೇನು ಕಡಿಮೆ ಇಲ್ಲ ಎನ್ನುವಂತೆ ಆಟಗಳಲ್ಲಿ ಭಾಗವಹಿಸಿ ಕ್ರೀಡಾ ಮನೋಭಾವ ಮೆರೆದರು. ಮಧ್ಯಾಹ್ನದ ನಂತರ ವಿವಿಧ ಜನಪದ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಯಿತು. ಜನಪ್ರತಿನಿಧಿಗಳು ಅಧಿಕಾರಿ ವರ್ಗದವರು ತಾಲೂಕಿನ ವಿವಿಧ ಗ್ರಾಮಗಳಿಂದ ಸಾರ್ವಜನಿಕರು ಪಾಲ್ಗೊಂಡಿದ್ದರು.

# ಜನಸಾಮಾನ್ಯರ ಬದುಕು ಬವಣೆಗಳಿಗೆ ಧ್ವನಿಯಾಗಿ: ಮದರಿ

• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ ಹೊಸಪೇಟೆ




ನವಕಾಲದ ಯುವ ಕವಿಗಳು ಜನಸಾಮಾನ್ಯರ ಬದುಕು ಬವಣೆಗಳಿಗೆ ಧ್ವನಿಯಾಗಬೇಕು. ಸಾಹಿತ್ಯ ಪರಂಪರೆಯಲ್ಲಿ ದಾಖಲಾಗದ ಬೀದಿಯಲ್ಲಿರುವ ಕೂಲಿ ಕಾರ್ಮಿಕರ ಜೀವನವನ್ನು ಕವಿತೆಗಳಲ್ಲಿ ವ್ಯಕ್ತಪಡಿಸಿ ಅವರ ಕಥೆಗಳನ್ನು ಹೇಳಬೇಕು ಎಂದು ಹಿರಿಯ ಸಾಹಿತಿ ಎ.ಎಂ.ಮದರಿ ಯುವಕವಿಗಳಿಗೆ ಸಲಹೆ ನೀಡಿದರು.

ಹಂಪಿ ಉತ್ಸವದ ಅಂಗವಾಗಿ ವಿರೂಪಾಕ್ಷೇಶ್ವರ ವೇದಿಕೆಯಲ್ಲಿ ಭಾನುವಾರ ನಡೆದ ಯುವಕವಿಗೋಷ್ಠಿ ಉದ್ಘಾಟಿಸಿ ಎ.ಎಂ.ಮದರಿ ಮಾತನಾಡಿದರು.

ಕವಿತೆ ಹಾಗೂ ಕಾವ್ಯರಚನೆಗೆ ಅರ್ಥಗರ್ಭಿತವಾದ ಭಾಷೆ, ಶೈಲಿ, ಆಕೃತಿ ಬಳಹ ಮುಖ್ಯವಾದವು. ಯುವಕವಿಗಳು ಇವನ್ನು ನಿರ್ಲಕ್ಷಿಸಬಾರದು. ಹಳೆಗನ್ನಡ, ವಚನ, ತತ್ವಪದ, ಜಾನಪದ, ದಾಸವಾಣಿ ಹಾಗೂ ನವೋದಯ ಸಾಹಿತ್ಯ ಯುವ ಕವಿಗಳಿಗೆ ಕವಿತೆ ರಚಿಸಲು ದಿಕ್ಸೂಚಿಯಾಗಿವೆ. ಕೇವಲ ವಿದ್ವಾಂಸರು ಬಳಸುವ ಪ್ರತಿಮೆ, ಪ್ರತೀಕಗಳಂತಹ ತಾಂತ್ರಿಕ ಪದಗಳಿಂದ ಸಾಹಿತ್ಯವಾಗುವುದಿಲ್ಲ. ಬದಲಿಗೆ, ಸಾಮಾನ್ಯ ಜನರ ಬದುಕಿನ ನೋವು–ನಲಿವುಗಳನ್ನು ಒಳಗೊಂಡ ವಾಸ್ತವದ ಹಾದಿಯೇ ನಿಜವಾದ ಸಾಹಿತ್ಯ. ಕವಿತೆ ಎಂಬುದು ಮನಸ್ಸಿನ ಭಾರ ಇಳಿಸಿಕೊಳ್ಳುವ ಮತ್ತು ಮಾನಸಿಕ ಸ್ವಾಸ್ಥ್ಯ ಕಾಪಾಡುವ ಮಾರ್ಗವೂ ಹೌದು ಎಂದು ಅವರು ಅಭಿಪ್ರಾಯಪಟ್ಟರು.

ಭಟ್ಟಂಗಿತನ ಬೇಡ, ಸ್ವಾಭಿಮಾನಿಗಳಾಗಿರಿ:

ಕವಿ, ಕಲಾವಿದ, ಸಾಹಿತಿ ಅಧಿಕಾರಸ್ಥರನ್ನು ಓಲೈಸುವ ಭಟ್ಟಂಗಿಗಳಾಗಬಾರದು. ಸ್ವಾಭಿಮಾನಿಗಳಾಗಿದ್ದು, ಅಧಿಕಾರಸ್ಥರ ತಪ್ಪುಗಳನ್ನು ಪ್ರಶ್ನಿಸುವ ನೈತಿಕತೆ ಉಳ್ಳವರಾಗಬೇಕು. ಪದಗಳ ಸ್ತುತಿಯಿಂದ ಕ್ಲೇಶವೆನಿಸುವ ಕವಿತೆ ರಚಿಸುವ ಬದಲು, ಜೀವನದ ಅನುಭವಗಳಿಗೆ ಪದಗಳ ರೂಪ ನೀಡಿ ಜೀವಂತಿಕೆ ಭಾವವನ್ನು ಕವಿತೆಗೆ ನೀಡಬೇಕು. ಇಂದಿನ ಪೀಳಿಗೆಯ ಬಹುತೇಕ ಯುವಕವಿಗಳ ಕವಿತೆಗಳು ಜನರ ಬದುಕನ್ನು ಚಿತ್ರಿಸುವ ಬದಲು, ಅವರ ಬದುಕನ್ನು ಅಂತ್ಯಗೊಳಿಸುವ ಹಾಗೆ ಭಾಸವಾಗುತ್ತವೆ ಎಂದು ಎ.ಎಂ.ಮದರಿ ವಿಷಾದ ವ್ಯಕ್ತಪಡಿಸಿದರು.

ಇತಿಹಾಸ, ಪರಂಪರೆ ಹಾಗೂ ವರ್ತಮಾನಕ್ಕೆ ಸಂವಾದಿಯಾದ ಯುವ ಕವಿಗೋಷ್ಠಿ :

ಯುವಕವಿಗೋಷ್ಠಿಯಲ್ಲಿ 38 ಯುವ ಸಾಹಿತಿಗಳು ಸ್ವರಚಿತ ಕವನ ಹಾಗೂ ಕವಿತೆಗಳನ್ನು ವಾಚಿಸಿದರು. ಇತಿಹಾಸ, ಪರಂಪರೆ ಹಾಗೂ ವರ್ತಮಾನಕ್ಕೆ ಸಂವಾದಿಯಾದ ಕವನ ಹಾಗೂ ಕವಿತೆಗಳು ಸಹೃದಯರ ಮೆಚ್ಚುಗೆ ಗಳಿಸಿದವು. ವಿಜಯನಗರ ಸಾಮ್ರಾಜ್ಯದ ಐತಿಹ್ಯ, ಪೌರಾಣಿಕ ಚಿತ್ರಣ, ಪ್ರಸ್ತಕ ರಾಜಕೀಯ, ಧರ್ಮ ಸಂಘರ್ಷ, ತಂದೆಯ ಪ್ರೀತಿ, ಹೆಣ್ಣು ಮಗು ಹಾಗೂ ಸ್ತ್ರೀ ಸಂವೇದನೆಗಳುಳ್ಳ ಕವಿತೆಗಳನ್ನು ರಚಿಸುವ ಮೂಲಕ ಯುವ ಕವಿಗಳು ಒಟ್ಟಾರೆ ಸಮಕಾಲೀನ ಸಮಾಜದಲ್ಲಿನ ಅಂಶಗಳಿಗೆ ಕೈಗನ್ನಡಿಯಾದರು.

ಮುಗಿಲ ಹಕ್ಕಿ ಎಂಬ ಕಾವ್ಯ ನಾಮದೊಂದಿಗೆ ಯುವ ಕವಿ ಮೈಲಾರಪ್ಪ ಬೂದಿಹಾಳ ತಮ್ಮ 'ಬಟ್ಟೆ ಮತ್ತು ಧರ್ಮ' ಎನ್ನುವ ಕವಿತೆ ವಾಚಿಸಿದರು. ಪ್ರಸ್ತುತ ಸಮಾಜದಲ್ಲಿ ನೇಕಾರ ನೇಯ್ದ ಬಣ್ಣದ ಬಟ್ಟೆಗಳಿಗೂ ಧರ್ಮದ ಲೇಪನವಾಗಿದೆ. ಪ್ರತಿಯೊಂದು ಬಣ್ಣದ ಬಟ್ಟೆ ಧರ್ಮ ಲಾಂಚನವಾಗಿ ರಾರಾಜಿಸುತ್ತಿವೆ. ಬಟ್ಟೆನೇಯ್ದೆಯ ನೇಕಾರ ಬದುಕು ಮಾತ್ರ ಹಸಿವಿನಿಂದ ಕಂಗೆಟ್ಟಿದೆ. ಧರ್ಮಗಳ ದಂಗಲ್ ಬಿಟ್ಟು ಒಂದಾಗಿ ಬಾಳೋಣ ಎನ್ನುವ ಸಂದೇಶ ಕವಿತೆಯಿಂದ ಮೂಡಿಬಂತು.

ಚುನಾವಣೆ ಆಮಿಷಗಳ ಬಗ್ಗೆ ಜಾಗೃತಿ:

ಬರಹಗಾರ ಹಾಗೂ ವಕೀಲ ಅಯ್ಯಣ್ಣ ನಾಯಕ ಪಾಮನಕಲ್ಲೂರು ಚುನಾವಣೆಯಲ್ಲಿ ಹೆಂಡ, ಸೀರೆ, ಹಣ ಹಂಚಿ ಮತದಾರರಿಗೆ ಆಮಿಷ ಒಡ್ಡುವ ಮೂಲಕ ಮತ ಪಡೆಯುವ ರಾಜಕಾರಣಿಗಳ ಬಗ್ಗೆ 'ಚುನಾವಣೆ ಬಂತಣ್ಣಾ' ಎನ್ನುವ ಕವನ ಮೂಲಕ ಮತದಾರರು ಎಚ್ಚರಿಸಿದರು. ಮತದಾನದಲ್ಲಿ ದೇಶದ ಭವಿಷ್ಯ ಅಡಗಿದೆ. ಧನದಾಹಿ, ಭ್ರಷ್ಟ, ಕೋವುವಾದಿ ರಾಜಕಾರಣಿಗಳನ್ನು ಧಿಕ್ಕರಿಸಿ ಉತ್ತಮ ದೇಶ ಕಟ್ಟಲು ಕವನದ ಮೂಲಕ ಕರೆ ನೀಡಿದರು.

ಅನ್ಯಾಯ ಹಾಗೂ ದೌರ್ಜನ್ಯಕ್ಕೆ ವಿರೋಧ:

ವಿದ್ಯಾರ್ಥಿನಿ ಬಿ.ಎಂ.ಪ್ರಿಯಾಂಕ 'ಯಾರಿಗೆ ಬಂತು ಸ್ವಾತಂತ್ರ್ಯ ಎಂದು ಪ್ರಶ್ನಿಸುವ ಧ್ವನಿಯಲ್ಲಿಯೇ ತಮ್ಮ ಕವನ ವಾಚಿಸಿದಳು. ಜಾತಿ ಧರ್ಮ, ರೈತರ ಬವಣೆ, ಸರ್ಕಾರದ ಆರ್ಥಿಕ ನೀತಿ, ಹೆಣ್ಣು ಮಕ್ಕಳು ಹಾಗೂ ಮುಗ್ದ ಮಕ್ಕಳ ಮೇಲಿನ ದೌರ್ಜನ್ಯ, ಭಯೋತ್ಪಾದನೆಗಳ ವಿರುದ್ಧ ಗುಡುಗಿದಳು. ಪ್ರಿಯಾಂಕ ಅವರ ಕವಿತೆ ದಲಿತ ಕವಿ ಸಿದ್ದಲಿಂಗಯ್ಯ ಅವರ 'ಯಾರಿಗೆ ಬಂತು, ಎಲ್ಲಿಗೆ ಬಂತು ನಲವತ್ತೇಳರ ಸ್ವಾತಂತ್ರ 'ಕವಿತೆಯನ್ನು ನೆನಪಿಸಿತು.

ವ್ಯಕ್ತವಾದ ಸ್ತ್ರೀ ಸಂವೇದನೆ :

ಕವಿಗೋಷ್ಠಿಯಲ್ಲಿ ಲಿಂಗಭೇದವಿಲ್ಲದೇ, ಯುವಕ ಯುವತಿಯರು ಸ್ತ್ರೀ ಸಂವೇದನೆವುಳ್ಳ ಕವಿತೆಗಳನ್ನು ವಾಚಿಸುವ ಮೂಲಕ ಸ್ತ್ರೀ ವಿಮೋಚನೆಗೆ ಧ್ವನಿಯಾದರು.

ಶೇಖ್ ಮೊಹಮ್ಮದ್ ಷಾಜಿ 'ಇದೊಮ್ಮೆ ನಾನು ಹೆಣ್ಣಲ್ಲ ಸುಮ್ಮನಿರಿ' ಎಂಬ ಕವನ ವಾಚಿಸಿ, ಹೆಣ್ಣು ಭ್ರೂಣ ಹತ್ಯ, ಬಾಲಕಿ ಹಾಗೂ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಸೂಕ್ಷ ವಿಚಾರಗಳನ್ನು ಮನಮುಟ್ಟುವಂತೆ ಹೇಳಿದರು. ಅವರ ಕವನದ ಕೊನೆಯ ಸಾಲು 'ನನ್ನನ್ನ ಭ್ರೂಣ ಹತ್ಯೆ ಮಾಡಿದ್ದರೆ, ಎಷ್ಟೋ ಚೆನ್ನಾಗಿ ಇರುತ್ತಿತ್ತು ಬಿಡಿ..!!' ಸಮಾಜದ ವಿರುದ್ಧ ಹೋರಾಡಿ ಸೋತ ಹೆಣ್ಣು ಮಗಳ ಆರ್ತನಾದದಂತೆ ತೋರಿತು.

ಡಾ.ಅನಸೂಯ ವೈ.ಟಿ ಅವರ 'ಸೂಳೆ' ಕವನ ವೇಶ್ಯಾವೃತ್ತಿಯಲ್ಲಿ ತೊಡಗಿರುವ ಮಹಿಳೆಯ ವಿವಿಧ ಮಜಲುಗಳನ್ನು ಸಹೃದಯರ ಎದುರು ತೆರೆದಿಟ್ಟಿತ್ತು. 12ನೇ ಶತಮಾನದಲ್ಲಿ ಬಸವಣ್ಣ ಸೂಳೆ ಸಂಕವ್ವೆಯನ್ನು ಶಿವಶರಣೆಯಾಗಿಸಿದ ಪರಿಯನ್ನು ವರ್ಣಿಸಿತು.

ಹಂಪಿ ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿನಿ ಶ್ವೇತಾ ಬಾಳಿ 'ಬಡಿಸುವಳು ಬರಿದಾಗದಂತೆ!' ಎನ್ನುವ ಕವನದಲ್ಲಿ ಒಡಲ ಹಾಗೂ ದೇಹದ ಹಸಿವನ್ನು ತೀರಿಸುವ ಹೆಣ್ಣಿನ ತಮುಲಗಳನ್ನು ತೆರದಿಟ್ಟಿತು. ಹೊಟ್ಟೆಯ ಹಸಿವೆಗೆ ಬಗೆ ಬಗೆ ಅಡುಗೆ ಮಾಡಿ ಬಡಿಸುವ ಹೆಣ್ಣು, ಪುರಷರ ಕಾಮದಾಹಕ್ಕೂ ಬಲಿಯಾಗುತ್ತಾಳೆ. ಅಡುಗೆ ಪಾತ್ರೆ ಹಾಗೂ ಅವಳ ದೇಹ ಅಕ್ಷಯ ಪಾತ್ರೆಯಲ್ಲ, ಎರಡು ಸಹ ಬರಿದಾಗುತ್ತವೆ. ಪುರುಷ ವಯಸ್ಸಾದ ಹೆಣ್ಣಿ ಸಾಂಗತ್ಯ ತೊರೆದು, ಮಗದೊಬ್ಬಳ ಸಂಗಕ್ಕೆ ಹಾತೋರೆಯುತ್ತಾನೆ. ರುಚಿ ರುಚಿಯಾದ ಅಡುಗೆ ಹುಡುಕಿ ಅಲೆಯುತ್ತಾನೆ. ಊಟದ ವರ್ಣನೆಯೊಂದಿಗೆ ಕಾಮದ ವಾಂಚೆಯನ್ನು ಸಮೀಕರಿಸಿ ಕವನ ರಚಿಸಿರುವುದು ಸಭಿಕರ ಮನಸೆಳೆಯಿತು.

'ಲಿವಿಂಗ್ ಟುಗೆದರ್' ಸಹಜೀವನ ಪದ್ದತಿ ಬಗ್ಗೆ ರೇಣುಕಾ ಹೆಳವರ್ ಕವನ ವಾಚಿಸಿ, ನವಯುಗದ ಯುವಜನತೆ ಕ್ಷಣಿಕ ಪ್ರೀತಿ, ಪ್ರೇಮ, ಕಾಮಗಳ ಅಡ್ಡಪರಿಣಾಮವನ್ನು ಕೇಳುಗರ ಮುಂದೆ ತೆರೆದಿಟ್ಟಿತು. ಕವನದಲ್ಲಿ ನೈಜ ಘಟನೆಗಳನ್ನು ಉಲ್ಲೇಖಿಸಿ ಭಾರತೀಯ ಪರಂಪರೆಯಲ್ಲಿ ಪವಿತ್ರ ಪ್ರೇಮಕ್ಕೆ ಕುರುಹಾದ ಅಕ್ಕಮಹಾದೇವಿ, ಅಹಲ್ಯ, ರಾಧೆಯ ಆದರ್ಶವನ್ನು ಸಾರಿತು.

ಉಳಿದಂತೆ ಇತರೆ ಯುವಕವಿಗಳು ಹಂಪಿಯ ಇತಿಹಾಸ, ನಾಡು ನುಡಿ ಹಾಗೂ ತಂದೆ–ತಾಯಿ, ಧರ್ಮ ರಾಜಕಾರಣದ ಕುರಿತಾದ ಕವನಗಳನ್ನು ವಾಚಿಸಿದರು.

ಹಂಪಿ ಕನ್ನಡ ವಿವಿ ನಿವೃತ್ತ ಪ್ರಾಧ್ಯಾಪಕ ಡಾ.ಕೆ. ರವೀಂದ್ರನಾಥ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ಕೂಡ್ಲಗಿ ತಹಶೀಲ್ದಾರ್ ನೇತ್ರಾವತಿ, ಸಾಹಿತಿ ಡಾ.ಚನ್ನಬಸಪ್ಪ ಚಿಲ್ಕರಾಗಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಬೋರೇಗೌಡ, ಉಪನ್ಯಾಸಕ ಎಂ. ಆರ್.ವಾಗೀಶ, ಕನ್ನಡ ಸಾಹಿತ್ಯ ಪರಿಷತ್ ನಿಷ್ಠಿ ರುದ್ರಪ್ಪ ಸೇರಿದಂತೆ ಸಾಹಿತಿಗಳು, ಗಣ್ಯರು ಇದ್ದರು.

# ಸಂತ ಸೇವಾಲಾಲ್‌ರು ಇಡೀ ಸಮಾಜಕ್ಕೆ ಶಾಂತಿಯ ಸಂದೇಶ ಸಾರಿದರು: ರಹೀಂ ಖಾನ್




ಬೀದರ ಸಂತ ಸೇವಾಲಾಲ್ ಮಹಾರಾಜರು ಇಡೀ ಸಮಾಜಕ್ಕೆ ಒಳಿತನ್ನು ಬಯಸಿ ಶಾಂತಿಯ ಸಂದೇಶ ಸಾರಿದವರು. ಅವರು ಮಾನವ ಕುಲಕ್ಕೆ ಸುಧಾರಣೆಗೆ ಪ್ರಯತ್ನಿಸಿದವರು ಎಂದು ಪೌರಾಡಳಿತ ಹಾಗೂ ಹಜ್ ಸಚಿವರಾದ ರಹೀಂ ಖಾನ್ ಹೇಳಿದರು.

ಅವರು ರವಿವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆವತಿಯಿಂದ ನಗರದ ಪೂಜ್ಯ ಚನ್ನಬಸವ ಪಟ್ಟದೇವರು ರಂಗಮಂದಿರದಲ್ಲಿ ಆಯೋಜಿಸಿದ್ದ ಸಂತ ಸೇವಾಲಾಲ್‌ರ 287ನೇ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಸಂತ ಸೇವಾಲಾಲರಂತಹ ದಾರ್ಶನಿಕರು ಒಂದು ಜಾತಿಗೆ ಸೀಮಿತರಲ್ಲ. ಅವರು ಬಂಜಾರ ಸಮಾಜ ಸುಧಾರಣೆ ಮತ್ತು ಅಭಿವೃದ್ಧಿಗಾಗಿ ಬಹಳಷ್ಟು ಉತ್ತಮ ಸಂದೇಶ ನೀಡಿದ್ದಾರೆ. ಇವರ ವಚನ, ಸಂದೇಶಗಳನ್ನು ನಾವು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಪ್ರತಿಯೊಬ್ಬರೂ ಶಿಕ್ಷಣವಂತರಾದಾಗ ಮಾತ್ರ ಸಮಾಜ ಏಳ್ಗೆ ಹೊಂದಲು ಸಾಧ್ಯ. ಆದ್ದರಿಂದ ಸಮಾಜದ ಜನತೆ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಬೀದರನ ಮರ್ಕಲ್ ಸರ್ಕಾರಿ ಪ್ರೌಢ ಶಾಲೆಯ ಸಹ ಶಿಕ್ಷಕ ಬಳವಂತರಾವ್ ರಾಥೋಡ್ ಅವರು ಸಂತ ಸೇವಾಲಾಲ್ ಮಹಾರಾಜರ ಕುರಿತು ಅತಿಥಿ ಉಪನ್ಯಾಸನವನ್ನು ನೀಡಿದರು.

ಕಾರ್ಯಕ್ರಮಕ್ಕೂ ಮುಂಚಿತವಾಗಿ ಸಂತ ಸೇವಲಾಲ ಮಾಹಾರಾಜರ ಭಾವಚಿತ್ರ ಮೆರವಣಿಗೆಯು ನಗರದ ಶಿವಾಜಿ ವೃತ್ತ, ಭಗತಸಿಂಗ್ ವೃತ್ತ, ಬಸವೇಶ್ವರ ವೃತ್ತ, ಅಂಬೇಡ್ಕರ ವೃತ್ತ, ಜನರಲ್ ಕರಿಯಪ್ಪ ವೃತ್ತದಿಂದ ಮೂಲಕ ಹಾದು ರಂಗಮಂದಿರದವರೆಗೆ ನಡೆಯಿತು.

ಈ ಸಂದರ್ಭದಲ್ಲಿ ಬೀದರ ನಗರಸಭೆ ಅಧ್ಯಕ್ಷ ಮಹಮ್ಮದ್ ಗೌಸ್, ಜಿಲ್ಲಾ ಬಂಜಾರಾ ಸಮಾಜದ ಅಧ್ಯಕ್ಷರಾದ ಗೋವರ್ಧನ ರಾಠೋಡ, ಮುಖಂಡರಾದ ಬಸವರಾಜ ಪವಾರ, ಮಾಣಿಕರಾವ ಪವಾರ, ವೀರಶೆಟ್ಟಿ ರಾಠೋಡ, ಗೋಪಾಲಸಿಂಗ ರಾಠೋಡ, ಕೀಶನರಾವ ರಾಠೋಡ ಸೇರಿದಮತೆ ಇತರರು ಉಪಸ್ಥಿತರಿದ್ದರು.

# ಕುರುಗೋಡು ಉತ್ಸವ: ಹಬ್ಬದ ವಾತಾವರಣ ಸೃಷ್ಟಿ
# ವಿವಿಧ ಕಾರ್ಯಕ್ರಮಗಳಿಗೆ ಶಾಸಕ ಗಣೇಶ್ ಚಾಲನೆ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಕುರುಗೋಡು ಉತ್ಸವದ ಅಂಗವಾಗಿ ಐತಿಹಾಸಿಕ ನಾಡು ಕುರುಗೋಡು ಪಟ್ಟಣದಲ್ಲಿ ಉತ್ಸವದ ಮೊದಲನೆಯ ದಿನವಾದ ಭಾನುವಾರ ಹಬ್ಬದ ವಾತಾವರಣ ಮನೆಮಾಡಿತ್ತು.

ಚೊಚ್ಚಲ ಕುರುಗೋಡು ಉತ್ಸವ 2026 ಜನಾಕರ್ಷಿಣಿಯವಾಗಿಸಲು ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕುರುಗೋಡು ತಾಲ್ಲೂಕು ಆಡಳಿತ ಹಲವು ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಿತ್ತು.



ಆರೋಗ್ಯಕ್ಕಾಗಿ ಓಟ:

ಸದೃಢ ಆರೋಗ್ಯಕ್ಕಾಗಿ ಓಟ ಎನ್ನುವಂತೆ ಉತ್ಸವದಲ್ಲಿ ಮ್ಯಾರಾಥಾನ್ ಓಟ ಆಯೋಜನೆ ಮಾಡಲಾಗಿತ್ತು.

ಮೊದಲನೆಯ ದಿನವಾದ ಭಾನುವಾರ, ಪಟ್ಟಣದ ಹೊರವಲಯದ ವದ್ದಟ್ಟಿ ಕ್ರಾಸ್‌ನಿಂದ ಕುರುಗೋಡು ಶ್ರೀ ದೊಡ್ಡ ಬಸವೇಶ್ವರ ದೇವಸ್ಥಾನದವರೆಗೆ ಹಮ್ಮಿಕೊಂಡಿದ್ದ ಮ್ಯಾರಾಥಾನ್ ಓಟಕ್ಕೆ ಕಂಪ್ಲಿ ಶಾಸಕರು ಹಾಗೂ ಕರ್ನಾಟಕ ರಾಜ್ಯ ಸಹಕಾರ ಕೈಮಗ್ಗ ನೇಕಾರರ ಮಹಾಮಂಡಳಿ ನಿಯಮಿತ (ಕಾವೇರಿ ಹ್ಯಾಂಡ್‌ಲೂಮ್ಸ್) ದ ಅಧ್ಯಕ್ಷರೂ ಆಗಿರುವ ಜೆ.ಎನ್. ಗಣೇಶ್ ಅವರು ಚಾಲನೆ ನೀಡಿದರು.

ಯುವಕರ, ಯುವತಿಯರ ಹಾಗೂ 40 ವರ್ಷ ಮೇಲ್ಪಟ್ಟ ಪುರುಷರ ವಿಭಾಗದಲ್ಲಿ ಮ್ಯಾರಾಥನ್ ಓಟ ಆಯೋಜಿಸಲಾಗಿತ್ತು. ಮ್ಯಾರಾಥಾನ್ ನಲ್ಲಿ ಎಲ್ಲರೊಟ್ಟಿಗೆ ಶಾಸಕರೂ ಓಟದಲ್ಲಿ ಪಾಲ್ಗೊಂಡಿದ್ದು ವಿಶೇಷವಾಗಿತ್ತು. ಬಳಿಕ ಪಟ್ಟಣದ ಮುಖ್ಯವೃತ್ತಕ್ಕೆ ಓಟದ ಮೂಲಕ ಮೊದಲು ಆಗಮಿಸಿದವರಿಗೆ ಬಹುಮಾನ ವಿತರಿಸಲಾಗಿತ್ತು.

ಗಮನಸೆಳೆದ ಎತ್ತಿನಬಂಡಿ ಪ್ರದರ್ಶನ:

ಕುರುಗೋಡು ಹಳ್ಳಿಗಳಿಂದ ಕೂಡಿದ ತಾಲ್ಲೂಕಾಗಿದ್ದು, ರೈತನ ನಿತ್ಯದ ಕಾಯಕ ಮತ್ತು ಗ್ರಾಮೀಣ ಸೊಗಡನ್ನು ಬಿಂಬಿಸಲು ಉತ್ಸವದಲ್ಲಿ ಎತ್ತಿನಬಂಡಿ ಪ್ರದರ್ಶನ ಆಯೋಜಿಸಲಾಗಿತ್ತು.

ತಾಲ್ಲೂಕಿನ ವಿವಿಧ ಗ್ರಾಮಗಳಿಂದ ರೈತರು ತಮ್ಮ ಜೋಡಿ ಎತ್ತುಗಳನ್ನು ಸಿಂಗರಿಸಿಕೊಂಡು ಬಂಡಿ-ಯ ಜೊತೆಗೆ ಪ್ರದರ್ಶನದಲ್ಲಿ ಭಾಗವಹಿಸಿದ್ದರು.

ಶಾಸಕ ಜೆ.ಎನ್.ಗಣೇಶ್ ಕುರುಗೋಡಿನ ಮಿನಿ ವಿಧಾನಸೌಧ ಬಳಿ ಚಾಲನೆ ನೀಡಿದರು. ಪ್ರದರ್ಶನದಲ್ಲಿ ಶಾಸಕರೂ ಬಂಡಿ ಸವಾರಿ ಮಾಡಿದ್ದು, ತಾವು ಸಹ ರೈತ ಕುಟುಂಬದವರೇ ಎಂಬುದನ್ನು ಸಾರಿ ಹೇಳುವಂತಿತ್ತು. ಸಾಲಾಗಿ ಸಾಗಿದ 60 ಕ್ಕೂ ಹೆಚ್ಚು ಎತ್ತಿನಬಂಡಿಗಳ ಪ್ರದರ್ಶನ ನೋಡುಗರ ಗಮನಸೆಳೆದವು. ಬಳಿಕ ಪಟ್ಟಣದ ಮುಖ್ಯವೃತ್ತದ ವರೆಗೆ ತಲುಪಿ ಅಂತ್ಯಗೊಂಡಿತು.

ಆಕರ್ಷಕ ರಂಗೋಲಿ ಸ್ಪರ್ಧೆ:

ಉತ್ಸವಕ್ಕೆ ಮೆರಗು ನೀಡಲು ಹಾಗೂ ಉತ್ಸವದಲ್ಲಿ ಮಹಿಳೆಯರು ಸಹ ಭಾಗವಹಿಸುವಿಕೆಗಾಗಿ ರಂಗೋಲಿ ಸ್ಪರ್ಧೆ ಆಯೋಜಿಸಲಾಗಿತ್ತು.

ಬಣ್ಣ-ಬಣ್ಣದ ರಂಗೋಲಿ ಪುಡಿಯ ಮೂಲಕ ಶ್ರೀ ದೊಡ್ಡ ಬಸವೇಶ್ವರ ದೇವಸ್ಥಾನ ಎದುರುಗಡೆಯಿಂದ ಕಂಪ್ಲಿ ರಸ್ತೆಯ ಪೆಟ್ರೋಲ್ ಪಂಪ್ ವರೆಗೂ ಬಣ್ಣ-ಬಣ್ಣದ ರಂಗೋಲಿ ಚಿತ್ತಾರದ ಮೂಲಕ ತಮ್ಮ ಕೈ ಚಮತ್ಕಾರ ಪ್ರದರ್ಶಿಸಿದರು.

ರಂಗೋಲಿಯಿಂದ ಮೂಡಿಬಂದ ಪಟ್ಟಣದ ಆರಾಧ್ಯ ದೇವರಾದ ದೊಡ್ಡಬಸವೇಶ್ವರ-ನೀಲಮ್ಮಳ ಆಕೃತಿ, ಶಿವನಂದಿ, ದೊಡ್ಡಬಸವೇಶ್ವರ ದೇವಸ್ಥಾನದ ಗೋಪುರ, ಕಾಂತಾರ ಚಿತ್ರದ ಮುಖ್ಯಭೂಮಿಕೆಯ ರಂಗೋಲಿ, 'ಬನ್ನಿ ಚೊಚ್ಚಲ ಕುರುಗೋಡು ಉತ್ಸವಕ್ಕೆ' ಎಂದು ಆಹ್ವಾನಿಸುವ ರಂಗೋಲಿ, 'ಸಾಮಾಜಿಕ ಜಾಲಾತಾಣಗಳಿಗೆ ವ್ಯಸನಿಗಳಾಗಬೇಡಿ' ಎಂದು ಸಾರುವ ಸಂದೇಶದ ರಂಗೋಲಿ ಸೇರಿದಂತೆ ಹಲವು ವೈವಿಧ್ಯಮ ರಂಗೋಲಿಗಳು ಹೆಂಗಳೆಯರ ಕೈಯಿಂದ ಮೂಡಿಬಂದಿದ್ದು, ಆಕರ್ಷಣೀಯವಾಗಿದ್ದರು. ಸ್ಪರ್ಧೆಯಲ್ಲಿ ಆಕರ್ಷಕ ರಂಗೋಲಿಗಳಿಗೆ ಪ್ರಥಮ, ದ್ವಿತೀಯ, ತೃತೀಯ ಬಹುಮಾನ ವಿತರಿಸಲಾಯಿತು. ಸ್ಪರ್ಧೆಯಲ್ಲಿ 130 ಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿ ರಂಗೋಲಿ ಚಿತ್ರ ಬಿಡಿಸಿದರು.

ಕೆಸರು ಗದ್ದೆ ಓಟ:

ಕುರುಗೋಡು ಪಟ್ಟಣ ಕೃಷಿ ಪ್ರಾಧಾನ್ಯ ತಾಲ್ಲೂಕಾಗಿದ್ದು, ಜನರ ಸಂಸ್ಕೃತಿ ಹೆಚ್ಚಾಗಿ ಅವರ ಕೃಷಿಭೂಮಿಯೊಂದಿಗೆ ಹೆಣೆದುಕೊಂಡಿದೆ. ಸಾಂಪ್ರದಾಯಿಕ ಕೃಷಿ ಸಂಸ್ಕೃತಿ ಬಿಂಬಿಸಲು ಕುರುಗೋಡು ಉತ್ಸವದಲ್ಲಿ ಪುರುಷರಿಗಾಗಿ ಪಟ್ಟಣದ ಬಾದನಹಟ್ಟಿ ರಸ್ತೆಯ ಪೆಟ್ರೋಲ್ ಬಂಕ್ ಎದುರುಗಡೆಯ ರಜಾಬ್ ಅಲಿಸಾಬ್ ಮತ್ತು ಸಹೋದರರ ಜಮೀನಿನಲ್ಲಿ ಕೆಸರು ಗದ್ದೆ ಓಟ ಆಯೋಜಿಸಲಾಗಿತ್ತು. ಶಾಸಕರು ಓಟಕ್ಕೆ ಚಾಲನೆ ನೀಡಿದರು. ತಾವೂ ಕೆಸರು ಗದ್ದೆಯಲ್ಲಿ ಓಡುವ ಮೂಲಕ ಉತ್ಸಾಹ ಹೆಚ್ಚಿಸಿದರು. ಬಳಿಕ ಮಹಿಳೆಯರಿಗಾಗಿ ಹಗ್ಗ-ಜಗ್ಗಾಟ ನೋಡುಗರ ಮನರಂಜಿಸಿತು.

ನಂತರ ಪಟ್ಟಣದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಚಿಣ್ಣರ ಚಿತ್ರಕಲಾ ಉತ್ಸವ, ಶ್ರೀ ದೊಡ್ಡ ಬಸವೇಶ್ವರ ದೇವಸ್ಥಾನ ಮುಂಭಾಗ ಹವ್ಯಾಸಿ ಚಿತ್ರಕಲಾವಿದರ ಚಿತ್ರಕಲಾ ಉತ್ಸವ ಜರುಗಿದವು. ಈ ವೇಳೆ ಕುರುಗೋಡು ಪುರಸಭೆಯ ಅಧ್ಯಕ್ಷ ಟಿ.ಶೇಖಣ್ಣ, ಕುರುಗೋಡು ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಸವನಗೌಡ, ತಹಶೀಲ್ದಾರ ನರಸಪ್ಪ ಸೇರಿದಂತೆ ತಾಲ್ಲೂಕು ಮಟ್ಟದ ಅಧಿಕಾರಿ-ಸಿಬ್ಬಂದಿ ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

# ಸಂಕುಚಿತ ಮನೋಭಾವ ತೊರೆಯಲು ಶಾಲಾ ವಾರ್ಷಿಕೋತ್ಸವ ಅಗತ್ಯ



• ಮಲ್ಲಮ್ಮ ನುಡಿ ವಾರ್ತೆ ಮುದಗಲ್

ವಿದ್ಯಾರ್ಥಿಗಳಲ್ಲಿಯ ಸಂಕುಚಿತ ಮನೋಭಾವ ಹೋಗಲಾಡಿಸಲು ಶಾಲಾ ವಾರ್ಷಿಕೋತ್ಸವ ತುಂಬಾ ಅಗತ್ಯವಾಗಿದೆ ಎಂದು ಪರಿಮಳ ಗುರುಕುಲ ಶಾಲಾ ಆಡಳಿತಗಾರ ನಾರಾಯಣರಾವ್ ದೇಶಪಾಂಡೆ ತಿಳಿಸಿದರು.

ಪಟ್ಟಣದ ಪರಿಮಳ ಗುರುಕುಲ ಆಂಗ್ಲ ಮಾಧ್ಯಮ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಮಕ್ಕಳಿಗೆ ಓದಿನ ಸ್ಪರ್ಧೆಗಿಂತ, ಸಮಾಜವನ್ನು ಎದುರಿಸುಲು ಬೇಕಾದ ಜಾಣ್ಮೆ ಹಾಗೂ ಸಾಮರ್ಥ್ಯ ಮುಖ್ಯವಾಗಿದೆ. ಮುಖ್ಯವಾಗಿ ವಿದ್ಯಾರ್ಥಿಗಳಿಗೆ ಗುರುವಿನ ಮಾರ್ಗದರ್ಶ ಅಗತ್ಯವಾಗಿದೆ. ವಿದ್ಯಾರ್ಥಿಗಳ ಪ್ರತಿಭೆ ಗುರುತಿಸಿ, ಮಕ್ಕಳಿಗೆ ಸ್ಪೂರ್ತಿ ತುಂಬಿಸಬೇಕು. ಮಕ್ಕಳಿಗೆ ಹೆಚ್ಚಾಗಿ ಶಿಕ್ಷಣ ಕಲಿಕೆ ಒತ್ತಡ ಹಾಕಬೇಡಿ. ಒಟ್ಟಾರೆಯಾಗಿ ಒಬ್ಬ ಸತ್ ಪ್ರಜೆಯಾಗಿ, ಒಬ್ಬ ನಾಗರಿಕನಾಗುವುದೇ ಮುಖ್ಯ ಗುರಿಯಾಗಿದೆ. ನಮ್ಮ ಶಾಲೆಗೆ 8 ವರ್ಷದಲ್ಲಿ 26 ಪ್ರಶಸ್ತಿಗಳು ಸಿಕ್ಕಿವೆ ಎಂದು ತಿಳಿಸಿದರು.

ವೇದಿಕೆಯಲ್ಲಿ ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳು ಜರುಗಿದವು. ಕಾರ್ಯಕ್ರಮದಲ್ಲಿ ಅನಿಲ್ ದೇಶಪಾಂಡೆ, ಅರ್ಚನಾ ದೇಶಪಾಂಡೆ, ಡಾ! ಗುರುರಾಜ್ ದೇಶಪಾಂಡೆ ಮಾತನಾಡಿದರು.

ಶಾಲಾ ವಿದ್ಯಾರ್ಥಿಗಳ ಪಾಲಕರು, ಪರಿಮಳ ಗುರುಕುಲಶಾಲಾ ಸಿಬ್ಬಂದಿಗಳು ಸೇರಿದಂತೆ ಇತರರಿದ್ದರು.

# ಎಸ್ ವಿ ಎಂ ಪ್ರೌಢಶಾಲಾ ವಾರ್ಷಿಕೋತ್ಸವ



• ಮಲ್ಲಮ್ಮ ನುಡಿ ವಾರ್ತೆ ಮುದಗಲ್

ಎಸ್‌ವಿಎಂ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮ ಪ್ರೌಢಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮ ಪಟ್ಟಣದ ಶ್ರೀ ವಿಜಯ ಮಾಂತೇಶ್ವರ ಮಠದಲ್ಲಿ ಶನಿವಾರ ಸಂಜೆ ಜರುಗಿತು.

ಕಾರ್ಯಕ್ರಮದಲ್ಲಿ ಶ್ರೀ ಹಾಲಬಾಯಿ ವೀರಭದ್ರೇಶ್ವರ ದೇವಸ್ಥಾನದ ಅರ್ಚಕರಾದ ಶ್ರೀ ಸಿದ್ದಯ್ಯ ಸ್ವಾಮಿ ಸರಸ್ವತಿ ದೇವಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು.

ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ನಿವೃತ್ತ ಶಿಕ್ಷಕ ಹಾಜಿಮಲ್ಲಂಗ ಬಾಬಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಸಾಂಸ್ಕೃತಿಕ ಕಾರ್ಯಕ್ರಮಗಳು ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ರೂಪಿಸುತ್ತದೆ. ಈಗಿನ ವಿದ್ಯಾರ್ಥಿಗಳು ದುಶ್ಚಟಗಳಿಗೆ ಬಲಿಯಾಗದೆ, ಸಂಸ್ಕಾರವಂತರಾಗಿ, ಪರೀಕ್ಷೆಯಲ್ಲಿ ನಕಲು ಮಾಡದೆ, ಅತ್ಯುತ್ತಮ ಅಂಕಗಳಿಸಿ ಶಾಲಾ ಕೀರ್ತಿ ಹಾಗೂ ತಂದೆ ತಾಯಿಗಳ ಗೌರವಕ್ಕೆ ಪಾತ್ರರಾಗಬೇಕೆಂದು ತಿಳಿಸಿದರು.

ಶಾಲಾ ಆಡಳಿತಗಾರ ಸಂಗಮೇಶ ಸರಗಣಾಚಾರಿ, ಶಿಕ್ಷಕ ಮಹಾಂತೇಶ ಬನ್ನಿಗೋಳ, ಶ್ವೇತಾ ಪೂಜಾರ್, ಶಿವಪ್ರಕಾಶ್, ಅನಿಶ್ ಫಾತಿಮಾ ವೇದಿಕೆಯಲ್ಲಿ ಮಾತನಾಡಿದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಸಿದ್ದಯ್ಯ ಸ್ವಾಮಿ ಮೇಗಳಪೇಟೆ, ಚಂದ್ರಪ್ಪ ಗಂಗಾವತಿ, ಸೇರಿದಂತೆ ವಿದ್ಯಾರ್ಥಿಗಳ ಪಾಲಕರು, ಶಾಲಾ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಸಂತ ಸೇವಾಲಾಲ್ ಜಯಂತಿ ಆಚರಣೆ



• ಮಲ್ಲಮ್ಮ ನುಡಿ ವಾರ್ತೆ ಮುದಗಲ್

ಪಟ್ಟಣದ ಪುರಸಭೆ ಕಾರ್ಯಾಲಯದಲ್ಲಿ ಬಂಜಾರ ಸಮುದಾಯ ಉನ್ನತಿಗಾಗಿ ಹೋರಾಡಿದ ಸಂತ ಸೇವಾಲಾಲ್ ಜಯಂತಿ ರವಿವಾರ ಆಚರಣೆ ಮಾಡಲಾಯಿತು.

ಸಂತ ಸೇವಾಲಾಲ್ ಅವರ ಬಾವಚಿತ್ರಕ್ಕೆ ಸ್ಥಳೀಯ ಭಾರತ ಪೆಟ್ರೋಲ್ ಪಂಪ್ ಮಾಲೀಕ ನೇಮಿಚಂದ ನಾಯಕ ಆಶೀಹಾಳ ತಾಂಡಾ ಅವರು ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಿದರು.

ಈ ವೇಳೆ ಮಲ್ಲಪ್ಪ ಮಾಟೂರ, ನಾಗರಾಜ ದಫೆದಾರ, ರಾಘವೇಂದ್ರ ಮೇಗಳಪೇಟೆ, ಪುರಸಭೆ ಸಿಬ್ಬಂದಿಗಳು ನಿಸ್ಸಾರ ಅಹ್ಮದ್, ಜಿಲಾನಿ ಪಾಷಾ, ಚಂದ್ರು ಸೇರಿದಂತೆ ಅನೇಕರಿದ್ದರು.

## ಸೇವಲಾಲ ಬಂಜಾರ ಸಮುದಾಯಕ್ಕೆ ಸ್ವಾಭಿಮಾನ
# ಸಮಾನತೆ ಕಲಿಸಿದ ಮಹಾನ್ ಸಂತ: ಸತೀಶ ಸೈಲ್




• ಮಲ್ಲಮ್ಮ ನುಡಿ ವಾರ್ತೆ ಕಾರವಾರ

ಸಂತ ಸೇವಾಲಾಲ್ ಅವರು ಬಂಜಾರ ಸಮುದಾಯಕ್ಕೆ ಸ್ವಾಭಿಮಾನದ ಬದುಕು ಮತ್ತು ಸಾಮಾಜಿಕ ಸಮಾನತೆಯನ್ನು ಕಲಿಸಿದ ಮಹಾನ್ ಸಂತ ಎಂದು ಶಾಸಕ ಎಂಸಿಎ ಅಧ್ಯಕ್ಷ ಹಾಗೂ ಶಾಸಕ ಸತೀಶ ಸೈಲ್ ಹೇಳಿದರು.

ಅವರು ಭಾನುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಮಹಾನಾಯಕ ತಾಂಡ, ಶ್ರೀ ಸೇವಾಲಾಲ ಆವರಣ, ಸೀತಾ ನಗರ ಬಿಣಗಾದಲ್ಲಿ ನಡೆದ ಶ್ರೀ ಸಂತ ಸೇವಲಾಲ ಜಯಂತಿ ಉದ್ಘಾಟಿಸಿ ಮಾತನಾಡಿದರು.

ಸಂತ ಸೇವಲಾಲ ಅವರು ಬಂಜಾರ ಸಮುದಾಯದ ಆರಾಧ್ಯ ದೈವ, ಆಧ್ಯಾತ್ಮಿಕ ಗುರು ಮತ್ತು ಸಮಾಜ ಸುಧಾರಕರಾಗಿದ್ದಾರೆ. ಕರ್ನಾಟಕ, ಮಹಾರಾಷ್ಟ್ರ ಸೇರಿದಂತೆ ಹಲವು ರಾಜ್ಯಗಳಲ್ಲಿ ಇವರನ್ನು ಪೂಜಿಸಲಾಗುತ್ತದೆ. ಇವರು ಸತ್ಯ, ಅಹಿಂಸೆ, ಬ್ರಹ್ಮಚರ್ಯ ಮತ್ತು ವ್ಯಸನ ಮುಕ್ತ ಜೀವನವನ್ನು ಬೋಧಿಸಿದರು ಹಾಗೂ ಎಲ್ಲರೂ ಶಿಕ್ಷಿತರಾಗಿ ಅಕ್ಷರ ಜ್ಞಾನವನ್ನು ಪಡೆದು ಜಗತ್ತಿಗೆ ದಾರಿ ದೀಪವಾಗಬೇಕು ಎಂದು ಶಿಕ್ಷಣದ ಮಹತ್ವವನ್ನು ಸಾರಿದ್ದರು ಎಂದು ಹೇಳಿದರು.

ಸಂತ ಸೇವಲಾಲ ಕುರಿತು ಅನಿಲ ಪವಾರ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ ನಿಶ್ಚಲ್ ನರೋನ್ಹ, ಚುನಾವಣೆ ಶಾಖೆಯ ತಹಶೀಲ್ದಾರ ಪ್ರಮೋದ ನಾಯ್ಕ, ಬಂಜಾರ ಸಂಘದ ಅಧ್ಯಕ್ಷ ಸತೀಶ್ ನಾಯ್ಕ, ಮತ್ತಿತರರು ಉಪಸ್ಥಿತರಿದ್ದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಮಂಗಲಾ ಎಂ ನಾಯ್ಕ ಸ್ವಾಗತಿಸಿದರು.



ಮಹಾ ಶಿವರಾತ್ರಿ ನಿಮಿತ್ಯ ತಾಲೂಕಿನ ಸುಕ್ಷೇತ್ರ ಕೃಷ್ಣವೇಣಿ ಭೀಮಾ ಸಂಗಮದ ಶ್ರೀ ಸಂಗಮೇಶ್ವರ ಮತ್ತು ಕಾಳಿಕಾ ಮಾತೆಗೆ ವಿವಿಧ ಹೂ ಹಣ್ಣುಗಳಿಂದ ಅಲಂಕರಿಸಲಾಗಿತ್ತು. ಬೆಳಿಗ್ಗೆಯಿಂದಲೆ ರುದ್ರಾಭೀಷಕ ವಿವಿಧ ಪೂಜೆಗಳು ದೇವಸ್ತಾನದ ಅರ್ಚಕ ಶಿವಯ್ಯಸ್ವಾಮಿ ಸಾತಕೇಡ ನೇತೃತ್ವದಲ್ಲಿ ಜರುಗಿದವು. ಮಹಾಶಿವರಾತ್ರಿ ನಿಮಿತ್ಯ ವಿವಿಧ ಭಾಗಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ಶ್ರೀ ಸಂಗಮೇಶ್ವರ ಕಾಳಿಕಾ ಮಾತೆಯ ದರ್ಶನ ಪಡೆದರು.

# ಸಾಮೂಹಿಕ ವಿವಾಹ ಜೀವನಕ್ಕೆ ಆದರ್ಶ

• ಮಲ್ಲಮ್ಮ ನುಡಿ ವಾರ್ತೆ ಮುದಗಲ್

ನವ ವಿವಾಹದ ಜೋಡಿಗಳ ತಿಳುವಳಿಕೆಗಾಗಿ ಸಾಮೂಹಿಕ ವಿವಾಹಗಳಿಂದ ಆರ್ಥಿಕ ಹೊರೆ ತಗ್ಗಿ, ಪ್ರಗತಿಗೆ ಪೂರಕವಾಗುತ್ತದೆ ಎಂದು ವಿಧಾನ ಪರಿಷತ ಸದಸ್ಯ ಶರ-ಣಗೌಡ ಪಾಟೀಲ್ ಬಯ್ಯಾಪುರ ರವಿವಾರ ತಿಳಿಸಿದರು.



ಪಟ್ಟಣ ಸಮೀಪದ ಕನ್ನಾಪುರಟ್ಟಿ ಗ್ರಾಮದ 15ನೇ ವರ್ಷದ ಪರಮಾನಂದ ಹಾಗೂ ಅಮೋಘ ಸಿದ್ದೇಶ್ವರ ಜಾತ್ರ ಮಹೋತ್ಸವದ ಸರ್ವಧರ್ಮ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಕನ್ನಾಪುರಟ್ಟಿ ಗ್ರಾಮಕ್ಕೆ ಅಗಸಿ ನಿರ್ಮಾಣ, ಹಾಗೂ ಕಲ್ಯಾಣ ಮಂಟಪ ಮಾಡುವ ಭರವಸೆ ನೀಡಿದರು. ಮದುವೆ ಪ್ರತಿಯೊಬ್ಬರ ಜೀವನದ ಮಹತ್ತರ ಘಟ್ಟ. ಇದಕ್ಕಾಗಿ ಅನಗತ್ಯ ಹಣ ವ್ಯರ್ಥ ಮಾಡುವ ಅಗತ್ಯವಿಲ್ಲ. ಸಾಮೂಹಿಕ ವಿವಾಹದಲ್ಲಿ ಸಂಸಾರ ಜೀವನಕ್ಕೆ ಪಾದಾರ್ಪಣೆ ಆದರ್ಶ. ಇದು, ಕುಟುಂಬಕ್ಕೆ ಮಾತ್ರವಲ್ಲದೇ, ಸರ್ವ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ. ಮಿತ ಸಂತಾನ, ಮಕ್ಕಳ ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡಿ ಎಂದು, ನವ ಜೋಡಿಗಳಿಗೆ ಶುಭ ಹಾರೈಸಿದರು.

ದೇವಸ್ಥಾನದಲ್ಲಿ ಬೆಳಿಗ್ಗೆ ಪರಮಾನಂದ ಹಾಗೂ ಅಮೋಘ ಸಿದ್ದೇಶ್ವರ ದೇವರಿಗೆ ವಿವಿಧ ಧಾರ್ಮಿಕ ಪೂಜಾ ವಿಧಿ ವಿಧಾನಗಳು ಜರುಗಿದವು. ಪರಮಾನಂದ ದೇವಸ್ಥಾನದಿಂದ ಕಳಸ ಮೆರವಣಿಗೆಯೊಂದಿಗೆ ಮಜ್ಜನಬಾವಿಯಲ್ಲಿ ಗಂಗಪೂಜೆ ನೆರವೇರಿಸಲಾಯಿತು.

ಹುನುಕುಂಟಿ ಚಿದಾನಂದ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದರು, 21 ನವ



ಸಾಮೂಹಿಕ ವಿವಾಹ ರೇವಣ ಸ್ವಾಮಿ ಹಿರೇಮಠ್ ನೇತೃತ್ವದಲ್ಲಿ ಪುರೋಹಿತತ್ವ ಜರುಗಿತು. ಎಸ್ ಆರ್ ರಸೂಲ್, ಪಾಮಯ್ಯ ಮುರಾರಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕರಡಕಲ್ ಭೂಪನಗೌಡ, ಶ್ರೀಕಾಂತ್ ಗೌಡ ಪಾಟೀಲ್, ಮಲ್ಲಪ್ಪ ಕನ್ನಾಪುರ ಹಟ್ಟಿ, ಶರಣಯ್ಯ ಒಡೆಯರ್, ಶಂಕ್ರಯ್ಯ ಒಡೆಯರ್, ರಮೇಶ್, ಸಣ್ಣಸಿದ್ದಯ್ಯಸ್ವಾಮಿ, ಕೆಡಿಪಿ ಸದಸ್ಯ ಪರಮೇಶ ಕನ್ನಾಪುರಟ್ಟಿ, ಅಂಗನವಾಡಿ ಮೇಲ್ವಿಚಾರಕಿ ಹೇಮಾ ನಾಯಕ, ಪರಾಮಯ್ಯ ಗುರುಗಳು, ಕೇಶವರೆಡ್ಡಿ ಯಾರ್ದಿಹಾಳ ಸೇರಿದಂತೆ ವಿವಿಧ ಭಾಗಗಳ ಪರಮಾನಂದ ಭಕ್ತಾದಿಗಳು ಕನ್ನಾಪುರಟ್ಟಿ ಗ್ರಾಮಸ್ಥರು ಇದ್ದರು.

# ಮಕ್ಕಳಿಗೆ ಅಕ್ಷರದ ಜೊತೆ ಜಿವನದ ಮೌಲ್ಯ ಮುಖ್ಯ:ಗುರುರಾಜ್ ಕರಜಗಿ




**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ನಗರದ ವರವಲಯದ ಸಿರಿವಾರ ಕ್ರಾಸ್ ಬಳಿ ಮಾತೃಭೂಮಿ ಎಜುಕೇಶನ್ ಅಂಡ್ ಚಾರಿಟೆಬಲ್ ಟ್ರಸ್ಟ್ ನ ಶ್ರೇಷ್ಠ ಇಂಟರ್ ನ್ಯಾಶನಲ್ ಶಾಲೆಯಲ್ಲಿ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಶಾಲೆಯ ವಾರ್ಷಿಕೋತ್ಸವ ಕಾರ್ಯಕ್ರಮಮಕ್ಕೆ ಮುಖ್ಯ ಅತಿಥಿಗಳಾಗಿ ಪ್ರಖ್ಯಾತ ಶಿಕ್ಷಣ ತಜ್ಞರು, ಲೇಖ–ಕರು ಮತ್ತು ಪ್ರೇರಣಾದಾಯಕ ಭಾಷಣಕಾರರು ಆದ .ಗುರುರಾಜ್ ಕರಜಗಿಯವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ.

ಯಾವುದೇ ಸಂಸ್ಥೆ ಅಗಲಿ ನೌಕರ ಮಂತ್ರದ ಮೇಲೆ ನಿಂತು ಶ್ರೇಷ್ಠ ವಾಗುತ್ತದೆ. ಯಾರೇ ಒಂದು ಸಂಸ್ಥೆ ನಿರ್ಮಾಣ ಮಾಡಲಿ ಅದನ್ನು ಸಾವಿರಾರು ವರ್ಷ ಇರಲಿ ಎಂದು ಸ್ಥಾಪನೆ ಮಾಡುತ್ತಾರೆ. ಅದರೆ ಸಾವಿರ ವರ್ಷದ ಪ್ರಯಾಣ ಮೊದಲ ವರ್ಷ ಬಹು ಮುಖ್ಯವಾಗಿರುತ್ತದೆ. ಶ್ರೇಷ್ಠ ಇಂಟರ್ನ್ಯಾಷನಲ್ ಸ್ಕೂಲ್ ಒಂದು ವರ್ಷದಲ್ಲಿ ಬಹಳ ಒಳ್ಳೆಯ ಕೆಲಸಗಳನ್ನು ಮಾಡಿದೆ ಎಂದರು.

ನಗರದ ಇಕ್ಕಟಿನ ಪ್ರದೇಶದಲ್ಲಿ ಶಾಲಾ ನಿರ್ಮಾಣ ಮಾಡದೆ ಯಾವುದೆ ವಾಹನಗಳ ಸದ್ದಿಲ್ಲದೆ ಪ್ರಶಾಂತವಾದ 9 ಎಕರೆ ಪ್ರದೇಶದ ಮೈದಾನದಲ್ಲಿ ನಿರ್ಮಾಣ ಮಾಡಿರುವುದು ಪಾಠ ಮಾಡುವುದಕ್ಕೂ ಮತ್ತು ಪಾಠ ಕೇಳುವುದಕ್ಕು ತುಂಬಾ ಚನ್ನಾಗಿ ಇರುತ್ತೆ ಎಂದರು.ಮಕ್ಕಳಿಗೆ ಕಲಿಕಾ ವಾತವರಣ ಬಹು ಮುಖ್ಯವಾಗಿರುತ್ತೆ ಮಕ್ಕಳ ಮೇಲೆ ಇದು ಪರಿಣಾಮ ಬಿರುತ್ತದೆ ಎಂದರು.

1970 ನೇ ಇಸ್ವಿಯಿಂದ ನಾನು ಪಾಠ ಮಾಡಲು ಅಂರಭಿಸಿದ್ದನೆ

ಅಂದಿನಿಂದ ಇಂದಿನವರೆಗೆ ಯಾವ ಉತ್ಸಹನು ನನ್ನಲ್ಲಿ ಕಡಿಮೆ ಯಾಗಿಲ್ಲ ಎಂದರು.

ಇಂದಿನ ದಿನಮಾನದ ಶಕ್ಷಣದ ವ್ಯವಸ್ಥೆಯಲ್ಲಿ ಪೋಷಕರಾದ ನಾವುಗಳು ಮಕ್ಕಳ ಮೇಲೆ ಬಹಳ ದಾವಂತ ಹೇರುತ್ತೆವೆ ಪ್ರಜರ್ ಹಾಕುತ್ತೆವೆ ನಿನು ಇದೆ ಉದ್ದೆ ತೆಗೆದುಕೊಳ್ಳ ಬೇಕೆಂದು

ಪೋಷಕರಾದ ನಮಗೆ ವಲಿಸದ ಅಶೋತ್ತರವನ್ನು ಮಕ್ಕಳಮಲೆ ಹೇರುತ್ತಿದ್ದೆವೆ ಮಕ್ಕಳ ಅಶಕ್ತಿ ನೋಡಿ ಬೆಳೆಸ ಬೇಕು ಶಿಕ್ಷಣ ಎಂದರೆ ಸರ್ಟಿಫಿಕೇಟ್ ಅಲ್ಲ ಎಂದರು.

ಪ್ರತಿಯೊಂದು ಮಗುವು ಒಂದೊಂದು ಪರಿವಾರದ ಕನಸು ಪ್ರತಿಯೋಬ್ಬ ಪೋಷಕರಿಗೂ ಮಗು ಒಂದು ದೊಡ್ಡ ಅಸ್ತಿ

ನಿಮ್ಮ ಅಸ್ತಿಯನ್ನು ಬೆಳೆಸುವುದೆ ಶಿಕ್ಷಕರ ಕರ್ತವ್ಯ ಪತ್ರಿಯೊಂದ ಮಗುವನ್ನು ನನ್ನ ಮಗು ಎಂದು ಶಿಕ್ಷಕ ತಿಳಿದರೆ ಆಶಾಲೆ ಶ್ರೇಷ್ಠ ಶಾಲೆ ಅಗುತ್ತದೆ ಎಂದರು.

ಪತ್ರಿಯೊಂದು ಮಕ್ಕಳಲ್ಲಿನ ಕೊರತೆ ತಿಳಿಯುವುದೆ ಶಿಕ್ಷಕನ ಕೆಲಸ ಮಕ್ಕಳ ಕೌಶಲ್ಯ ತಿಳಿದು ಮಕ್ಕಳನ್ನು ನಾವು ಬೆಳೆಸಿದರೆ ಮಕ್ಕಳು ದೊಡ್ಡವರಾಗುತ್ತಾರೆ .

ದೇಶದ ಬಹು ದೊಡ್ಡ ನಷ್ಟವೆಂದರೆ ಅನಕ್ಷರಸ್ಥರು ಎಂದು ಬುಕ್ ನೊಡಿದ್ದೆ ಅದರೆ ಅದು ತಪ್ಪು ಶಿಕ್ಷಣ ಪಡೆದ ಅಪ್ರಮಾಣಿಕ ವ್ಯಕ್ತಿಗಳಿಂದ ದೇಶಕ್ಕೆ ಹೆಚ್ಚು ನಷ್ಟವಾಗಿದೆ ಎಂದರು. ಎಲ್ಲರೂ ಅಕ್ಷರಸ್ಥರು ಅಗ ಬೇಕು ಅದರೆ ಅಕ್ಷರದ ಜೊತೆ ಮೌಲ್ಯ ಕಲಿಯಬೇಕು ಎಂದರು.

ಪೋಷಕರಾದ ನಾವು ಮಕ್ಕಳಿಗೆ ವಸ್ತುವಿನ ಬೇಲೆ ತಿಳಿಯದಂತೆ ಮಾಡಿದರೆ ಮಕ್ಕಳು ಅಶ್ಯಕ್ತವಾಗುತ್ತ ಹೊಗುತ್ತದೆ ಎಂದರು.

ಅಧ್ಯಕ್ಷರಾದ ಬ್ರಹ್ಮಯ್ಯ ನಾಯ್ಡು ಮಾತನಾಡುತ್ತ ಹಳೆಯ ಕಾಲದ ಶಿಕ್ಷರ ಗೌರವ ಉಳಿಸುಲು ನಮ್ಮ ಶ್ರಮ ಅಷ್ಟೆ, ಶಾಲೆಯಲ್ಲಿ ಶಿಕ್ಷನೆ ಮುಖ್ಯ ನಾವೆಲ್ಲಾ ಕಾವಲಿಗರಷ್ಟೆ ಎಂದರು ಕಾರ್ಯದಲ್ಲಿ ಶಿವನಗೌಡ ಪಾಟೀಲ್ , ಮರಿಸ್ವಾಮಿ, ಕಸ್ತೂರಿ , ಮತ್ತು ಪ್ರಾಂಶುಪಾಲರಾದ ಮಾರುತಿ ಮತಿತರ ಉಪಸ್ಥಿತರಿದ್ದರು.

# ಮಹಾಶಿವರಾತ್ರಿ ಹಬ್ಬ, ಶಿವನ ದರ್ಶನ ಪಡೆದ ಭಕ್ತರು

**• ಮಲ್ಲಮ್ಮ ನುಡಿ ವಾರ್ತೆ,ಬಳ್ಳಾರಿ**

ಮಹಾ ಶಿವರಾತ್ರಿ ಹಬ್ಬ ಹಿನ್ನೆಲೆಯಲ್ಲಿ ನಗರ ಸೇರಿದಂತೆ ಜಿಲ್ಲೆಯಾದ್ಯಂತ ಈಶ್ವರ ದೇಗುಲ ಸೇರಿದಂತೆ ನಾನಾ ದೇವಾಲಯಗಳಲ್ಲಿ ಭಾನುವಾರ ವಿಶೇಷ ಪೂಜೆಗಳನ್ನು ಹಮ್ಮಿಕೊಳ್ಳಲಾಗಿತ್ತು. ನಗರದ ಸತ್ಯನಾರಾಯಣ ಪೇಟೆ ಬಡಾವಣೆಯ ಜ್ಯೋತಿ ಮೆಡಿಕಲ್ ಬಳಿಯ ಈಶ್ವರ ದೇವಾಲಯದಲ್ಲಿ ಶಿವರಾತ್ರಿ ಹಬ್ಬದ ನಿಮಿತ್ತ ಬೆಳಿಗ್ಗೆ ವಿವಿಧ ಪೂಜೆಗಳು ವಿಜೃಂಭಣೆಯಿಂದ ನೆರವೇರಿದವು. ಬೆಳಿಗ್ಗೆ ವಿಶೇಷ ಪೂಜೆ, ಅಭಿಷೇಕ,

ಅರ್ಚನೆ, ಮಹಾಮಂಗಳಾರತಿ, ಸೇರಿದಂತೆ ವಿವಿಧ ಪೂಜೆಗಳು ನಡೆದವು. ನಗರ ಸೇರಿದಂತೆ ನಾನಾ ಕಡೆಯಿಂದ ಆಗಮಿಸಿದ ನೂರಾರು ಭಕ್ತರು ಸರದಿಯಲ್ಲಿ ನಿಂತು ಶಿವನ ದರ್ಶನ ಪಡೆದು,

ವಿಶೇಷ ಪೂಜೆ, ಅರ್ಚನೆ ಸಲ್ಲಿಸಿ ಭಕ್ತಿ ಸಮರ್ಪಿಸಿದರು. ಭಕ್ತರ ಸಂಖ್ಯೆ ಹೆಚ್ಚಾದ ಹಿನ್ನೆಲೆ



ಪೊಲೀಸ್ ಸಿಬ್ಬಂದಿಗಳು ಸೂಕ್ತ ವ್ಯವಸ್ಥೆ ಕಲ್ಪಿಸಿದ್ದರು. ಆಗಮಿಸಿದ ಎಲ್ಲ ಭಕ್ತರಿಗೂ ತೀರ್ಥ ಪ್ರಸಾದ ವಿತರಿಸಲಾಯಿತು.

# ಸಮಾಜದ ಒಗ್ಗಟ್ಟಿಗೆ ಜಯಂತಿ ಆಚರಣೆ ಪೂರಕ: ಗಾದೆಪ್ಪ

**• ಮಲ್ಲಮ್ಮ ನುಡಿ ವಾರ್ತೆ,ಬಳ್ಳಾರಿ**



ಮಹನೀಯರ ಜಯಂತಿಗಳು ಕೇವಲ ಆಚರಣೆಗಳಲ್ಲ, ಅವು ಸಮಾಜದ ಒಗ್ಗಟ್ಟು ಮತ್ತು ಶಕ್ತಿಯನ್ನು ಪ್ರದರ್ಶಿಸುವ ಸಂಕೇತಗಳಾಗಿವೆ ಎಂದು ಮಹಾನಗರ ಪಾಲಿಕೆ ಮಹಾಪೌರರಾದ ಪಿ.ಗಾದೆಪ್ಪ ಅವರು ಹೇಳಿದರು.

ಭಾನುವಾರ, ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಸಂತ ಶ್ರೀ ಸೇವಾಲಾಲ್ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಮಾಜದ ಹಿರಿಯರು ಮತ್ತು ಮುಖಂಡರು ಹಾಕಿಕೊಟ್ಟ ದಾರಿಯಲ್ಲಿ ನಡೆಯುವುದು ಮುಖ್ಯ. ಮಹನೀಯರ ಸಂದೇಶಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಈ ಬಾರಿ ಮಹಾನಗರ ಪಾಲಿಕೆಯ ಅನುದಾನದಡಿ ಸುಮಾರು 28 ವಿವಿಧ ಮಹನೀಯರ ಜಯಂತಿಗಳನ್ನು ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದೆ. ಈ ಕುರಿತು ಶಾಸಕರು ಮತ್ತು ಪಾಲಿಕೆಯ ಎಲ್ಲಾ ಸದಸ್ಯರೊಂದಿಗೆ ಸಮಾಲೋಚನೆ ನಡೆಸಲಾಗಿದೆ ಎಂದು ತಿಳಿಸಿದರು.

ಸಮಾಜದ ಸರ್ವತೋಮುಖ ಅಭಿವೃದ್ಧಿ ಹಾಗೂ ಇಂತಹ ಸಾಂಸ್ಕೃತಿಕ ಮತ್ತು ಧಾರ್ಮಿಕ ಕಾರ್ಯಕ್ರಮಗಳ ಯಶಸ್ಸಿಗಾಗಿ ಪಾಲಿಕೆಯ ಬಜೆಟ್‌ನಲ್ಲಿ ವಿಶೇಷ ಅನುದಾನವನ್ನು ಕಲ್ಪಿಸಲಾಗುವುದು ಎಂದು ಭರವಸೆ ನೀಡಿದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ ಅವರು ಮಾತನಾಡಿ, ಭರತ ಖಂಡದ ಧಾರ್ಮಿಕ ರಾಯಭಾರಿ ಎಂದೇ ಹೆಸರಾದ ಸಂತ ಸೇವಾಲಾಲ್ ಮಹಾರಾಜರು ಹಲವು ಪವಾಡಗಳ ಮೂಲಕ ಜನರ ಮನ ಗೆದ್ದವರು. ಸಂತ ಸೇವಾಲಾಲರು, ಇಂದಿಗೂ ಜನ ಮಾನಸದಲ್ಲಿ ಗುರುವಿನ ಸ್ಥಾನವನ್ನು ಪಡೆದಿದ್ದಾರೆ. ಜನತೆಗೆ ವ್ಯಸನ ಮುಕ್ತರಾಗಿ ಎಂದು ಬೋಧಿಸಿದ ಸೇವಾಲಾಲರು ಸತ್ಯ, ಅಹಿಂಸೆ, ತ್ಯಾಗ ಮನೋಭಾವದ ನೀತಿಮಾತು ಹೇಳಿದ್ದರು ಎಂದರು.

ಕರ್ನಾಟಕ ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಸದಸ್ಯ ಪ್ರೊ.ಎಸ್.ಶಾಂತನಾಯ್ಕ ಅವರು ವಿಶೇಷ ಉಪನ್ಯಾಸದಲ್ಲಿ ಮಾತನಾಡಿ, ಸಮಾಜದ ಕಟ್ಟಕಡೆ–ಯ ವ್ಯಕ್ತಿಯೂ ಮುಖ್ಯವಾಹಿನಿಗೆ ಬರಬೇಕಾದರೆ ಶಿಕ್ಷಣವೊಂದೇ ಅಸ್ತ್ರ. ನಮ್ಮ ಮಕ್ಕಳು ಕೇವಲ ಸಾಂಪ್ರದಾಯಿಕ ಪದವಿಗಳಿಗೆ ಅಂಟಿಕೊಳ್ಳದೆ ವಿಜ್ಞಾನ, ತಂತ್ರಜ್ಞಾನ ಮತ್ತು ಇಂಗ್ಲಿಷ್ ಭಾಷೆಯನ್ನು ಕರಗತ ಮಾಡಿಕೊಳ್ಳಬೇಕು ಎಂದು ಕರೆ ನೀಡಿದರು.

ಬ್ರಿಟಿಷರ ವಿರುದ್ಧ ನಿರಂತರವಾಗಿ ಹೋರಾಡಿ ಪ್ರಾಣತ್ಯಾಗ ಮಾಡಿದ ಗುಜರಾತ್ ಗಡಿಯ ವೀರ ಗುರು ಗೋವಿಂದ ಬಂಜಾರ ಅವರ ಅಪ್ರತಿಮ ಹೋರಾಟ ಇಂದಿನ ಇತಿಹಾಸದ ಪುಟಗಳಲ್ಲಿ ದಾಖಲಾಗಿಲ್ಲ ಎಂಬ ಬಗ್ಗೆ ಅವರು ವಿಷಾದ ವ್ಯಕ್ತಪಡಿಸಿದರು.

ನಮ್ಮ ಪೂರ್ವಜರ ಸಾಧನೆಯನ್ನು ನಮ್ಮ ಮುಂದಿನ ಪೀಳಿಗೆಗೆ ತಿಳಿಸಿಕೊಡಬೇಕಾದ ಜವಾಬ್ದಾರಿ ನಮ್ಮ ಮೇಲಿದೆ ಎಂದರು.

ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಬೇಕು. ಜಗತ್ತು ವಿಜ್ಞಾನದತ್ತ ಮುಖ ಮಾಡಿರುವಾಗ ನಮ್ಮ ಮಕ್ಕಳು ಸಹ ಮುಂದರಿಯಬೇಕು ಎಂದು ಪ್ರತಿಪಾದಿಸಿದರು.

ಕಾರ್ಯಕ್ರಮದಲ್ಲಿ ಬಳ್ಳಾರಿಯ ಡಿ.ಸಂಧ್ಯಾರಾವ್ ತಂಡ ಭಕ್ತಿಸಂಗೀತ ಗಾಯನ ಪ್ರಸ್ತುತಪಡಿಸಿದರು.

ಸಂವಿಧಾನ ಪೀಠಿಕೆ ಪ್ರತಿಜ್ಞಾ ವಿಧಿ ಸ್ವೀಕರಿಸಲಾಯಿತು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕನಿರ್ದೇಶಕ ಬಿ.ನಾಗರಾಜ, ಸಮುದಾಯದ ಮುಖಂಡರು ಸೇರಿದಂತೆ ಸಾರ್ವಜನಿಕರು ಇದ್ದರು.

# ಗಣಿತ ವಸ್ತು ಪ್ರದರ್ಶನ ವಿದ್ಯಾರ್ಥಿಗಳಲ್ಲಿ ಕಲಿಕೆಯ ಉತ್ಸಾಹ : ಅರೋಕಿಯ ಸಾಮಿ



**• ಮಲ್ಲಮ್ಮ ನುಡಿ ವಾರ್ತೆ, ಕುಕನೂರ**

ಪಟ್ಟಣದ ಎಸ್.ಎಫ್. ಎಸ್. ಶಾಲೆಯಲ್ಲಿ ಇಂದು ಗಣಿತ ವಸ್ತು ಪ್ರದರ್ಶನ ಆಯೋಜಿಸಲಾಗಿತ್ತು ವಿದ್ಯಾರ್ಥಿಗಳು ತುಂಬಾ ಉತ್ಸಾಹಕಾರಾಗಿ ತಮ್ಮ ಕೈ ಚಳಕ ದಿಂದ ತಯಾರಿಸಿದ ವಿವಿಧ ಬಗೆಯ ಗಣಿತ ಮಾದರಿಗಳನ್ನು ಅಂದರೆ ತ್ರಿಭುಜಗಳ ವಿಧಗಳು, ಭಿನ್ನರಾಶಿಗಳು, ವೃತ್ತ ಮಾದರಿ, ವಿಸ್ತೀರ್ಣ ಮಾದರಿ, ಬಾರ್ ಗ್ರಾಫ್,ಹಾಗೂ ಸಂಖ್ಯಾ ರೇಖೆ ಹೀಗೆ ವಿವಿಧ ರೀತಿಯ ಮಾದರಿಗಳನ್ನು ಪ್ರದರ್ಶಿಸಿದರು.

ಗಣಿತ ವಸ್ತು ಪ್ರದರ್ಶನದ ಉದ್ಘಾಟನೆ ಮಾಡಿದಂತಹ ಶಾಲೆಯ ಆಡಳಿತ ಅಧಿಕಾರಿಯಾದ 'ಅರೋಕಿಯ ಸಾಮಿ ಮಾತನಾಡಿ ಈ ಕಾರ್ಯಕ್ರಮದಿಂದ ವಿದ್ಯಾರ್ಥಿಗಳ ಸಾಮರ್ಥ್ಯ ನವೀನತೆ ವೈಚಾರಿಕ ಹಾಗೂ ಕೌಶಲ್ಯಗಳನ್ನು ಬೆಳೆಸುವ ಉತ್ತಮ ವೇದಿಕೆಯಾಗಿದೆ. ವಿದ್ಯಾರ್ಥಿಗಳಿಗೆ ಗಣಿತದ ವಿಷಯದಲ್ಲಿ ಹೆಚ್ಚಿನ ಜ್ಞಾನ ಸಂಪಾದಿಸಲು ಈ ವಸ್ತು ಪ್ರದರ್ಶನ ತುಂಬಾ ಸಹಾಯಕಾರಿಯಾಗಿದೆ.

ಗಣಿತ ವಸ್ತು ಪ್ರದರ್ಶನ ದಿಂದ ಮಕ್ಕಳ ಬುದ್ಧಿವಂತಿಕೆಯಲ್ಲಿ ಸೃಜನಶೀಲತೆ, ತಾರ್ಕಿಕತೆ, ಅನಾವರಣಗೊಳ್ಳುತ್ತದೆ. ರೈತ ತನ್ನ ಹೊಲವನ್ನು ಅಳೆಯಲು ಗಣಿತ ಉಪಯೋಗಿಸುತ್ತಾನೆ ಹಾಗೂ ವಾಸ್ತುಶಿಲ್ಪ ಕಲೆ ರಚನೆಗೆ,. ಅಂಗಡಿಯವ ಚಿಲ್ಲರೆ ವ್ಯಾಪಾರಕ್ಕೆ, ಕ್ರೀಡೆಯಲ್ಲಿ, ಪ್ರಯಾಣದಲ್ಲಿ, ದೈನಂದಿನ ಚಟುವಟಿಕೆಯಲ್ಲಿ ಗಣಿತ ಬೇಕೇ ಬೇಕು; ಬಹಳಷ್ಟು ಮಕ್ಕಳು ಗಣಿತವನ್ನು ಅಂಕಿಗಳೆಂದು ತಿಳಿದುಕೊಳ್ಳುತ್ತಾರೆ ಆದರೆ ಇದು ತಾಳ್ಮೆ ಬುದ್ಧಿವಂತಿಕೆಯಾಗಿದೆ. 'ಗಣಿತ ಎಂಬುದು ಬರಿ ಪುಸ್ತಕಕ್ಕೆ ಸೀಮಿತವಲ್ಲ ಇದು ದೈನಂದಿನ ಚಲನೆಯಾಗಿದೆ'. ಹಾಗೂ "ದೇವರು ಕೂಡ ಒಬ್ಬ ಗಣಿತ ತಜ್ಞನು ಆಗಿದ್ದಾನೆ ಎಂದರು.

ಗಣಿತ ಪ್ರದರ್ಶನದ ಆಯೋಜಿಕಿಯಾದ ಶಿಕ್ಷಕಿ ಶರಣ್ಯ ಮಾತನಾಡಿ ಗಣಿತ ವಸ್ತು ಪ್ರದರ್ಶನದಿಂದ ಗಣಿತದ ವಿಷಯದಲ್ಲಿ ಆಸಕ್ತಿ ಇರದ ಮಕ್ಕಳು ಸಹ ಈ ವಸ್ತು ಪ್ರದರ್ಶನದಿಂದ ಮುಂದೆ ಬರಬೇಕು ಎಂಬುದೇ ಈ ಪ್ರದರ್ಶನದ ಉದ್ದೇಶ. ಹಾಗೂ ಮುಂದಿನ ದಿನಗಳಲ್ಲಿ ಗಣಿತದ ವಿಷಯವನ್ನು ಉತ್ತಮವಾಗಿ ಕಲಿಯಲು ಮಕ್ಕಳನ್ನು ಪ್ರೇರೇಪಿಸುವುದಾಗಿದೆ ಎಂದರು.ಈ ವಸ್ತು ಪ್ರದರ್ಶನ ಕಾರ್ಯಕ್ರಮದಲ್ಲಿ ಶಾಲೆಯ ಸಿಬ್ಬಂದಿ ವರ್ಗ ಮತ್ತು ಮಕ್ಕಳ ಪಾಲಕರು, ಹಾಗೂ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಇದ್ದರು.

# ಸಂತ ಸೇವಾಲಾಲ್ ಮಹಾರಾಜರ ಜಯಂತಿ ಆಚರಣೆ



**• ಮಲ್ಲಮ್ಮ ನುಡಿ ವಾರ್ತೆ,ಕುಕನೂರು**

ಸದ್ಗುರು ಸೇವಾಲಾಲ ಮಹಾರಾಜ ಅವರ ತತ್ವ ಆಚಾರ ವಿಚಾರಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಪ್ರಗತಿಯ ಮಾರ್ಗದಲ್ಲಿ ಸಾಗಬೇಕು ಎಂದು ಗೋರ ಸೇನಾ ರಾಜ್ಯ ಪ್ರಧಾನ ಕಾರ್ಯದರ್ಶಿ ಸುರೇಶ ಬಳೂಟಗಿ ಹೇಳಿದರು.

ಅವರು ಭಾನುವಾರ ಪಟ್ಟಣದ ತಹಸೀಲ್ದಾರರ ಕಚೇರಿ ಹಾಗೂ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ (ಕುಕನೂರು ಘಟಕ)ಯಲ್ಲಿ ನಡೆದ ಸೇವಾಲಾಲ ಮಹಾರಾಜರ ಜಯಂತಿ ಕಾರ್ಯಕ್ರಮವನ್ನು ಉದ್ದೇಶಿಸಿ ಅವರು ಮಾತನಾಡಿದರು.

ಅಖಂಡ ಭಾರತ ದೇಶದ ಸಂತರು ತಮ್ಮ ಜೀವನವನ್ನು ಸಮಾಜ ಸೇವೆಗೆ ಮೀಸಲಿಟ್ಟು ಸಮುದಾಯದ ಸರ್ವತೋಮುಖ ಅಭಿವೃದ್ಧಿಗೆ ಮಹತ್ತರ ಕೊಡುಗೆ ನೀಡಿದ್ದಾರೆ. ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆದು ಸಮಾನತೆಯ ಸಮಾಜದ ಪರಿಕಲ್ಪನೆಯನ್ನು ಸಾಕಾರಗೊಳಿಸಿದಾಗ ಮಾತ್ರ ಜಯಂತಿ ಆಚರಣೆ ಸಾರ್ಥಕವಾಗುತ್ತದೆ ಎಂದು ಹೇಳಿದರು. ಶಿಕ್ಷಣ, ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಸಮಾಜ ಮುಂದುವರಿಯಬೇಕು ಎಂದು ಕರೆ ನೀಡಿದರು.ಗ್ರೇಡ್ 2 ತಹಸೀಲ್ದಾರ್ ಮುರಳೀಧರ ಕುಲಕರ್ಣಿ ಮಾತನಾಡಿ, ಸೇವಾಲಾಲರು ಪ್ರತಿಪಾದಿಸಿದ ಸತ್ಯ, ಅಹಿಂಸೆ, ದುಶ್ಚಟ ನಿರ್ಮೂಲನೆ ಮತ್ತು ಮೂಢನಂಬಿಕೆ ತ್ಯಾಗದ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಮಕ್ಕಳಿಗೆ ಉತ್ತಮ ಸಂಸ್ಕಾರ ಸಂಸ್ಕೃತಿ ನೀಡಿ ಅವರನ್ನು ಸಮಾಜದ ಆಸ್ತಿಯನ್ನಾಗಿ ಬೆಳೆಸಬೇಕು ಎಂದು ಸಲಹೆ ನೀಡಿದರು.ಕಾರ್ಯಕ್ರಮದಲ್ಲಿ ಸಮಾಜದ ಮುಖಂಡರಾದ ಹಂಪಣ್ಣ ಕಟ್ಟಿಮನಿ, ಮೇಘರಾಜ ಬಳಿಗೇರಿ, ಬಸವಂತಪ್ಪ ನಾಯಕ, ವಿಶ್ವನಾಥ ಬಳಿಗೇರಿ, ಯಮನೂರಪ್ಪ ಕಟ್ಟಿಮನಿ, ಶರಣಪ್ಪ ಚವ್ಹಾಣ, ಯಮನೂರಪ್ಪ ಭಾನಾಪುರ, ರಾಘವೇಂದ್ರ ಬಳಿಗೇರಿ, ನಾಗರಾಜ ಭಾನಾಪುರ, ಮಹೇಶ ಕಾರಭಾರಿ, ಕುಮಾರ ಬಳಿಗೇರಿ, ಗೋಲಪ್ಪ ಹೊನ್ನುಂಚಿ ಸೇರಿದಂತೆ ಹಲವರು ಭಾಗವಹಿಸಿದರು. ಕಂದಾಯ ಇಲಾಖೆ ಅಧಿಕಾರಿಗಳು ಹಾಗೂ ಸಾರಿಗೆ ಇಲಾಖೆಯ ಸಿಬ್ಬಂದಿ ಹಾಜರಿದ್ದರು. ಸಮಾಜದ ಗುರು ಹಿರಿಯರು ಮತ್ತು ಯುವಮಿತ್ರರು ಉಪಸ್ಥಿತರಿದ್ದರು.

# ಮಕ್ಕಳ ಪ್ರತಿಭೆಗೆ ಪ್ರೋತ್ಸಾಹಿಸಿ



**• ಮಲ್ಲಮ್ಮ ನುಡಿ ವಾರ್ತೆ, ಕೊಪ್ಪಳ**

ನಗರದ ಸಾಹಿತ್ಯ ಭವನದಲ್ಲಿ ನಂದಿನಗರದ ಸಿದ್ದೇಶ್ವರ ಸರ್ಕಲ್ ನ ವಿದ್ಯಾಸರಸ್ವತಿ ಕಿರಿಯ ಪ್ರಾಥಮಿಕ ಶಾಲೆ ಹಾಗೂ ವಿಶ್ವಚೇತನ ಟ್ಯುಟೋರಿಯಲ್ ಹತ್ತನೇ ವರ್ಷದ ಶಾಲಾ ವಾರ್ಷಿಕೋತ್ಸವದ ನಿಮಿತ್ತವಾಗಿ ದಶಮಾನೋತ್ಸವದ ಸಂಭ್ರಮದ ನೆನಪಿಗಾಗಿ ಹೆಜ್ಜೆ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

ಕೊಪ್ಪಳದ ಪರಮಪೂಜ್ಯ ರಾಮಕೃಷ್ಣವಿವೇಕಾನಂದ ಆಶ್ರಮದ ಚೈತನ್ಯಾನಂದ ಸ್ವಾಮೀಜಿ ಯವರು ದಿವ್ಯ ಸಾನಿಧ್ಯ ವಹಿಸಿಕೊಂಡು ಉದ್ಘಾಟಿಸಿ ಮಾತನಾಡಿದರು ಮಕ್ಕಳಿಗೆ ಶಿಕ್ಷಣ ಎಷ್ಟು ಮುಖ್ಯವೋ, ಪಠ್ಯೇತರ ಚಟುವಟಿಕೆಗಳು ಕೂಡ ಮಗುವಿನ ಸರ್ವತೋಮುಖ ಬೆಳವಣಿಗೆಗೆ ಅವಶ್ಯಕ ಹಾಗಾಗಿ ಮಕ್ಕಳ ಪ್ರತಿಭೆಯನ್ನು ಪ್ರೋತ್ಸಾಹಿಸಿ ಎಂದರು.

ಸಾಹಿತಿ,ಶಿಕ್ಷಕರಾದ ಕಲ್ಲಪ್ಪ ಕವಳಕೇರಿ ಮಾತನಾಡಿ ಸಮಾಜದಲ್ಲಿ ಪ್ರತಿಯೊಬ್ಬರೂ ಮೇಲಸ್ಥರಕ್ಕೆ ಬರಬೇಕಾದರೆ ಶಿಕ್ಷಣ ಪ್ರಮುಖ ಅಸ್ತ್ರವಾಗಿದ್ದು, ಮಕ್ಕಳ ಭವಿಷ್ಯ ರೂಪಿಸುವ ಕಾರ್ಯ ಪ್ರತಿ ಶಿಕ್ಷಕ ಮಾಡಬೇಕಿದೆ ಎಂದರು. ಶಿಕ್ಷಣ ಪ್ರೇಮಿ ಮರಿಶಾಂತವೀರ ಸ್ವಾಮಿ ಚಕ್ಕಡಿಮಠ ಮತ್ತು ಶ್ರೀ ಮಂಜುನಾಥ ಸಾಲಿಮಠ ಕಾರ್ಯಕ್ರಮ ಉದ್ದೇಶಿಸಿ ನೈತಿಕ ಮೌಲ್ಯ, ಸಂಸ್ಕಾರ ಮತ್ತು ಸಂಸ್ಕೃತಿ ದತ್ತವಾದ ಆಶಾಕಿರಣ ನಮ್ಮ ಈ ವಿದ್ಯಾಸರಸ್ವತಿ ಶಾಲೆ ಎಂದು ಹೆಮ್ಮೆ ಎಂದು ಮಾತನಾಡಿದರು.

ಪಾಲಕರ ಕ್ರೀಡಾಕೂಟ, ಉತ್ತಮ ವಿದ್ಯಾರ್ಥಿ ಪ್ರಶಸ್ತಿ, ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ವಿವಿಧ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಸಾಧಕರಿಗೆ ವಿದ್ಯಾಸಿರಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.ಇದೇ ವೇಳೆ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.ಮಕ್ಕಳ ವೇಷಭೂಷಣ ಪ್ರೇಕ್ಷಕರ ಗಮನ ಸೆಳೆದವು. ಶಾಲೆಯ ಅಧ್ಯಕ್ಷರಾದ ಮಹದೇವಸ್ವಾಮಿ ಕಂಬಾಳಿಮಠ,ಶಿವಕುಮಾರ ಜುಕ್ತಿಮಠ ಗುತ್ತಿಗೆದಾರರು ಕೊಪ್ಪಳ, ಡಾ.ಬಿ .ಎನ್ .ಹೊರಪೇಟಿ ಶರಣಪ್ಪ ರೆಡ್ಡೇರ್ ಶಿಕ್ಷಕರು, ಸಂಗಪ್ಪ ಇದರಮನಿ, ಚನ್ನಯ್ಯ ಹಿರೇಮಠ ಸಂಗೀತ ಶಿಕ್ಷಕರು, ಮಹಾಂತೇಶ ಸಿಂಧೋಗಿಮಠ,ಪ್ರಶಾಂತ ಡಂಗೂರಮಠ,ಪ್ರತಿಕಾ ಹಾಗೂ ಚಿದಾನಂದಯ್ಯ ಬನ್ನಿಮಠ,ಮಂಜುಳಾ,ಚೈತ್ರಾ,ಹಸೀನಾ,ಅಶ್ವಿನಿ ಹಾಗೂ ಪಾಲಕರು ಮತ್ತು ಮಕ್ಕಳು ಉಪಸ್ಥಿತಿ ಇದ್ದರು.

# ಅನೀಮಿಯಾ ತಡೆಗಟ್ಟುವ ಕಾರ್ಯಕ್ರಮ: ಉಚಿತ ತಪಾಸಣಾ ಶಿಬಿರ


**• ಮಲ್ಲಮ್ಮ ನುಡಿ ವಾರ್ತೆ,ಬಳ್ಳಾರಿ**

ನಗರದ ಸತ್ಯನಾರಾಯಣ ಪೇಟೆ ಬಡಾವಣೆಯ ಜ್ಯೋತಿ ಮೆಡಿಕಲ್ಸ್ ಬಳಿ ಅನೀಮಿಯಾ ತಡೆಗಟ್ಟುವ ಕಾರ್ಯಕ್ರಮ ಹಿನ್ನೆಲೆ ಉಚಿತ ತಪಾಸಣಾ ಶಿಬಿರವನ್ನು ಭಾನುವಾರ ಹಮ್ಮಿಕೊಳ್ಳಲಾಗಿತ್ತು. ಗುಜರಾತ್ ನ ಶ್ರೀಮದ್ ರಾಮಚಂದ್ರ ಆಸ್ಪತ್ರೆ ಹಾಗೂ ಸಂಶೋಧನ ಕೇಂದ್ರ, ಜಿ.ಪಂ.ಬಳ್ಳಾರಿ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬಳ್ಳಾರಿ, ಶಾಲಾ




ಶಿಕ್ಷಣ ಇಲಾಖೆ, ಗ್ರಾಮಿಣ ಅಭಿವೃದ್ಧಿ ಸಂಸ್ಥೆ ಹಾಗೂ ಸ್ಪಂದನ ಸ್ವಯಂ ಸೇವಾ ಸಂಸ್ಥೆ ವಿಜಯಪುರ ಹಾಗೂ ಶ್ರೀ ಮಾತೃ ಮಹಿಳಾ ಮಂಡಳಿ ಆಶ್ರಯದಲ್ಲಿ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿತ್ತು. ಶಿವರಾತ್ರಿ ಹಬ್ಬ ಹಿನ್ನೆಲೆ ದೇಗುಲಕ್ಕೆ ಆಗಮಿಸಿದ ನೂರಾರು ಭಕ್ತರು ತಪಾಸಣಾ ಶಿಬಿರದಲ್ಲಿ ಭಾಗವಹಿಸಿದ್ದರು. ತಪಾಸಣೆ ವೇಳೆ ಆರೋಗ್ಯದಲ್ಲಿ ವ್ಯತ್ಯಾಸ ಕಂಡು ಬಂದ ರೋಗಿಗಳಿಗೆ ಸಿಬ್ಬಂದಿಗಳು ಉಚಿತ ಮಾತ್ರೆ, ಔಷಧಿಗಳನ್ನು ನೀಡಿ ಅಗತ್ಯ ಸಲಹೆ ಸೂಚನೆಗಳನ್ನು ನೀಡಿದರು.

# ಸಮಾಜ ಸಂಘಟನೆ ಹೂವಿನ ಹಾಸಿಗೆ ಅಲ್ಲ: ಅಂದಪ್ಪ ಜವಳಿ



**• ಮಲ್ಲಮ್ಮ ನುಡಿ ವಾರ್ತೆ,ಕುಕನೂರು**

ಸಮಾಜ ಸಂಘಟನೆ ಹೂವಿನ ಹಾಸಿಗೆ ಅಲ್ಲ; ಅದು ಸುಖ ದುಃಖಗಳ ಸಮ್ಮಿಲನ. ಸಂಘಟನೆ ವೇಳೆ ಮತ್ತೊಂದು ಸಮಾಜದ ಭಾವನೆಗೆ ಧ–ಕ್ಕೆಯಾಗದಂತೆ ಎಚ್ಚರಿಕೆಯಿಂದ ನಡೆಯಬೇಕು ಎಂದು ಬಣಜಿಗ ಸಮಾಜದ ರಾಜ್ಯ ಉಪಾಧ್ಯಕ್ಷ ಅಂದಪ್ಪ ಜವಳಿ ಹೇಳಿದರು.

ಅವರು ಪಟ್ಟಣದಲ್ಲಿ ನಡೆದ ಬಣಜಿಗ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, "ಸಮಾಜ ಸಂಘಟನೆ ರಾಜಕೀಯ ರಹಿತವಾಗಿರಬೇಕು. ಸಂಘಟನೆ ಇನ್ನೊಂದು ಸಮಾಜದ ವಿರುದ್ಧವಲ್ಲ. ಸಮಾಜದಲ್ಲಿರುವ ಬಡವರ ನೆರವಿಗೆ ಬಂದು, ಅವರನ್ನು ಆರ್ಥಿಕವಾಗಿ ಸಬಲಗೊಳಿಸುವ ಉದ್ದೇಶ ಇರಬೇಕು," ಎಂದು ತಿಳಿಸಿದರು.

ಹಿರಿಯ ಮುಖಂಡ ಅಂದಾನಪ್ಪ ಅಂಗಡಿ ಮಾತನಾಡಿ, "ಬಣಜಿಗ ಸಮಾಜ ಸಂಘಟನೆ ಪೈಪೋಟಿಗೆ ಅಲ್ಲ. ಲಿಂಗಾಯತ ಸಮಾಜ ಸೇರಿದಂತೆ ಎಲ್ಲ ಸಮಾಜಗಳನ್ನು ಗೌರವದೊಂದಿಗೆ ನೋಡಿ–ಕೊಂಡು, ಸರ್ಕಾರದ ಮೀಸಲಾತಿ ಸೌಲಭ್ಯಗಳು ಅರ್ಹರಿಗೆ ತಲುಪುವಂತೆ ಕೆಲಸ ಮಾಡಲಾಗುತ್ತಿದೆ," ಎಂದರು.

ಕಾರ್ಯಕ್ರಮದಲ್ಲಿ ವಿಶ್ವನಾಥ ಮಳಗಿ, ಕಪ್ಪತ್ತಪ್ಪ ಅಂಗಡಿ, ಬಸವರಾಜ್ ಜೋಳದ, ಪ್ರಭು ಹೊಂಬಳ, ಡಾ. ಜಂಭಣ್ಣ ಅಂಗಡಿ, ಮಲ್ಲಪ್ಪ ಗುತ್ತಿ, ವಿಜಯಕುಮಾರ ಅಂಗಡಿ, ಮಂಜುನಾಥ ಅಂಗಡಿ, ಜಯಪ್ರಕಾಶ ಹೊಗರಿ, ಪ್ರಕಾಶ ಕುದರಿಮೋತಿ, ಬಸವರಾಜ್ ಪಟ್ಟಣಶೆಟ್ಟಿ, ರವಿಕುಮಾರ್ ನಲ್ವಾಡ್, ಶರಣಪ್ಪ ಗುತ್ತಿ, ಪಂಚಾಕ್ಷರಿ ಯಾಕ್ಲಾಸಾಪುರ, ಈಶಪ್ಪ ಅಂಗಡಿ ಉಪಸ್ಥಿತರಿದ್ದರು.

# ಕಂದಾಯ ವಸತಿ ಗೃಹ: ಸ್ವಚ್ಛತಾ ಕಾರ್ಯಕ್ರಮ



• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ನವನಗರದಲ್ಲಿರುವ ಕಂದಾಯ ವಸತಿ ಗೃಹಗಳ ಆವರಣದಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಅವರ ನೇತೃತ್ವ ಹಾಗೂ ನಗರಸಭೆ ಸಹಯೋಗದಲ್ಲಿ ಸ್ವಚ್ಛತಾ ಅಭಿಯಾನ ಕಾರ್ಯಕ್ರಮ ರವಿವಾರ ನಡೆಯಿತು.

ಸ್ವಚ್ಚತಾ ಕಾರ್ಯದಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಸೇರಿದಂತೆ ವಸತ ಗೃಹದಲ್ಲಿ ವಾಸವಿರುವ ನೌಕರರು, ನಗರಸಭೆ ಪೌರಾಯುಕ್ತರು ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ಅಪರ ಜಿಲ್ಲಾಧಿಕಾರಿಗಳು ವಸತಿ ಗೃಹಗಳಲ್ಲಿ ವಾಸಿಸುವ ಕುಟುಂಬಸ್ಥರಿಗೆ ಮನೆಯ ಒಳಗೆ ಮತ್ತು ಹೊರಗಡೆ ಸ್ವಚ್ಚತೆ ಕಾಪಾಡಿಕೊಳ್ಳಬೇಕು. ಕಟ್ಟಿಗೆ ಒಲೆ ಬಳಕೆ ಮಾಡುವದನ್ನು ಕಡ್ಡಾಯವಾಗಿ ನಿಷೇಧಿಸುವಂತೆ ಸೂಚನೆ ನೀಡಿದರು. ತಪ್ಪಿದಲ್ಲಿ ದಂಡ ವಿಧಿಸಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ನಗರಸಭೆ ಆರೋಗ್ಯ ನಿರೀಕ್ಷಕಿ ಪ್ರೀತಿ ಗವಿಮಠ, ಪರಿಸರ ಅಭಿಯಂತರ ಸತೀಶ ಖಜ್ಜಿಡೋಣಿ ಸೇರಿದಂತೆ ಪೌರಕಾರ್ಮಿಕರು, ವಸತಿ ಗೃಹದ ಎಲ್ಲ ಕುಟುಂಬದ ಸದಸ್ಯರು ಸ್ವಚ್ಚತಾ ಆಂದೋಲನದಲ್ಲಿ ಶ್ರಮದಾನ ಮಾಡಿದರು.

# ಕರ್ನಾಟಕ ದರ್ಶನ ಪ್ರವಾಸಕ್ಕೆ ಡಿಸಿ ಚಾಲನೆ



• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ದಿ ನಿಗಮದಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡ ಕರ್ನಾಟಕ ದರ್ಶನ ಪ್ರವಾಸಕ್ಕೆ ಜಿಲ್ಲಾಧಿಕಾರಿ ಸಂಗಪ್ಪ ರವಿವಾರ ಚಾಲನೆ ನೀಡಿದರು.

ಜಿಲ್ಲಾಡಳಿತ ಭವನದ ಮುಖ್ಯ ಆವರಣದಲ್ಲಿ ಪ್ರಸಕ್ತ ಸಾಲಿಗೆ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ದಿ ನಿಗಮದಿಂದ ಹಮ್ಮಿಕೊಂಡ ಕರ್ನಾಟಕ ದರ್ಶನ ಪ್ರವಾಸಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಜಿಲ್ಲೆಯ ವಿವಿಧ ಶಾಲೆಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ರಾಜ್ಯದ ಐತಿಹಾಸಿಕ ಹಾಗೂ ಸಾಂಸ್ಕೃತಿಕ ತಾಣಗಳನ್ನು ಪರಿಚಯಿಸುವ ಉದ್ದೇಶದಿಂದ ಈ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ವಿದ್ಯಾರ್ಥಿಗಳು ಪಠ್ಯದಲ್ಲಿರುವ ಇತಿಹಾಸವನ್ನು ನೇರವಾಗಿ ನೋಡಿದಾಗ ಅದರ ಅರಿವು ಮತ್ತಷ್ಟು ಗಾಡವಾಗುತ್ತದೆ. ಕರ್ನಾಟಕದ ವೈಭವಶಾಲಿ, ಸಂಸ್ಕೃತಿ, ಕಲೆ ಮತ್ತು ಪರಂಪರೆಯನ್ನು ಅರಿಯಲು ಈ ಪ್ರವಾಸ ಸಹಕಾರಿಯಾಗಲಿದೆ ಎಂದರು.

ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕ ಜಿ.ಎಸ್.ಹಿತ್ತಲಮನಿ ಮಾತನಾಡಿ ಕರ್ನಾಟಕ ದರ್ಶನ ಪ್ರವಾಸ ಮೂರು ದಿನಗಳ ಕಾಲ ಹಮ್ಮಿಕೊಂಡಿದ್ದು, ಜಿಲ್ಲೆಯ ಎಲ್ಲ ತಾಲೂಕಿನ ಪ್ರೌಢಶಾಲೆಯ ಪರಿಶಿಷ್ಟ ಜಾತಿಯ 266, ಪರಿಶಿಷ್ಟ ಪಂಗಡದ 168 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿದ್ದು, ಅದರಲ್ಲಿ ಬಾಗಲಕೋಟೆ ತಾಲೂಕಿನ 74 ಮತ್ತು ಬೀಳಗಿ ತಾಲೂಕಿನ 72 ಸೇರಿ ಒಟ್ಟು 146 ವಿದ್ಯಾರ್ಥಿಗಳನ್ನು ಪ್ರವಾಸಕ್ಕೆ ಕಳುಹಿಸಲಾಗುತ್ತಿದೆ. ಬಾದಾಮಿ ಮತ್ತು ಹುನಗುಂದ ತಾಲೂಕಿನ ಕರ್ನಾಟಕ ದರ್ಶನ ಪ್ರವಾಸ ಕೈಗೊಳ್ಳಲಾಗಿದೆ ಎಂದು ತಿಳಿಸಿದರು. ಪ್ರವಾಸದ ವೇಳೆಯಲ್ಲಿ ಶಿರಸಿ, ಬನವಾಸಿ, ಗೋಕರ್ಣ, ಮುರುಡೇಶ್ವರ, ಆನೆಗುಂದಿ, ಉಡುಪಿ, ಶ್ರವಣಬೆಳಗೊಳ, ಬೇಲೂರ, ಯಡೆಯೂರು ತಾಣಗಳ ದರ್ಶನ ಮಾಡಲಿದ್ದಾರೆಂದು ತಿಳಿಸಿದರು. ಜಮಖಂಡಿ ಮುಧೋಳ ತಾಲೂಕಿನ ವಿದ್ಯಾರ್ಥಿಗಳಿಗೆ ಫೆಬ್ರವರಿ 16 ರಿಂದ ಪ್ರವಾಸ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಸೇರಿದಂತೆ ಶಿಕ್ಷಣ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಹೈಕೋರ್ಟ್ ವಿಚಾರಣೆಯ ಮಧ್ಯೆ ಜಮೀನು ಪರಿಶೀಲಿಸಿದ ಅಧಿಕಾರಿಗಳು



• ಮಲ್ಲಮ್ಮನುಡಿ ವಾರ್ತೆ, ಕೊಪ್ಪಳ

ಜೆಲ್ಲೆಯ ಕುಕನೂರ ಪಟ್ಟಣದಲ್ಲಿರುವ ಮುಜರಾಯಿ ಇಲಾಖೆಗೆ ಒಳಪಡುವ ಗುದ್ನೇಶ್ವರ ದೇವಸ್ಥಾನದ ಜಮೀನಿನ ವೀಕ್ಷಣೆಗೆ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿಯ ಕಲ್ಯಾಣ ಕಲಬುರಗಿ ವಿಭಾಗೀಯ ಉಪ ಆಯುಕ್ತೆ ಜಹೀರಾ ನಸ್ರಿಮ್ ಅವರು ಶುಕ್ರವಾರ ವಿವಾದಿತ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಭೇಟಿಯ ಸಂದರ್ಭದಲ್ಲಿ ಕೊಪ್ಪಳ ಜಿಲ್ಲಾಧಿಕಾರಿ ಡಾ. ಸುರೇಶ್ ಬಿ. ಇಟ್ನಾಳ ಅವರು ಉಪಸ್ಥಿತರಿದ್ದರು.

'ಗುದ್ನೇಶ್ವರ ದೇವಸ್ಥಾನದ ಜಮೀನು ಸಂಬಂಧ ಹೈಕೋರ್ಟ್‌ನಲ್ಲಿ ಪ್ರಕರಣ ವಿಚಾರಣಾ ಹಂತದಲ್ಲಿದೆ. ಈ ಜಾಗದಲ್ಲಿ ತಾಲೂಕು ಆಡಳಿತ ಕಚೇರಿ, ಬುದ್ಧ ಬಸವ ಅಂಬೇಡ್ಕರ್ ಭವನ ಹಾಗೂ ನ್ಯಾಯಾಲಯ ನಿರ್ಮಾಣಕ್ಕೆ ಯಲಬುರ್ಗಾ ವಿಧಾನಸಭಾ ಕ್ಷೇತ್ರದ ಶಾಸಕ ಹಾಗೂ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಅವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು. ಇದಕ್ಕೆ ವಿರೋಧ ವ್ಯಕ್ತಪಡಿಸಿದ ಗುದ್ನೇಶ್ವರ ಮಠ ಪ್ರದೇಶದ ಗ್ರಾಮಸ್ಥರು ನ್ಯಾಯಾಲಯದ ಮೊರೆ ಹೋಗಿದ್ದಾರೆ.

ಸುಮಾರು ಎರಡುವರೆ ವರ್ಷಗಳಿಂದ ಜಮೀನು ವಿವಾದ ಮುಂದುವರಿದಿರುವ ಹಿನ್ನೆಲೆ ಪ್ರಕರಣ ಅಂತಿಮ ಹಂತದಲ್ಲಿರುವ ಸಂದರ್ಭದಲ್ಲೇ ಅಧಿಕಾರಿಗಳ ಭೇಟಿ ಸ್ಥಳೀಯ ವಲಯದಲ್ಲಿ ಗಮನ ಸೆಳೆದಿದೆ.

ಈ ಕುರಿತು ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಉಪ ಆಯುಕ್ತೆ ಜಹೀರಾ ನಸ್ರಿಮ್ ಅವರು, "ಕಂದಾಯ ಇಲಾಖೆಗೆ ಸಂಬಂಧಿಸಿದ ಜಮೀನು ಇರುವ ಹಿನ್ನೆಲೆ ನಿಯಮಿತ ಆಡಳಿತಾತ್ಮಕ ವೀಕ್ಷಣೆ ನಡೆಸಲಾಗಿದೆ," ಎಂದು ಸ್ಪಷ್ಟಪಡಿಸಿದರು.

ಈ ವೇಳೆ ಕಂದಾಯ ಇಲಾಖೆಯ ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ್ ಮಾಲಗತ್ತಿ, ಕುಕನೂರು ತಹಶೀಲ್ದಾರ್ ಬಸವರಾಜ ಬೆಣ್ಣೆಶಿರೂರು, ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ಸಂತೋಷ ಬಿರಾದಾರ್ ಪಾಟೀಲ್, ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿ ನಾಗೇಶ ಸೇರಿದಂತೆ ಕಂದಾಯ ಇಲಾಖೆ ಸಿಬ್ಬಂದಿ ಹಾಜರಿದ್ದರು.

# ಮತದಾರರ ಮ್ಯಾಪಿಂಗ್ ಕಾರ್ಯಕ್ಕೆ ಸಹಕರಿಸಿ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಬಾಗಲಕೋಟೆ ಮತಕ್ಷೇತ್ರಕ್ಕೆ ಸಂಬಂಧಿಸಿದಂತೆ ಮತದಾರರ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಅಂಗವಾಗಿ ಎಲ್ಲ ಮತದಾರರ ಮ್ಯಾಪಿಂಗ್ ಮತ್ತು ಪ್ರೊಜನಿ ಕಾರ್ಯ ಕೈಗೊಂಡ ಹಿನ್ನಲೆಯಲ್ಲಿ ಎಲ್ಲ ಸಾರ್ವಜನಿಕರು ತಮ್ಮ ವ್ಯಾಪ್ತಿಯ ಮತಗಟ್ಟೆ ವ್ಯಾಪ್ತಿಯ ಮತಗಟ್ಟೆ ಮಟ್ಟದ ಅಧಿಕಾರಿಗಳಿಗೆ ತಮ್ಮ ಕುಟುಂಬದ ಎಲ್ಲ ಅರ್ಹ ಮತದಾರರ ಮಾಹಿತಿಯನ್ನು ಒದಗಿಸಿ ಮ್ಯಾಪಿಂಗ್ ಮತ್ತು ಪ್ರೊಜನಿ ಕಾರ್ಯವನ್ನು ಯಶಸ್ವಿಗೆ ಸಹಕರಿಸುವಂತೆ ತಹಶೀಲ್ದಾರ ವಾಸುದೇವ ಸ್ವಾಮಿ ಪ್ರಕಟಣೆಯಲ್ಲಿ ಕೋರಿದ್ದಾರೆ.

# ಶಿವನನ್ನು ಪೂಜಿಸಿದರೆ ಪಾಪ ಕಳೆದು ಪುಣ್ಯ ಪ್ರಾಪ್ತಿ: ಗೀತಕ್ಕ

ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಶಿವ ಹಾಗೂ ಶಕ್ತಿಯ ಸಮ್ಮಿಲನವೇ ಶಿವರಾತ್ರಿಯಾಗಿದೆ . ಶಿವರಾತ್ರಿಯಂದು ಉಪವಾಸ ಮಾಡಿ ಶಿವನನ್ನು ಪೂಜಿಸಿದರೆ ಪಾಪಗಳು ಕಳೆದು ಪುಣ್ಯಪ್ರಾಪ್ತಿಯಾಗುತ್ತದೆ ಎಂದು ಬ್ರ.ಕು. ಗೀತಕ್ಕನವರು ಹೇಳಿದರು.



ಯಲಬುರ್ಗಾ ಪಟ್ಟಣದ ಈಶ್ವರಿ ವಿಶ್ವ ವಿದ್ಯಾಲಯದಲ್ಲಿ ಶಿವರಾತ್ರಿ ನಿಮಿತ್ಯ ಆಯೋಜಿಸಿದ ವಿಶೇಷ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಅಜ್ಞಾನವನ್ನು ಕಳೆದು ಜ್ಞಾನ ಪ್ರಕಾಶವನ್ನು ಬೆಳುಗವ ಅತ್ಯಂತ ಪವಿತ್ರ ಹಬ್ಬ ಇದಾಗಿದೆ . ವಿಷಕಂಠನಾಗಿ ಎಲ್ಲವನ್ನು ನುಂಗಿ ಜಗವನ್ನು ರಕ್ಷಿಸಿದ ಶಿವನ ಜನ್ಮದಿನವಾದ ಇಂದು ಶಿವನನ್ನು ಆರಾಧಿಸುವ ಮೂಲಕ ಆತನ ಕ್ರಪೆಗೆ ಪಾತ್ರರಾಗಬೇಕಾಗಿದೆ .ಹಿಂದೂಗಳಿಗೆ ಈ ಹಬ್ಬ ಶ್ರೇಷ್ಠವಾಗಿದೆ ಎಂದರು.

ಪರಿಶುದ್ಧ ಮಾನವನಾಗಲು ಸಪ್ತ ಸೂತ್ರಗಳನ್ನು ಅಳವಡಿಸಿಕೊಳ್ಳಲು ಹೇಳುತ್ತಾ ಮೋಕ್ಷ ಹಾಗೂ ಆಧ್ಯಾತ್ಮಿಕ ಜಾಗ್ರತೆಗಾಗಿ ಪ್ರಾರ್ಥಿಸುತ್ತಾ ಜೀವನವನ್ನು ಪಾವನ ಮಾಡಿಕೊಳ್ಳೋಣ ಎಂದು ಕರೆ ನೀಡಿದರು.

ಮೂಲತಃ 64 ಜ್ಯೋತಿರ್ಲಿಂಗಗಳು ಇದ್ದರೂ ಅತ್ಯಂತ ಶಕ್ತಿಶಾಲಿ ಹಾಗೂ ದಿವ್ಯತೆಯನ್ನು ಪಡೆದಂತಹ 12 ಜ್ಯೋತಿರ್ಲಿಂಗಗಳಾದ ಸೋಮನಾಥ ಮಲ್ಲಿಕಾರ್ಜುನ ಮಹಾಕಾಳೇಶ್ವರ ಓಂಕಾರೇಶ್ವರ ಕೇದಾರನಾಥ ಭೀಮಶಂಕರ ಕಾಶಿ ವಿಶ್ವನಾಥ ತ್ರ್ಯಂಬಕೇಶ್ವರ ಬೈದ್ಯನಾಥ ನಾಗೇಶ್ವರ ರಾಮೇಶ್ವರ ಹಾಗೂ ಘ್ರಷ್ಣೇಶ್ವರ ಎಂಬ 12 ಜ್ಯೋತಿರ್ಲಿಂಗಗಳನ್ನು ಜೀವನದಲ್ಲಿ ದರ್ಶನ ಮಾಡಿದರೆ ಪಾಪ ಕಳೆದು ಮೋಕ್ಷಪ್ರಾಪ್ತಿ ಆಗುತ್ತದೆ ಎನ್ನುವ ಭಕ್ತರ ನಂಬಿಕೆ ಬಹುತೇಕ ಹುಸಿಯಾಗಿಲ್ಲ . ಆರ್ಥಿಕ ಪರಿಸ್ಥಿತಿ ದುಸ್ತರ ಇದ್ದವರೂ ಎಲ್ಲರೂ ಆ ಲಿಂಗಗಳನ್ನು ನೋಡಲು ಸಾಧ್ಯವಾಗದೆ ಇರಬಹುದು ಎನ್ನುವ ಕಾರಣಕ್ಕಾಗಿ 12 ಜ್ಯೋತಿರ್ಲಿಂಗಗಳ ಮೆರವಣಿಗೆಯನ್ನು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮಾಡಲಾಯಿತು.

ಬೆಳಿಗ್ಗೆ ಶಿವಧ್ವಜಾರೋಹಣವನ್ನು ಶಿವಕುಮಾರ ಭೂತೆ ಹಾಗೂ ಪ.ಪಂ.ಮಾಜಿ ಅಧ್ಯಕ್ಷ ಸುರೇಶಗೌಡ ಶಿವನಗೌಡರ ನೇರವೇರಿಸಿದರು . ಜ್ಯೋತಿರ್ಲಿಂಗ ಮೆರವಣಿಗೆಗೆ ಗಣ್ಯರು ಚಾಲನೆ ನೀಡಿದರು.

ಸಿದ್ದಯ್ಯ ಕೊಣ್ಣೂರು ಸಂಗಣ್ಣ ಟೆಂಗಿನಕಾಯಿ ಸಂಗಣ್ಣ ಕರಂಡಿ ಮಲ್ಲಿಕಾರ್ಜುನ ತೊಂಡಿಹಾಳ ಫಕೀರಪ್ಪ ಗಾಣಗೇರ ವೀರಯ್ಯ ಹಿರೇಮಠ ನಿಂಗಪ್ಪ ಯರಾಶಿ

ಕನಕಪ್ಪ ಕಂಬಳಿ ಜಗದೀಶ ಅಂಗಡಿ ರುದ್ರಗೌಡ ಗೋಣಿ ವೀರನಗೌಡ ಪಾಟೀಲ ಆದೇಶ ಹುಬ್ಬಳ್ಳಿ ಬಸನಗೌಡ ಪಾಟೀಲ ಶರಣಪ್ಪ ದಾನಕೈ ಶಿವು ಎಚ್.

ಮಂಜು ಕೊಣ್ಣೂರು ಹಾಗೂ ಇನ್ನು ಹಲವಾರು ಜನರು ಪಾಲ್ಗೊಂಡಿದ್ದರು ನೂರಾರು ಅಕ್ಕಂದಿರು ಜ್ಯೋತಿರ್ಲಿಂಗಗಳ ಮೆರವಣಗೆಯಲ್ಲಿ ಭಾಗಿ ಆಗಿದ್ದರು.

# ಶಿವರಾತ್ರಿ ಸಂಭ್ರಮಕ್ಕೆ ಅರಳಿ ನಿಂತ ಮುತ್ತುಗದ ಹೂವು

ಮಲ್ಲಮ್ಮನುಡಿವಾರ್ತೆ ಕಮಲನಗರ



ಮಹಾ ಶಿವರಾತ್ರಿ ಪೂಜೆಯ ವಿಶೇಷ ಆಕರ್ಷಣೆ ಹಾಗೂ ಶಿವನಿಗೆ ಪ್ರಿಯವಾದ ಪುಷ್ಪ, ಮಹಾಶಿವರಾತ್ರಿಯ ಈ ಪವಿತ್ರ ದಿನದಂದು ಶಿವನಿಗೆ ಅರ್ಪಿಸಲು ಮುತ್ತುಗದ ಹೂವು ಅತ್ಯಂತ ಶ್ರೇಷ್ಠವೆಂದು ನಂಬಲಾಗಿದೆ. ಕೆಂಪು–ಕಿತ್ತಳೆ ಬಣ್ಣದ ಈ ಹೂವುಗಳು ಪ್ರಕೃತಿಯಲ್ಲಿ ಶಿವನ 'ರುದ್ರ' ಅವತಾರವನ್ನು ನೆನಪಿಸುತ್ತವೆ.

ಮುತ್ತುಗದ ಹೂವಿನ ಧಾರ್ಮಿಕ ಮಹತ್ವ: ಶಿವರಾತ್ರಿಯಂದು ಶಿವನಿಗೆ ಮುತ್ತುಗದ ಹೂವು ಸಮರ್ಪಿಸಿ ಪೂಜಿಸುವುದು ವಾಡಿಕೆ ಇದೆ. ಈ ಹೂವು ಹೆಚ್ಚಾಗಿ ಅರಳಿದರೆ ಉತ್ತಮ ಮಳೆ ಮತ್ತು ಸಮೃದ್ಧ ಬೆಳೆಯಾಗುತ್ತದೆ ಎಂಬ ನಂಬಲಾಗುತ್ತದೆ.

ಬಣ್ಣದ ತಯಾರಿಕೆ: ಹಿಂದೆ ಈ ಹೂವಿನಿಂದ ಹೋಳಿ ಹಬ್ಬಕ್ಕೆ ನೈಸರ್ಗಿಕ ಬಣ್ಣ ತಯಾರಿಕೆ ಉಪಯೋಗ, ಮರವು ಎಲೆಗಳನ್ನು ಉದುರಿಸಿ ಹೂವುಗಳನ್ನು ಮಾತ್ರ ಬಿಡುವುದರಿಂದ, ಪ್ರಕೃತಿ ಸೌಂದರ್ಯವು ವರ್ಧಿಸುತ್ತದೆ. ಮುತ್ತುಗದ ಹೂವಿನೊಂದಿಗೆ ಕಮಲನಗರ ವರದಿಗಾರ ಪರಮೇಶ ರಾಂಪುರೆ ಅವರನ್ನು ಕಾಣಬಹುದು.

# ಜಾನಪದ ಕಲಾ ಸೊಬಗಿನೊಂದಿಗೆ ತಾಯಿ ಭುವನೇಶ್ವರಿ ದೇವಿ ಭವ್ಯ ಮೆರವಣಿಗೆ



• ಮಲ್ಲಮ್ಮ ನುಡಿ ವಾರ್ತೆ ವಿಜಯನಗರ ಹೊಸಪೇಟೆ



ಹಂಪಿ ಉತ್ಸವದ ಅಂತಿಮ ದಿನವಾದ ಭಾನುವಾರ ಸಂಜೆ ಉದ್ದಾನ ವೀರಭದ್ರೇಶ್ವರ ದೇವಸ್ಥಾದಿಂದ ವಿರೂಪಾಕ್ಷೇಶ್ವರ ದೇವಸ್ಥಾನದವರೆಗೆ ಜಾನಪದ ವಾಹಿನಿ ಮೆರವಣಿಗೆ ನಡೆಯಿತು. ಶಾಸಕ ಹೆಚ್.ಆರ್.ಗವಿಯಪ್ಪ ಹಾಗೂ ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಸೇರಿದಂತೆ ಗಣ್ಯರು ಮೆರವಣಿಗೆಯಲ್ಲಿ ಪಾಗ್ಗೊಂಡು ವಿರೂಪಾಕ್ಷೇಶ್ವರ ದೇವಾಲಯದ ಬಳಿ ನಾಡದೇವಿ ಭುವನೇಶ್ವರಿ ದೇವಿಗೆ ಪೂಜೆ ಸಲ್ಲಿಸಿದರು.

ಜಾನಪದ ವಾಹಿನಿ ಕಲಾ ತಂಡಗಳ ಮೆರವಣಿಗೆ ನಾಡಿನ ಗ್ರಾಮೀಣ ಭಾಗದ ಸಾಂಸ್ಕೃತಿಕ ವೈವಿಧ್ಯತೆಗೆ ಸಾಕ್ಷಿಯಾಯಿತು. ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಜಾನಪದ ಕಲಾತಂಡಗಳು ಮೆರವಣಿಯಲ್ಲಿ ಪಾಲ್ಗೊಂಡಿದ್ದವು. ಜಾನಪದ ಕಲಾ ಸೊಬಗಿನೊಂದಿಗೆ ತಾಯಿ ಭುವನೇಶ್ವರಿ ದೇವಿಯನ್ನು ಮೆರವಣಿಗೆ ಮಾಡಲಾಯಿತು. ಹಲಗೆವಾದನ, ವೀರಗಾಸೆ, ಹಗಲುವೇಷ, ಸಿಂಧೋಳ್ ಕುಣಿತ, ನಂದಿಧ್ವಜ, ಕಹಳೆ ವಾದನ, ಹಕ್ಕಿಪಿಕ್ಕಿ ನೃತ್ಯ, ಕರಡಿ ಮೇಳ, ಪುರವಂತಿಕೆ, ಪೂಜಾ ಕುಣಿತ, ನಗಾರಿ, ಲಂಭಾಣಿ ವೃತ್ತ, ಕಂಸಾಳೆ, ಚಂಡೆವಾದ್ಯ, ಸೋಮನ ಕುಣಿತ, ಗೊರವರ ಕುಣಿತ, ಕಲಾತಂಡಗಳು ಮೆರವಣಿಯಲ್ಲಿ ಪಾಲ್ಗೊಂಡಿದ್ದವು.

ಉಪವಿಭಾಗಾಧಿಕಾರಿ ವಿವೇಕ್, ತಹಶೀಲ್ದಾರ್ ಶೃತಿ, ಸೇರಿದಂತೆ ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.

# ಸಮಾಜಕ್ಕೆ ಜೀವನಾದರ್ಶರಾದವರು ಸೇವಾಲಾಲರು : ಗದ್ದಿಗೌಡರ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ತಮ್ಮ ಭಕ್ತಿ, ಧ್ಯಾನದ ಮೂಲಕ ಇಡೀ ಸಮಾನಕ್ಕೆ ಜೀವನಾದರ್ಶವಾಗಿದ್ದವರು ಸಂತ ಶ್ರೀ ಸೇವಾಲಾಲ್‌ರು ಎಂದು ಲೋಕಸಭಾ ಸದಸ್ಯ ಪಿ.ಸಿ.ಗದ್ದಿಗೌಡರ ಹೇಳಿದರು.

ನವನಗರದ ಕಲಾಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡ ಸಂತ ಸೇವಾಲಾಲ್‌ರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಅವರ ಭಾವಚಿತ್ರಕ್ಕೆ ಪುಷ್ಪ ಅರ್ಪಿಸಿ, ಮಾತನಾಡಿದ ಅವರು ಸಮಾಜದಲ್ಲಿಯ ಮೂಡನಂಬಿಕೆಯನ್ನು ಹೋಗಲಾಡಿಸಿ, ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕವಾಗಿ ಅಭಿವೃದ್ದಿ ಹೊಂದಲು ತಮ್ಮ ಆಧ್ಯಾತ್ಮಿಕ ಶಕ್ತಿಯಿಂದ ಜನರಲ್ಲಿ ತಿಳುವಳಿಕೆ ನೀಡಲು ಮುಂದಾದವರು ಸೇವಾಲಾಲ್‌ರು ಎಂದು ತಿಳಿಸಿದರು.

ಸತ್ಯ, ಅಹಿಂಸೆ ಮಾರ್ಗದಲ್ಲಿ ನಡೆದಾಗ ಜೀವನದಲ್ಲಿ ಸನ್ಮಾರ್ಗದ ಜೀವನ ನಡೆಸಲು ಸಾಧ್ಯವೆಂಬುದನ್ನು ತಿಳಿಸುವ ಮೂಲಕ ಜನರಲ್ಲಿ ಸನ್ಮಾರ್ಗದ ಹಾದಿಯಲ್ಲಿ ನಡೆಯುವಂತೆ ಮಾಡಿದವರು. ಸೇವಾಲಾಲ್‌ರ ಭಕ್ತಿಯಿಂದ ಪೂಜಿಸಿ ಅವರ ಮಾರ್ಗದಲ್ಲಿ ನಡೆದಾಗ ಮಾತ್ರ ಉತ್ತಮವಾದ ಜೀವನ ಸಾಗಿಸಲು ಸಾಧ್ಯವಾಗುತ್ತದೆ. ಆದ್ದರಿಂದ ಅವರ ಮಾರ್ಗದಲ್ಲಿ ನಾವೆಲ್ಲರೂ ನಡೆಯಬೇಕಿದೆ ಎಂದರು.



ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಮಾತನಾಡಿ ಸಂತ ಸೇವಾಲಾಲರು ಯೋಗಿ, ಮಹಾಸಂತರಾಗಿ ಲೋಕಕಲ್ಯಾಣಕ್ಕಾಗಿ ಶ್ರಮಿಸಿದವರು. ಅನ್ಯಾಯದ ವಿರುದ್ಧ ಹೋರಾಟ ಮಾಡಿದವರು. ಸರ್ವರನ್ನು ಒಳಗೊಂಡ ಸಮ ಸಮಾಜ ನಿರ್ಮಾಣ ಹಾಗೂ ಸರ್ವರಲ್ಲೂ ಸೋದರತೆ–ಯ ಭಾವವನ್ನು ಮೂಡಿಸಲು ಪ್ರೇರೇಪಿಸಿದವರು. ತಮ್ಮ ತತ್ವ ಹಾಗೂ ಜ್ಞಾನದ ಮೂಕಲ ಲೋಕಕ್ಕೆ ಮುಕ್ತಿ ಮಾರ್ಗವನ್ನು ತೋರಿಸುವ ಮೂಲಕ ಜನರಲ್ಲಿದ್ದ ಅಜ್ಞಾನವನ್ನು ಹೋಗಲಾಡಿಸಿದ್ದಾರೆ ಎಂದರು.

ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ ಮಾತನಾಡಿ ಸತ್ಯ, ಅಹಿಂಸೆ, ತ್ಯಾಗದ ಮನೋಭಾವದ ನೀತಿಗಳನ್ನು ತಮ್ಮ ವಚನ, ಉಪದೇಶಗಳ ಮೂಲಕ ಸಮಾಜಕ್ಕೆ ಕೊಡುಗೆ ನೀಡುವ ಮೂಲಕ ಜಗತ್ತಿಗೆ ಮಾರ್ಗದರ್ಶಕರಾದವರು ಸೇವಾಲಾಲ್‌ರು. ಅಂಧಶ್ರದ್ದೆ, ಅನ್ಯಾಯ, ಅಸಮಾನತೆ ವಿರುದ್ದ ಹೋರಾಟ ಮಾಡಿದ್ದಾರೆ. ಬಂಜಾರ ಸಮಾಜ ಧರ್ಮ, ಸಂಸ್ಕೃತಿ, ಪರಂಪರೆಗೆ ಹೆಸರುವಾಸಿಯಾದವರು ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಸಂಗಪ್ಪ ಮಾತನಾಡಿ, ಸಂತ ಸೇವಾಲಾಲರು ಸಮಾನತೆ ಮತ್ತು ಮಾನವೀಯತೆ, ಸತ್ಯ, ಧರ್ಮಪಾಲನೆ, ಮಧ್ಯಪಾನ, ಅಂಧಶ್ರದ್ದೆ ವಿರೋದ ಹಾಗೂ ಶಿಕ್ಷಣ ಮತ್ತು ನೈತಿಕ ಜೀವನದ ಮಹತ್ವವನ್ನು ಸಮಾಜಕ್ಕೆ ಸಾರಿದವರು ಎಂದರು. ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಅದ್ಯಕ್ಷ ಅನೀಲಕುಮಾರ ದಡ್ಡಿ ಮಾತನಾಡಿ, ಮಹಾನ್ ಸಂತ ಸೇವಾಲಾಲ್‌ರ ಜಯಂತಿ ಕೇವಲ ಆಚರಣೆ ಸೀಮಿತವಾಗಿರದೇ ಅವರ ಮಾರ್ಗದರ್ಶನದಂತೆ ನಡೆದಲ್ಲಿ ಉತ್ತಮ ಜೀವನ ಸಾಗಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು. ಉಪನ್ಯಾಸಕರಾಗಿ ಆಗಮಿಸಿದ್ದ ಸಾಹಿತಿ ಹಾಗೂ ಸಾಮಾಜಿಕ ಕಾರ್ಯಕರ್ತ ಸ್ವಂತತ್ರ ಸಿಂಧೆ ಸೇವಾಲಾಲರ ಜೀವನ ಚರಿತ್ರೆ ಕುರಿತು ವಿವರವಾಗಿ ತಿಳಿಸಿದರು.

ಕುಮಾರ ಮಹಾರಾಜರು, ವಿಷ್ಣು ಮಹಾರಾಜರು ಕಾರ್ಯಕ್ರಮದ ಸಾನಿಧ್ಯವಹಿಸಿದ್ದರು. ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ತಹಶೀಲ್ದಾರ ವಾಸುದೇವ ಸ್ವಾಮಿ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ರಮೇಶ ಚವ್ಹಾನ ಸೇರಿದಂತೆ ಸಮುದಾಯದ ಮುಖಂಡರಾದ ರಂಗನಗೌಡ ಗೌಡರ, ಹೂವಪ್ಪ ರಾಠೋಡ, ನಿಂಗಪ್ಪ ಚವ್ಹಾಣ, ರತ್ನಪ್ಪ ರಾಠೋಡ, ಹನಮಂತ ರಾಠೋಡ ಹಾಗೂ ಇತರರು ಉಪಸ್ಥಿತರಿದ್ದರು.

## ಸೇವಾಲಾಲರ ಅದ್ದೂರಿ ಭಾವಚಿತ್ರದ ಮೆರವಣಿಗೆ

ಸಂತ ಸೇವಾಲಾಲರ ಜಯಂತಿ ಅಂಗವಾಗಿ ಜಿಲ್ಲಾಡಳಿತ ಭವನದಿಂದ ಹಮ್ಮಿಕೊಂಡ ಅವರ ಭಾವಚಿತ್ರದ ಮೆರವಣಿಗೆಗೆ ಸಂಸದ ಪಿ.ಸಿ.ಗದ್ದಿಗೌಡ, ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ ಚಾಲನೆ ನೀಡಿದರು. ಮೆರವಣಿಗೆ ವಿವಿಧ ಜಾನಪದ ಕಲಾತಂಡಗೊಂದಿಗೆ ಜಿಲ್ಲಾಡಳಿತ ಭವನದಿಂದ ಪ್ರಾರಂಭವಾಗಿ ನಗರದ ನಾನಾ ಕಡೆಗಳಲ್ಲಿ ಸಂಚರಿಸಿ ಕೊನೆಗೆ ಕಲಾಭವನಕ್ಕೆ ಮುಕ್ತಾಯಗೊಂಡಿತು. ಪೂರ್ಣಕುಂಬ ಹೊತ್ತ ಮಹಿಳೆಯರು ಆಕರ್ಷಣೀಯ ಕೇಂದ್ರ ಬಿಂದು ಆಗಿದ್ದರು.

# ನುಕ್ಕುಡ್ ನಾಟಕ ಪ್ರದರ್ಶನ



**ಕೊಪ್ಪಳ:** ಬಾಲ್ಯ ವಿವಾಹದ ದುಷ್ಪರಿಣಾಮ, ಸಂಬಂಧಿಸಿದ ಕಾನೂನುಗಳ ಕುರಿತು ಜಾಗೃತಿ ಮೂಡಿಸಲು ಗುರುವಾರದಂದು ಅಂಕುರ್ ಮೀಡಿಯಾ ಏಜೆನ್ಸಿಯಿಂದ 30 ನಿಮಿಷದ ನುಕ್ಕುಡ್ ನಾಟಕ ಚಟುವಟಿಕೆಯನ್ನು ಕೊಪ್ಪಳ ಕೇಂದ್ರೀಯ ಬಸ್ ನಿಲ್ದಾಣ ಹಾಗೂ ಕುಷ್ಟಗಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಬಾಲ್ಯವಿವಾಹ ಮುಕ್ತ ಭಾರತ (ಬಿ.ವಿ.ಎಂ.ಬಿ) ವಿಶೇಷಅಭಿಯಾನದಅಡಿಯಲ್ಲಿಬಾಲ್ಯವಿವಾಹದಿಂದಮಕ್ಕಳ ಮೇಲಾಗುವ ದುಷ್ಪರಿಣಾಮಗಳು, ಬಾಲ್ಯವಿವಾಹ ನಿಷೇಧ ಕಾಯ್ದೆ-2006 ಕರ್ನಾಟಕ ತಿದ್ದುಪಡಿ-2016ರ ಕುರಿತು ಇನ್ನೂ ಹೆಚ್ಚಿನ ಜಾಗೃತಿಯನ್ನು ಮೂಡಿಸುವ ನಿಟ್ಟಿನಲ್ಲಿ "ನುಕ್ಕುಡ ನಾಟಕ" ಚಟುವಟಿಕೆಗಳನ್ನು ಕೈಗೊಳ್ಳಲು ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಾದ್ಯಂತ 105 ಸ್ಥಳಗಳನ್ನು, 100 ಜಿಲ್ಲೆಗಳನ್ನು ಆಯ್ಕೆ ಮಾಡಿದ್ದು, ಅದರಂತೆ ಜಿಲ್ಲಾಧಿಕಾರಿಗಳ ಸೂಚನೆ ಮೇರೆಗೆ ಜಿಲ್ಲೆಯಲ್ಲಿ ಅಂಕುರ್ ಮೀಡಿಯಾ ಏಜೆನ್ಸಿಯಿಂದ 30 ನಿಮಿಷದ "ನುಕ್ಕುಡ್ ನಾಟಕ" ಚಟುವಟಿಕೆಗಳನ್ನು ಯಶಸ್ವಿಯಾಗಿ ಪ್ರದರ್ಶಿಸಿ, ಬಾಲ್ಯವಿವಾಹ ನಿಷೇಧದ ಕುರಿತು ಅರಿವು ಮೂಡಿಸಲಾಯಿತು.

# ಅಪಘಾತ: ಐವರು ಬಲಿ

**ಬೆಂಗಳೂರು:** ನೆಲಮಂಗಲ ಹೆದ್ದಾರಿಯ ಜಿಂದಾಲ್ ಮೇಲ್ಸೇತುವೆ ಬಳಿ ಕೆಎಸ್ ಆರ್ ಟಿಸಿ ಬಸ್ ಮತ್ತು ಕಾರಿನ ನಡುವೆ ಸಂಭವಿಸಿದ ಭೀಕರ ಅಪಘಾತದಲ್ಲಿ ಐವರು ಐವರು ಯುವಕರು ಮೃತಪಟ್ಟಿದ್ದಾರೆ. ಇಂಡಿಕಾ ಕಾರಿನಲ್ಲಿದ್ದ ಐವರು ದುರ್ಮರಣ ಹೊಂದಿದ್ದು, ದೊಡ್ಡಬಳ್ಳಾಪುರದ ಹರ್ಷಿತ್, ನಿಖಿತ್ ಸೇರಿ ಇತರರು ಮೃತ ದುರ್ದೈವಿಗಳಾಗಿದ್ದಾರೆ. ತುಮಕೂರು ಕಡೆಯಿಂದ ಬರುತ್ತಿದ್ದ ಕಾರು ಡಿವೈಡರ್ ಜಂಪ್ ಮಾಡಿ ಬೆಂಗಳೂರು ಕಡೆಯಿಂದ ಹೊರಟಿದ್ದ ಕೆಎಸ್ ಆರ್ ಟಿಸಿ ಬಸ್ಗೆ ಡಿಕ್ಕಿಯಾಗಿದ್ದು, ನೆಲಮಂಗಲ ಸರ್ಕಾರಿ ಆಸ್ಪತ್ರೆಗೆ ಐವರ ಮೃತದೇಹ ರವಾನೆ ಮಾಡಲಾಗಿದೆ. ಬಸ್‌ನಲ್ಲಿದ್ದವರಿಗೆ ಯಾವುದೇ ಅಪಾಯವಾಗಿಲ್ಲ. ಪ್ರಕರಣ ದಾಖಲಾಗಿದೆ.

# ಟ್ಯಾಂಕ್ ಸ್ಫೋಟ: ಇಬ್ಬರ ಸಾವು

**ಮಂಡ್ಯ:** ಭಾನುವಾರ ಕಾರೆಕಟ್ಟೆ ಗ್ರಾಮದ ಬಳಿಯ ಕೀರ್ತಿ ಕೆಮಿಕಲ್ಸ್ ಇಂಡಸ್ಟ್ರೀಸ್ ಕಾರ್ಖಾನೆಯೊಂದರಲ್ಲಿ ರಾಸಾಯನಿಕ ಸಂಗ್ರಹಣಾ ಟ್ಯಾಂಕ್ ಸ್ಫೋಟಗೊಂಡು ಇಬ್ಬರು ಮೃತಪಟ್ಟಿದ್ದಾರೆ. ನಾಲ್ವರು ತೀವ್ರವಾಗಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ರಾಸಾಯನಿಕ ಕಾರ್ಖಾನೆಯನ್ನು ಸ್ಥಳಾಂತರಿಸುವ ಸಂದರ್ಭದಲ್ಲಿ ಸ್ಫೋಟ ಸಂಭವಿಸಿದ್ದು, ಬಿಹಾರ ಮೂಲಕ ಕಾರ್ಮಿಕರು ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ ಎಂದು ಹೇಳಲಾಗಿದೆ. ಈ ಬಗ್ಗೆ ತನಿಖೆ ಮುಂದುವರೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

# ಬಿಜೆಪಿ ಶಾಸಕ ಭೈರತಿ ಕಸ್ಟಡಿಗೆ

**ಬೆಂಗಳೂರು:** ರೌಡಿಶೀಟರ್ ಬಿಕ್ಲು ಶಿವ ಕೊಲೆ ಪ್ರಕರಣ ಸಂಬಂಧ ಬಂಧನದಲ್ಲಿರುವ ಶಾಸಕ ಭೈರತಿ ಬಸವರಾರಜ್ ಅವರನ್ನು ಫೆ.21ರವರೆಗೆ ಸಿಐಡಿ ಕಸ್ಟಡಿಗೆ ನೀಡಿ 42ನೇ ಎಸಿಜೆಎಂ ಕೋರ್ಟ್ ನ್ಯಾಯಾಧೀಶರು ಆದೇಶ ಹೊರಡಿಸಿದ್ದಾರೆ. ಜಯದೇವ ಆಸ್ಪತ್ರೆಯಲ್ಲಿ ಹೃದಯ ಸಂಬಂಧಿ ಪರೀಕ್ಷೆಗಳ ಬಳಿಕ ಕೋರಮಂಗಲದಲ್ಲಿರುವ 42ನೇ ಎಸಿಜೆಎಂ ಕೋರ್ಟ್ ಜಡ್ಜ್ ನಿವಾಸಕ್ಕೆ ಶಾಸಕರನ್ನು ಹಾಜರುಪಡಿಸಲಾಗಿತ್ತು.

# ಇಷ್ಟಲಿಂಗ ಮಹಾಪೂಜೆ



**ಭಾಲ್ಕಿ:** ಮಹಾಶಿವರಾತ್ರಿ ಪಾವನ ಸಂದರ್ಭದಲ್ಲಿ ನಾಡೋಜ ಡಾ. ಬಸವಲಿಂಗ ಪಟ್ಟದೇವರು ಹಾಗೂ ಗುರು ಬಸವಲಿಂಗ ಪಟ್ಟದೇವರು ಅವರ ದಿವ್ಯ ಸಾನಿಧ್ಯದಲ್ಲಿ ಭಾಲ್ಕಿಯ ತಮ್ಮ ನಿವಾಸದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಖಂಡ್ರೆ ಸಂಸದರಾದ ಶ್ರೀ ಸಾಗರ ಖಂಡ್ರೆ ಹಾಗೂ ಕುಟುಂಬಸ್ಥರು ಇಷ್ಟಲಿಂಗ ಮಹಾಪೂಜೆಯನ್ನು ಭಕ್ತಿಭಾವದಿಂದ ನೆರವೇರಿಸಿದರು.

# ಗುರು ಹಿರಿಯರು ಹಾಕಿಕೊಟ್ಟ ಮಾರ್ಗದಲ್ಲಿ ನಡೆದರೆ ಯಶಸ್ಸು ಖಂಡಿತ: ಡಿಸಿಎಂ

• **ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು**

"ಬೇರನ್ನು ಮರೆತರೆ ಮರ ಬಾಳುವುದಿಲ್ಲ. ಅದೇ ರೀತಿ ನಿಮ್ಮ ಮೂಲವನ್ನು ಮರೆತರೆ ಫಲ ದೊರೆಯುವುದಿಲ್ಲ. ಅದೇ ರೀತಿ ಗುರು ಹಿರಿಯರು ಹಾಕಿಕೊಟ್ಟ ಮಾರ್ಗದಲ್ಲಿ ನಡೆದರೆ ಯಶಸ್ಸು ಖಂಡಿತ" ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಶಾಲಾ ಮಕ್ಕಳಿಗೆ ಕಿವಿಮಾತು ಹೇಳಿದರು.



ನಗರದ ಪುರಭವನದಲ್ಲಿ ಭಾನುವಾರ ಏರ್ಪಡಿಸಿದ್ದ ಕೆ.ಜೆ. ಪ್ರೌಢಶಾಲೆಯ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಮಾತನಾಡಿದರು.

"ವಿದ್ಯೆಯಿಂದ ವಿನಯ, ವಿನಯದಿಂದ ಯೋಗ್ಯತೆ, ಯೋಗ್ಯತೆಯಿಂದ ಹಣ, ಹಣದಿಂದ ಧರ್ಮ, ಧರ್ಮದಿಂದ ಸುಖ ದೊರೆಯುತ್ತದೆ. ನೀವೆಲ್ಲರೂ ಈ ದೇಶಕ್ಕೆ, ರಾಜ್ಯಕ್ಕೆ ದೊಡ್ಡ ಆಸ್ತಿಯಾಗಿ ಬೆಳೆಯಬೇಕು" ಎಂದು ಹೇಳಿದರು.

"ಇಪ್ಪತ್ತೈದು ವರ್ಷಗಳ ಹಿಂದೆ ಒಂದು ಸಮ್ಮೇಳನದಲ್ಲಿ ಭಾಗವಹಿಸುವ ಸಲುವಾಗ ಪ್ಯಾರಿಸ್ ಗೆ ತೆರಳಿದ್ದೆ. ಆ ದಿನ ನನ್ನ ಹುಟ್ಟುಹಬ್ಬ ಎಂದು ಹೇಗೋ ಅಲ್ಲಿದ್ದವರಿಗೆ ತಿಳಿದು ಹೋಯಿತು. ಆಗ ನನ್ನನ್ನು ವೇದಿಕೆ ಮೇಲೆ ಕರೆದರು. ನಾನು ಹಳ್ಳಿಗಾಡಿನಿಂದ ಬಂದ ವ್ಯಕ್ತಿ. ಹುಟ್ಟುಹಬ್ಬ ಆಚರಿಸುವ ಸಂಸ್ಕೃತಿ ನಮ್ಮ ಕಡೆ ಇರಲಿಲ್ಲ. ಆದರೂ ಕೇಕ್ ತಂದು ಅದರ ಮೇಲೆ ಮೇಣದಬತ್ತಿಯಿಟ್ಟು ಹಚ್ಚಿದ ನಂತರ ಅದನ್ನು ನಂದಿಸುವಂತೆ ತಿಳಿಸಿದರು. ಆಗ ಆ ಕೊಠಡಿಯ ಒಂದು ಭಾಗದಲ್ಲಿದ್ದ ವ್ಯಕ್ತಿಯೋರ್ವ ಓಡಿಬಂದು ಹಚ್ಚಿದ ಮೇಣದ ಬತ್ತಿಯನ್ನು ಅವರು ಆರಿಸುವುದಿಲ್ಲ. ಏಕೆಂದರೆ ಅವರು ಬಂದಿರುವುದು ಭಾರತದಿಂದ. ಅವರದ್ದು ದೀಪ ಬೆಳಗಿಸುವ ಸಂಸ್ಕೃತಿಯೇ ಹೊರತು ದೀಪ ಆರಿಸುವ ಸಂಸ್ಕೃತಿಯಲ್ಲ" ಎಂದರು.


"ಮಕ್ಕಳು ಮುಂದಿನ ಬಾರಿ ಹುಟ್ಟುಹಬ್ಬ ಆಚರಿಸಿಕೊಳ್ಳುವಾಗ ಮೇಣದಬತ್ತಿಯನ್ನು ಆರಿಸದೇ ಹಚ್ಚಬೇಕು. ನಿಮ್ಮ ಗುರಿ ಹೊಸ ವಿಚಾರಗಳನ್ನು ಕಲಿಯುವ ಕಡೆ ಇರಬೇಕು. ರುಪರಪಹರಿಸದ, ದಾಯಾದಿ ದಕ್ಕಿಸದ, ನೀರಿನಲ್ಲಿ ನೆನೆಯದ, ಅಗ್ನಿಯಲ್ಲಿ ಸುಡದ ಗುಪ್ತ ನಿಧಿ ಎಂದರೆ ಅದು ವಿದ್ಯೆ. ನೀವು ಕಲಿಯುವ ವಿದ್ಯೆಯನ್ನು ಬೇರೆ ಯಾರೂ ಕಸಿಯಲು ಸಾಧ್ಯವಿಲ್ಲ" ಎಂದರು.

# ಅಣ್ಣನ ಶ್ರಮ, ದಾಸೋಹ ದಾರಿ ದೀಪ

• **ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ**

ಶರಣರ ನಾಡು ಬಸವಕಲ್ಯಾಣದಲ್ಲಿನ ವಿಶ್ವಗುರು ಬಸವೇಶ್ವರರ ಆದರ್ಶಗಳ ಪ್ರತೀಕವಾದ ವಿಶ್ವಗುರು ಬಸವೇಶ್ವರ ದೇವಸ್ಥಾನದ ಜೀರ್ಣೋದ್ಧಾರಗೊಂಡ ಕಟ್ಟಡವನ್ನು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರು ಪೂಜ್ಯರ ಸಾನ್ನಿಧ್ಯದಲ್ಲಿ ಉದ್ಘಾಟಿಸಿದ್ದಾರೆ.

ಬಳಿಕ ಮಾತನಾಡಿ, ಬಸವಣ್ಣನವರ ಸಮಾನತೆ, ಶ್ರಮ, ದಾಸೋಹ ಹಾಗೂ ಮಾನವೀಯ ಮೌಲ್ಯಗಳು ಇಂದಿಗೂ ಸಮಾಜಕ್ಕೆ ಶಾಶ್ವತ ದಾರಿದೀಪವಾಗಿವೆ. ದೇವಸ್ಥಾನಗಳ ಜೀರ್ಣೋದ್ಧಾರವು ಕೇವಲ ಭೌತಿಕ ಕಟ್ಟಡಗಳ ಪುನರ್ ನಿರ್ಮಾಣವಲ್ಲ; ಅದು ಶರಣ ಸಂಸ್ಕೃತಿ, ಸಾಂಸ್ಕೃತಿಕ ಪರಂಪರೆ ಹಾಗೂ ಸಾಮಾಜಿಕ ಏಕತೆಯನ್ನು ಮುಂದಿನ ತಲೆಮಾರಿಗೆ ಉಳಿಸಿ ಸಾಗಿಸುವ ಮಹತ್ವದ ಕಾರ್ಯವಾಗಿದೆ ಎಂದು ಹೇಳಿದ್ದಾರೆ. ಶರಣ ಸಂಸ್ಕೃತಿಯ ಪ್ರಮುಖ ಕೇಂದ್ರವಾದ ಬಸವಕಲ್ಯಾಣದಲ್ಲಿ ಈ ಜೀರ್ಣೋದ್ಧಾರ ಕಾರ್ಯದಿಂದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಪ್ರವಾಸೋದ್ಯಮಕ್ಕೆ ಹೆಚ್ಚಿನ ಉತ್ತೇಜನ ದೊರೆಯಲಿದೆ. ಬಸವೇಶ್ವರರ ಆದರ್ಶಗಳನ್ನು ಜನಜೀವನಕ್ಕೆ ಇನ್ನಷ್ಟು ಸಮೀಪಿಸುವ ನಿಟ್ಟಿನಲ್ಲಿ ಸರ್ಕಾರ ಸದಾ ಅಗತ್ಯ ಸಹಕಾರ ನೀಡಲಿದೆ ಎಂದು ಸಚಿವರು ಭರವಸೆ ನೀಡಿದ್ದಾರೆ.



# ಅದ್ದೂರಿ ಮಹಾಶಿವರಾತ್ರಿ ಆಚರಣೆ

• **ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ**

ಪಟ್ಟಣ ಸೇರಿದಂತೆ ವಲಯದಲ್ಲಿ ರವಿವಾರ ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ ವಿವಿಧ ದೇವಾಲಯಗಳಲ್ಲಿ ಶಿವನಿಗೆ ವಿಶೇಷ ಪೂಜೆ, ಅಭಿಷೇಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಅತ್ಯಂತ ಸಡಗರದಿಂದ ಜರುಗಿದವು.

ಪಟ್ಟಣದ ಐತಿಹಾಸಿಕ ಭೋಗೇಶ್ವರ ದೇವಸ್ಥಾನ, ರೇವಣಸಿದ್ದೇಶ್ವರ, ಶರಣಬಸವೇಶ್ವರ, ಕಾಶಿವಿಶ್ವನಾಥ ಸೇರಿದಂತೆ ವಿವಿಧ ದೇವಾಲಗಳಲ್ಲಿ ಮುಂಜಾನೆಯಿಂದಲೇ ಶಿವಲಿಂಗಕ್ಕೆ ವಿಶೇಷ ಪುಷ್ಪಾಲಂಕಾರ, ಬಿಲ್ವಾರ್ಚನೆ ಹಾಗೂ ರುದ್ರಾಭಿಷೇಕಗಳನ್ನು ಪೂಜಾ ವಿಧಿವಿಧಾನಗಳು ನೆರವೇರಿಸಲಾಯಿತು. ದಿನವಿಡೀ ಭಕ್ತಿಗೀತೆಗಳು ಮತ್ತು ಭಜನೆಗಳ ಮೂಲಕ ಹಬ್ಬದ ಆಚರಣೆ ದೈವತ್ವದ ಕಳೆ ಹೆಚ್ಚಿತ್ತು. ಭಕ್ತರು ದೇವಾಲಯಗಳಿಗೆ ಭೇಟಿ ನೀಡಿ ದೇವರ ದರ್ಶನ ಪಡೆದರು.

ಹಬ್ಬದ ನಿಮಿತ್ಯ ದಿನವಿಡೀ ಭಕ್ತಿಯಿಂದ ಉಪವಾಸ ವ್ರತ ಕೈಗೊಂಡಿದ್ದ ನೂರಾರು ಭಕ್ತರು, ಸಂಜೆ ದೇವರ ದರ್ಶನ ಪಡೆದು ತೀರ್ಥ-ಪ್ರಸಾದ ಸ್ವೀಕರಿಸುವ ಮೂಲಕ ತಮ್ಮ ವ್ರತವನ್ನು ಸಾಂಗವಾಗಿ ನೆರವೇರಿಸಿದರು. ದೇವಾಲಯಗಳಲ್ಲಿ ಭಕ್ತರಿಗಾಗಿ ಲಘು ಉಪಹಾರ ಹಾಗೂ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು. ಈ ಸಂಧರ್ಭದಲ್ಲಿ ಭೋಗೇಶ್ವರ ದೇವಸ್ಥಾನ ಅರ್ಚಕ ರಾಜಶೇಖರ ಹಿರೇಮಠ ಮಾತನಾಡಿ ಶಿವನ ರಾತ್ರಿ ಎಂಬಂತೆ ಭಕ್ತರು ರಾತ್ರಿಯಿಡೀ ನಿದ್ದೆ ಮಾಡದೆ ಶಿವನಾಮ ಸ್ಮರಣೆ, ಭಜನೆ ಮತ್ತು ಧ್ಯಾನದ ಮೂಲಕ ಜಾಗರಣೆ ಮಾಡುವುದು ಈ ಹಬ್ಬದ ವಿಶೇಷವಾಗಿದೆ ಶಿವನು ಪಾರ್ವತಿ ದೇವಿಯನ್ನು ವಿವಾಹವಾದ ಮತ್ತು ಲೋಕಕಲ್ಯಾಣಕ್ಕಾಗಿ ಹಾಲಾಹಲವನ್ನು ಕುಡಿದು "ನೀಲಕಂಠ'ನಾದ ಪವಿತ್ರ ದಿನವಾಗಿದೆ. ಇದು ಅಂಧಕಾರ ಮತ್ತು ಅಜ್ಞಾನವನ್ನು ಹೋಗಲಾಡಿಸುವ ಸಂಕೇತವಾಗಿದೆ ಎಂದು ತಿಳಿಸಿದರು.




# ಭಾರತೀಯ ಸಂಸ್ಕೃತಿಯಲ್ಲಿ ಶಿವರಾತ್ರಿಗೆ ಪವಿತ್ರ ಸ್ಥಾನ: ಶಾಸಕ ಎಸ್ ಮುನಿರಾಜು

• **ಮಲ್ಲಮ್ಮ ನುಡಿ ವಾರ್ತೆ ಪೀಣ್ಯ,ದಾಸರಹಳ್ಳಿ**

ಭಾರತೀಯ ಸಂಸ್ಕೃತಿಯಲ್ಲಿ ಶಿವರಾತ್ರಿಗೆ ಅತ್ಯಂತ ಪವಿತ್ರವಾದ ಸ್ಥಾನವಿದೆ. ಶಿವ ಎಂದರೆ ಮಂಗಳ ಎಂದರ್ಥ. ಲೋಕಕ್ಕೆ ಕಲ್ಯಾಣವನ್ನುಂಟು ಮಾಡುವವನೇ ಆ ಪರಶಿವ. ಜಾಗರಣೆಯು ಅಜ್ಞಾನದ ಕತ್ತಲನ್ನು ದೂರ ಮಾಡಿ ಜ್ಞಾನದ ಬೆಳಕಿನತ್ತ ಸಾಗುವುದನ್ನು ಸೂಚಿಸುತ್ತದೆ', ಎಂದು ಶಾಸಕ ಎಸ್ ಮುನಿರಾಜು ಹೇಳಿದರು

ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ ಹೆಗ್ಗನಹಳ್ಳಿ ಕ್ರಾಸ್ ನಲ್ಲಿರುವ ನೀಲಕಂಠೇಶ್ವರ ಸ್ವಾಮಿ ದೇವಸ್ಥಾನಕ್ಕೆ ಭೇಟಿ ನೀಡಿ ಶಿವನ ಆಶೀರ್ವಾದ ಪಡೆದು ಮಾತನಾಡಿದ ಅವರು, 'ಶಿವನಿಗೆ ಅದ್ದೂರಿ ಅಲಂಕಾರಕ್ಕಿಂತ ಭಕ್ತಿಯಿಂದ ಅರ್ಪಿಸುವ ಒಂದು ಬಿಲ್ವಪತ್ರೆ ಹಾಗೂ ಅಭಿಷೇಕ ಎಂದರೆ ಬಹಳ ಪ್ರೀತಿ. ಹಾಗೆಯೇ ಶಿವನು ಹಾಲಾಹಲವನ್ನು ಕುಡಿದು ಲೋಕವನ್ನು ರಕ್ಷಿಸಿದಂತೆ ನಾವು ಕೂಡ ನಮ್ಮೊಳಗಿನ ಕೆಟ್ಟ ಆಲೋಚನೆಗಳನ್ನು ತ್ಯಜಿಸಿ ಸನ್ಮಾರ್ಗದಲ್ಲಿ ನಡೆಯಬೇಕೆಂಬುದೇ ಈ ಹಬ್ಬದ ಸಂದೇಶ' ಎಂದು ಹೇಳಿದರು.



ಈ ಸಂದರ್ಭದಲ್ಲಿ ಮಾಜಿ ಬಿಬಿಎಂಪಿ ಸದಸ್ಯರಾದ ಭಾಗ್ಯಮ್ಮ ಕೃಷ್ಣಯ್ಯ, ಹೆಚ್. ಎನ್ ಗಂಗಾಧರ್, ರಾಜಗೋಪಾಲನಗರ ವಾರ್ಡ್ ಬಿಜೆಪಿ ಮಾಜಿ ಅಧ್ಯಕ್ಷರಾದ ಆರ್. ಸಿ ಹರೀಶ್, ಬಿಜೆಪಿ ಮುಖಂಡರಾದ ಮಹೇಶ್ ಕುಮಾರ್ (ಟೆಂಟ್ ಮಂಜಣ್ಣ), ಡಾ. ನಾಗೇಶ್ ಕುಮಾರ್, ವೆಂಕಟೇಶ್, ಶ್ರೀನಿವಾಸ್ ಸೇರಿದಂತೆ ಹಲವಾರು ಮುಖಂಡರು, ಸ್ಥಳೀಯರು, ಭಕ್ತಾದಿಗಳು ಉಪಸ್ಥಿತರಿದ್ದರು.

# ಸಿಮೆಂಟ್ ಕಂಪನಿ ಪ್ರಾರಂಭಿಸುವಂತೆ ಕುಮಾರಸ್ವಾಮಿಗೆ ಗುತ್ತೇದಾರ ಮನವಿ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ**

ಬೆಂಗಳೂರಿನ ಜೆ ಪಿ ನಗರದ ನಿವಾಸದಲ್ಲಿ ಸೇಡಂ ತಾಲೂಕಿನ ಸಿಸಿಐ ಸಿಮೆಂಟ್ ಫ್ಯಾಕ್ಟರ್ ಕಳೆದ 20 ವರ್ಷಗಳಿಂದ ಕಾರ್ಖಾನೆ ಉತ್ಪಾದನೆ ಸ್ಥಗಿ-ತಗೊಂಡಿದೆ. ಇಲ್ಲಿನ ಸ್ಥಳೀಯರಿಗೆ ಉದ್ಯೋಗ ಅವಕಾಶ ಸಿಗುತ್ತಿಲ್ಲ. ಈ ಕಾರ್ಖಾನೆ ಪುನರ್ ಆರಂಭವಾದಲ್ಲಿ ಸ್ಥಳೀಯರಿಗೆ ನಿರುದ್ಯೋಗದ ಸಮಸ್ಯೆ ಇರುವುದಿಲ್ಲ. ಆದಕಾರಣ ಶೀಘ್ರ ಕಾರ್ಖಾನೆ ಪುನರ್ ಪ್ರಾರಂಭಿಸಬೇಕೆಂದು ಬೃಹತ್ ಕೈಗಾರಿಕಾ ಕೇಂದ್ರ ಸಚಿವರಾದ ಹೆಚ್. ಡಿ.ಕುಮಾರಸ್ವಾಮಿ ಅವರಿಗೆ ಕಲಬುರಗಿ ಜಿಲ್ಲಾ ಜೆ.ಡಿ.ಎಸ್ ಅಧ್ಯಕ್ಷ ಬಾಲರಾಜ್ ಗುತ್ತೇದಾರ ಮನವಿ ಮಾಡಿದರು.



ಬೆಂಗಳೂರಿನಲ್ಲಿ ಕೇಂದ್ರ ಸಚಿವರ ನಿವಾಸದಲ್ಲಿ ಮನವಿ ಸಲ್ಲಿಸಿ ಕಳೆದ ಒಂದು ವರ್ಷದಿಂದ ಕಲಬುರಗಿ ವಿಮಾನ ನಿಲ್ದಾಣದಿಂದ ವಿಮಾನಗಳ ಹಾರಾಟ ಸ್ಥಗಿತವಾಗಿದೆ. ಕಾರಣ, ಇಲ್ಲಿನ ಜನರಿಗೆ ಬೆಂಗಳೂರು, ಮುಂಬೈ, ತಿರುಪತಿ, ಪ್ರಯಾಣಕ್ಕೆ ಅನಾನುಕೂಲವಾಗುತ್ತಿದೆ. ಈ ಹಿನ್ನಲೆಯಲ್ಲಿ ಕೂಡಲೇ ವಿಮಾನ ಹಾರಾಟ ಪ್ರಾರಂಭಿಸಬೇಕು. ಕಲಬುರಗಿ ಭಾಗದ ಮುಖ್ಯ ವಾಣಿಜ್ಯ ಬೆಳೆಯಾದ ತೊಗರಿ ಬೆಳೆಗೆ ಕೇಂದ್ರ ಸರ್ಕಾರದ ವತಿಯಿಂದ ಪ್ರತಿ ಕ್ವಿಂಟಲ್‌ಗೆ ರೂ.12 ಸಾವಿರ ದರ ನಿಗದಿ ಮಾಡಿದಲ್ಲಿ ಈ ಭಾಗದ ರೈತರು ಸ್ವಾವಲಂಬಿ ಜೀವನ ಸಾಗಿಸಲು ಅನುಕೂಲವಾಗುತ್ತದೆ. ಈಗಿನ ದರ ಪರಿಷ್ಕರಿಸಬೇಕು.

ಕಲಬುರಗಿ ಜಿಲ್ಲೆಯಲ್ಲಿ ಅನೇಕ ಸಿಮೆಂಟ್ ಕಾರ್ಖಾನೆ ಹಾಗೂ ಸಕ್ಕರೆ ಕಾರ್ಖಾನೆಗಳಿದ್ದು ಅದರಲ್ಲಿ ಶೇ 50% ಹುದ್ದೆಗಳನ್ನು ಸ್ಥಳಿಯರಿಗೆ ನೀಡುವುದರ ಮೂಲಕ ನಮ್ಮ ಕಲಬುರಗಿ ಜಿಲ್ಲೆಯ ಜನರಿಗೆ ಗುಳೆ ಹೋಗುವುದನ್ನು ತಪ್ಪಿಸಲು ಕಾರ್ಖಾನೆಗಳಿಗೆ ನಿರ್ದೇಶನ ನೀಡಬೇಕು. ಯಾದಗಿರಿ ಜಿಲ್ಲೆಯ ಹಿಂದುಳಿದ ಈ ಭಾಗದಲ್ಲಿ ಬೃಹತ್ ಕೈಗಾರಿಕೆಗಳು ಬರಲಿ ಎಂಬ ಉದ್ದೇಶದಿಂದ ಸರ್ಕಾರ ಕಡೆಚೂರು, ಬಾಡಿಯಾಳ ಮತ್ತು ಶೆಟ್ಟಿಹಳ್ಳಿ ಗ್ರಾಮಗಳಿಗೆ ಸೇರಿದ್ದ 3232 ಎಕರೆ ಭೂಮಿಯನ್ನು ಕೆಐಎಡಿಬಿ 2012-13ರಲ್ಲಿ ಸ್ವಾಧೀನ ಪಡಿಸಿಕೊಂಡಿತು. ಈ ಜಾಗ ಸ್ವಾಧೀನಪಡಿಸಿಕೊಂಡು ದಶಕ ಮೇಲಾಯಿತು. ಆದರೆ, ಅಂತಹ ಉದ್ಯಮಗಳು ಸ್ಥಾಪನೆಗೊಳ್ಳಲಿಲ್ಲ. ಗಡಿ ಪ್ರದೇಶದಲ್ಲಿ ಥರ್ಮಲ್ ಪವರ್, ಜವಳಿ ಪಾರ್ಕ್, ಕೋಕಾಕೋಲಾ ಕಂಪನಿ ಸೇರಿದಂತೆ ಹಲವು ದೈತ್ಯ ಕಂಪನಿಗಳು ಇಲ್ಲಿಗೆ ಬಂದು ಕೈಗಾರಿಕಾ ಸ್ಥಾಪಿಸಿದರೆ ಕಲ್ಯಾಣ ಕರ್ನಾಟಕ ಭಾಗದ ನಿರುದ್ಯೋಗ ನಿವಾರಣೆಯಾಗಲಿದೆ. ಅಲ್ಲದೆ ಅಭಿವೃದ್ಧಿಗೆ ಪೂರಕವಾಗಲಿದೆ ಎಂದು ಭೂಸ್ವಾಧೀನ ಮಾಡಿಕೊಳ್ಳಲಾಗಿತ್ತು. ಆದರೆ, ದಶಕ ಕಳೆದರೂ ಅಲ್ಲಿ ಒಂದು ಬೃಹತ್ ಕೈಗಾರಿಕೆ ಬರಲಿಲ್ಲ. ಕನಸು ಮತ್ತು ಉತ್ಸಾಹಕ್ಕೆ ತಣ್ಣಿರು ಬಿದ್ದು ಭೂಮಿ ಕೊಟ್ಟ ರೈತರು ಕಂಗಾಲಾಗಿದ್ದು ಜನರು, ಗುಳೆ ಹೋಗುತ್ತಿದ್ದಾರೆ ಆದಕಾರಣ ತಾವೂ ಬೃಹತ ಕೈಗಾರಿಕೆಗಳನ್ನು ಪ್ರಾರಂಭಿಸಬೇಕು ಎಂದು ಬಾಲರಾಜ್ ಗುತ್ತೇದಾರ ಮನವಿ ಮಾಡಿದರು.

# ಕ್ರೀಡಾಂಗಣಕ್ಕೆ ಲಿಂ. ಭೀಮಣ್ಣ ಖಂಡ್ರೆ ಹೆಸರಿಡಿ

• **ಪರಶುರಾಮ ಕರಣಂ, ಭಾಲ್ಕಿ**

ತಾಲೂಕಿನ ಕ್ರೀಡಾಪಟುಗಳು ಕ್ರೀಡೆಯಲ್ಲಿ ಹೆಚ್ಚಿನ ಸಾಧನೆ ಮಾಡಲು ರಾಮೇಶ್ವರ ಟೇಕಣಿ ದೇವಾಲಯದ ಹತ್ತಿರ 18 ಎಕರೆ ಪ್ರದೇಶದಲ್ಲಿ 16 ಕೋಟಿ ಅನುದಾನದಲ್ಲಿ ವಿಶಾಲವಾದ ಕ್ರೀಡಾಂಗಣಕ್ಕೆ ಈಗಾಗಲೇ ಶಂಕುಸ್ಥಾಪನೆಯೊಂದಿಗೆ ಕಾಮಗಾರಿ ಚಾಲ್ತಿಯಲ್ಲಿದ್ದು, ಮುಂಬರುವ ದಿನಗಳಲ್ಲಿ ಈ ಕ್ರೀಡಾಂಗಣಕ್ಕೆ ಲೋಕ ನಾಯಕ ಲಿಂ. ಭೀಮಣ್ಣ ಖಂಡ್ರೆ ಅವರ ಹೆಸರಿಟ್ಟು ಲೋಕಾರ್ಪಣೆಗೊಳಿಸಬೇಕೆಂದು ದಿ. ಜೆ ಹೆಚ್ ಪಟೇಲ್ ಜಿಲ್ಲಾ ಅಭಿಮಾನಿ ಸಂಘದ ಅಧ್ಯಕ್ಷರಾದ ಶಾಂತಯ್ಯ ಬಿ ಸ್ವಾಮಿ ಮುಖ್ಯಮಂತ್ರಿಗಳಿಗೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಖಂಡ್ರೆ ಅವರಿಗೆ ಮನವಿ ಮಾಡಿದ್ದಾರೆ.

ಹುಟ್ಟು ಹೋರಾಟಗಾರರಾದ ಭೀಮಣ್ಣ ಖಂಡ್ರೆ 1977 ರ ಕೇಂದ್ರ ಸರ್ಕಾರ ಕಾರ್ಯಕ್ರಮದ ಅಡಿ ಭಾಲ್ಕಿಯಲ್ಲಿ ಸಂತಾನ ಹರಣ ಚಿಕಿತ್ಸೆಯನ್ನು ಒಂದೇ ದಿವಸದಲ್ಲಿ ಜನರ ಸ್ವ ಇಚ್ಛೆಯಿಂದ 2224 ಜನರನ್ನು ಮಾಡಿಸಿ ರಾಷ್ಟ್ರಮಟ್ಟದಲ್ಲಿ ತಮ್ಮ ನಾಯಕತ್ವದ ಹೆಸರನ್ನು ಅಂದೆ ಛಾಪು ಮೂಡಿಸಿದ್ದರು. ಬಿಬಿಸಿ ಲಂಡನ್ ಆಕಾಶವಾಣಿಯಲ್ಲಿ ಇವರ ಹೆಸರನ್ನು ಬಿತ್ತರಿಸಲಾಗಿತ್ತು. ಇವರ ಅಭಿಮಾನಿಗಳಿಗೆ ಸಂತಸ ಮುಗಿಲು ಮುಟ್ಟಿತ್ತು.

ಗಡಿಭಾಗದಲ್ಲಿ ಕನ್ನಡ ಉಳಿವಿಕೆಗಾಗಿ, ನಿಜಾಮನ ಆಳ್ವಿಕೆ ವಿರುದ್ಧ ಹೋರಾಡಿದ ಅಪ್ರತಿಮ ಹೋರಾಟಗಾರರು. ಕಲ್ಯಾಣ ಕರ್ನಾಟಕ ಪ್ರದೇಶದ 371(ಜೆ) ಲಭಿಸುವವಲ್ಲಿ ಪ್ರಮುಖ ರೂವಾರಿಗಳು ಇವರು. ಮಾಜಿ ಸಚಿವರಾಗಿ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಮತ್ತು ಸಹಕಾರ ಕ್ಷೇತ್ರದಲ್ಲಿ ಅಪರಿಮಿತವಾದ ಸೇವೆಯನ್ನು ಸಲ್ಲಿಸಿದ ಮಹಾನ್ ಸಾಧಕರು. ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ ಅನೇಕ ವಿದ್ಯಾರ್ಥಿಗಳು ಭವಿಷ್ಯ ಕಟ್ಟಿಕೊಳ್ಳುವುದರ ಜೊತೆಗೆ ಸೇವೆ ಸಲ್ಲಿಸುವ ಶಿಕ್ಷಕ ವರ್ಗಕ್ಕೂ, ಕುಟುಂಬಗಳಿಗೆ ಅನ್ನದಾತರೆನಿಸಿಕೊಂಡ ಇವರು ಎಲ್ಲಾ ಕ್ಷೇತ್ರಗಳಲ್ಲಿಯೂ ಚಿರಸ್ಥಾಯಿಯಾದ ಸೇವೆ ಸಲ್ಲಿಸಿದ ಮಹಾನುಭಾವರು. ಇವರ ಹೆಸರನ್ನು ಕ್ರೀಡಾಂಗಣಕ್ಕೆ ನಾಮಕರಣ ಮಾಡಿ ಲೋಕಾರ್ಪಣೆ ಮಾಡಬೇಕು ಎಂಬುವುದು ಒತ್ತಾಸೆಯಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



**ಅರಣ್ಯ ಮಂತ್ರಿಗಳು, ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ್ ಖಂಡ್ರೆಯಾವಾಗಲೂ ಅಭಿವೃದ್ಧಿಪರ ನಿಲ್ಲುವವರು. ಶಾಸಕಾಂಗ ಮತ್ತು ಕಾರ್ಯಾಂಗ, ಸಾಮಾಜಿಕ ಜೀವನದಲ್ಲಿ ಕಪ್ಪು ಚುಕ್ಕೆ ಯಾವುದೇ ಕಳಂಕವಿಲ್ಲದೆ ಉತ್ತಮ ಆಡಳಿತಗಾರರೆಂದು ಪ್ರಖ್ಯಾತಿ ಪಡೆದವರು. ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾದ ಸಚಿವರಿಗೆ ಅಭಿನಂದನೆಗಳು.**
**–ಶಾಂತಯ್ಯ. ಬಿ ಸ್ವಾಮಿ, ಅಧ್ಯಕ್ಷರು, ದಿವಂಗತ ಜೆ ಹೆಚ್ ಪಟೇಲ್ ಜಿಲ್ಲಾ ಅಭಿಮಾನಿಗಳ ಸಂಘ ಬೀದರ್**

# ಬ್ರಿಡ್ಜ್ ರಸ್ತೆ: ಬಜೆಟ್‌ನಲ್ಲಿ ಅನುದಾನ ಮೀಸಲು

• **ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು**

ನಮ್ಮ ಸರ್ಕಾರದ ನಮ್ಮ ಲೋಕೋಪಯೋಗಿ ಇಲಾಖೆಯ ವತಿಯಿಂದ ವರ್ಷಾನುಗಟ್ಟಲೆ ಕಾರ್ಯಕ್ರಮ ನಡೆಯಿತು ಇರುತ್ತವೆ. ಈ ಹಿನ್ನೆಲೆಯಲ್ಲಿ ರಸ್ತೆ ಬ್ರಿಡ್ಜ್ ಗಳ ಕಟ್ಟಡಗಳು ಮಾಡಲಾಗುತ್ತದೆ ಇನ್ನೂ ಉಳಿದ ಕಾಮಗಾರಿಗಳು ಕೆಲಸ ಮಳೆ ನಂತರ ಕೆಲಸ ಮಾಡಲಾಗುತ್ತದೆ. ಈ ಬಾರಿ ಬಜೆಟ್ ನಲ್ಲಿ ಹೆಚ್ಚಿನ ಅನುದಾನ ನೀಡಲಾಗುತ್ತದೆ. ಎಂದು ಲೋಕೋಪಯೋಗಿ ಇಲಾಖೆ ಸಚಿವರು ಸತೀಶ್ ಜಾರಕಿಹೊಳಿ ಹೇಳಿದರು.



ತಾಲೂಕಿನ ಗುಂಜಳ್ಳಿ ಗ್ರಾಮದಲ್ಲಿ ಶ್ರೀ ವಾಲ್ಮೀಕಿ ನೂತನ ದೇವಸ್ಥಾನ ಹಾಗೂ ಸಾಮೂಹಿಕ ವಿವಾಹ ಕಾರ್ಯಕ್ರಮಕ್ಕೆ ಆಗಮಿಸಿದ್ದರು

ನಗರದ ಸರ್ಕ್ಯೂಟ್ ಹೌಸ್ ನಲ್ಲಿ ಮುಂಬಾಗದಲ್ಲಿ ಹೆಲಿಪ್ಯಾಡ್ ಸ್ಥಳದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಈಗಾಗಲೇ ಸರ್ಕಾರದ ನಮ್ಮ ಇಲಾಖೆಯಲ್ಲಿ ಹಲವು ಕಾರ್ಯಕ್ರಮ ನಡೆದಿದ್ದು. ಹೋದ ವರ್ಷ 2 ಸಾವಿರ ಕೋಟಿ ರೂಪಾಯಿ ವೆಚ್ಚದಲ್ಲಿ ಹಲವು ರಸ್ತೆಗಳು ಬ್ರಿಡ್ಜ್ ಗಳ ಮಾಡಿದ್ದು ಇನ್ನಷ್ಟು ಅಭಿವೃದ್ಧಿ ವಿಚಾರವನ್ನು

ಇಟ್ಟುಕೊಂಡು 2 ಸಾವಿರ ಕೋಟಿಗಿಂತ ಈ ಬಾರಿ ಹೆಚ್ಚಾಗಿ ರಸ್ತೆಗಳು ಬ್ರಿಡ್ಜ್‌ಗಳ ಕಟ್ಟಡಗಳು ನಮ್ಮ ಇಲಾಖೆಯ ವಿವಿಧ ಯೋಜನೆಗಳಿಗೆ ಅನುದಾನವನ್ನು ನೀಡಲಾಗುವುದು.

ಸಿಂಧನೂರು ವಿಧಾನ ಸಭಾ ಕ್ಷೇತ್ರ ಈ ಬಜೆಟಿನಲ್ಲಿ ವಿಶೇಷ ಅನುದಾನ ನೀಡಲಾಗಿದೆ ಎಂದು ಸುದ್ದಿಗಾರರ ಪ್ರಶ್ನೆ..?

ನಂತರ ಸುದ್ದಿಗಾರರ ಪ್ರಶ್ನೆ ಉತ್ತರಿಸಿದ ಸಚಿವರು ಈ ಬಾರಿ ಬಜೆಟಿನಲ್ಲಿ ಸಿಂಧನೂರು ವಿಧಾನ ಸಭಾ ಕ್ಷೇತ್ರಕ್ಕೆ ವಿಶೇಷ ಅನುದಾನ ನೀಡಲಾಗಿದ್ದು. ರಾಯಚೂರು ನಿಂದ ಸಿಂಧನೂರು ಈಗಾಗಲೇ ರಸ್ತೆ ಬರುತ್ತದೆ. ನ್ಯಾಷನಲ್ ಹೈವೇ ರಸ್ತೆ ನಿರ್ಮಾಣಕ್ಕೆ ಎಲ್ಲಾ ಶಾಸಕರುಗಳು ಅನುದಾನ ಡಿಮಾಂಡ್ ಮಾಡಿದ್ದಾರೆ. ನೋಡೋಣ ಎಲ್ಲಾ ರೀತಿಯ ಪರಿಶೀಲನೆ ಮಾಡುವುದಾಗಿ ಭರವಸೆ ನೀಡಿದರು.

ಪ್ರಶ್ನೆ: ಸಿಎಂ ಬದಲಾವಣೆ ವಿಚಾರದಲ್ಲಿ ನಿಮ್ಮ ನಿಲುವು ಏನು?

ಸಿಎಂ ಬದಲಾವಣೆ ವಿಚಾರವೇನಲ್ಲ ಈಗ ನಡೆದಿರುವ ಸಿಎಂ ಬದಲಾವಣೆ ವಿಚಾರ ರಾಜ್ಯದಲ್ಲಿ ಅನಾವಶ್ಯಕ ಚರ್ಚೆಗೆ ಗ್ರಾಸವಾಗಿದೆ. ಮುಂದೆ ನೋಡೋಣ ಏನಾಗುತ್ತದೆ ಎಂದರು.

ಸಿಂಧನೂರು ಟು ಸಿರುಗುಪ್ಪ ಬಹುಳ ವರ್ಷಗಳಿಂದ ರಸ್ತೆ ಅಭಿವೃದ್ಧಿ ಆಗ್ತಿಲ್ಲ ಎಂದು ಸುದ್ದಿಗಾರರ ಪ್ರಶ್ನೆ...?

ಅಲ್ಲಿ ಗುತ್ತಿಗೆದಾರ ಓಡಿ ಹೋಗಿದ್ದು. ಆಗಾಗಿ ಮತ್ತೊಮ್ಮೆ ಟೆಂಡರ್ ಕರೆದು ರಸ್ತೆ ಪ್ರಾರಂಭಿಸಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ. ಮಸ್ಕಿ ಶಾಸಕ ಬಸನಗೌಡ ಪಾಟೀಲ್ ತುರುವಿಹಾಳ ವಿಧಾನ ಪರಿಷತ್ ಸದಸ್ಯ ಶಾಸಕರು ಬಸನಗೌಡ ಬಾದರ್ಲಿ. ಆರ್ ಡಿಸಿಸಿ ಬ್ಯಾಂಕ್ ನಿರ್ದೇಶಕರು ಪಂಪನಗೌಡ ಬಾದರ್ಲಿ, ಮಸ್ಕಿ ಆದೇಶ ನಾಯಕ ಮಸ್ಕಿ ಸಿಂಧನೂರು ವಿಧಾನ ಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಅಧ್ಯಕ್ಷರುಗಳು ಹಾಗೂ ಪಕ್ಷದ ಕಾರ್ಯಕರ್ತರು ಸೇರಿದಂತೆ ಇತರರು ಉಪಸ್ಥಿತರಿದ್ದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)